ಸೆಪ್ಟೆಂಬರ್ 2018 ₹ 15/-

# ಯುಗರಶ್ಮಿ

ತ್ರೈಮಾಸಿಕ




- ಸ್ಥಿರವಾದ ಶಾಂತಿಸ್ಥಾಪನೆಯ ಮೂಲ ತತ್ವಗಳು
- ವೈಜ್ಞಾನಿಕ ಯುಗದಲ್ಲಿ ದೇವ ವಿಶ್ವಾಸ
- ಇಸ್ಲಾಮಿನ ಸಂದೇಶ
- ಮಹಿಳೆಯರೊಂದಿಗೆ ವರ್ತನೆ – ಇಸ್ಲಾಮ್ ಉಪದೇಶಗಳು
- ಹಝ್ರತ್ ಈಸಾ ಮಸೀಹರ[ಅ] ಮೃತ್ಯು ಬಗ್ಗೆ ಪ್ರಬಲ ಸಾಕ್ಷ್ಯಾಧಾರಗಳು
- ಇಸ್ಲಾಮ್ ಶಾಂತಿಯ ಧರ್ಮವೇ? ಭೀತಿಯ ಧರ್ಮವೇ?


“ಆಗ ರಭಸದಿಂದ ಸುರಿಯುವ ಮಳೆಯೊಂದಿಗೆ ನಾವು ಆಕಾಶದ ಕವಾಟಗಳನ್ನು ತೆರೆದೆವು. ಭೂಮಿಯೊಳಗಿಂದ ನೀರಿನ ಒರತೆಗಳು ಹರಿಯುವಂತೆಯೂ ನಾವು ಮಾಡಿದೆವು. ಆಗ ವಿಧಿಸಲ್ಪಟ್ಟ ಕಾರ್ಯಕ್ಕೋಸ್ಕರ (ಆಕಾಶದ) ನೀರು (ಭೂಮಿಯ ನೀರಿನೊಂದಿಗೆ) ಒಟ್ಟು ಸೇರಿತು..... ನಾವು ಅದನ್ನು ಒಂದು ದೃಷ್ಟಾಂತವಾಗಿ ಮಾಡಿರುವೆವು. ಆದರೆ ಉಪದೇಶವನ್ನು ಗ್ರಾಹ್ಯಮಾಡುವ ಯಾವನಾದರೂ ಇದ್ದಾನೆಯೇ?” (ಪವಿತ್ರ ಖುರ್‌ಆನ್ 54:12,13,16)

# ಯುಗರಶ್ಮಿ

## ವಿಷಯ ಸೂಚಿಕೆ

ಪುಟ


◊ ಭೂಕಂಪಗಳೂ ಜಲಪ್ರಳಯಗಳೂ 1
◊ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2
◊ ಸ್ಥಿರವಾದ ಶಾಂತಿಸ್ಥಾಪನೆಯ ಮೂಲ ತತ್ವಗಳು 3
◊ ವಿಶ್ವದಾಚೆ: ವೈಜ್ಞಾನಿಕ ಯುಗದಲ್ಲಿ ದೇವ ವಿಶ್ವಾಸ 9
◊ ಮದೀನದವರಿಂದ ಆಮಂತ್ರಣ 15
◊ ಮಹಿಳೆಯರೊಂದಿಗೆ ವರ್ತಿಸುವ ಬಗ್ಗೆ ಇಸ್ಲಾಮ್ ನೀಡುವ ಉಪದೇಶಗಳು 19
◊ ಶಿಲುಬೆಗೇರಿಸಿದ ಘಟನೆಯ ವಾಸ್ತವಿಕ ನಿರೂಪಣೆ 22
◊ ಇಸ್ಲಾಮ್ ಶಾಂತಿಯ ಧರ್ಮವೇ? ಅಥವಾ ಭೀತಿಯ ಧರ್ಮವೇ? 27
◊ ಯು.ಕೆ. ಅಹ್ಮದಿಯಾ ಜಲ್ಸಾ ಸಾಲಾನ ಬಗ್ಗೆ ಗಣ್ಯ ಅತಿಥಿಗಳ ಅಭಿಪ್ರಾಯಗಳು 31
◊ ಅಹ್ಮದಿಯಾ ಜಮಾಅತಿನ ಪ್ರಗತಿ 34
◊ ವಾರ್ತೆಗಳು 35
◊ ಪ್ರತಿಭೆ 38
◊ ನಿಧನ ವಾರ್ತೆಗಳು 39
◊ ಓದಿದ್ದು 40
◊ ಪಾಕಿಸ್ಥಾನದ ಪ್ರಧಾನಮಂತ್ರಿ ಇಮ್ರಾನ್ ಖಾನ್‌ರಿಗೆ ಒಂದು ಬಹಿರಂಗ ಪತ್ರ 42
◊ ಆರೋಗ್ಯ 43
◊ ಸಂಪಾದಕರಿಗೆ ಪತ್ರ 44

ಯು.ಕೆ. ಜಲ್ಸಾ ಸಾಲಾನ (ವಾರ್ಷಿಕ ಸಮ್ಮೇಳನ)ದ ದೃಶ್ಯ

ಮುಖಪುಟ ಚಿತ್ರ : ಸೆಂಟ್ರಲ್ ಅಹ್ಮದಿಯಾ ಮಸ್ಜಿದ್, ವಾ, ಘಾನ


ಬಿಡಿ ಪ್ರತಿ : ರೂ. 15/– ವಾರ್ಷಿಕ ಚಂದಾ : ರೂ. 60/– ಅಂಚೆ ಮೂಲಕ : ರೂ. 70/–



ವಿಳಾಸ : 10–23–1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು – 575 001.

بسم الله الرحمن الرحيم
نحمده ونصلي على رسوله الكريم

# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

ಸೆಪ್ಟೆಂಬರ್ 2018

ಆರಂಭ : 1975 | ಸಂಪುಟ : 35 | ತಬೂಕ್ : 1397 ಹಿಜರೀ ಶಮ್ಸೀ | ಸಂಚಿಕೆ : 1

## ಭೂಕಂಪಗಳೂ ಜಲಪ್ರಳಯಗಳೂ

“ನೆನಪಿಡಿರಿ, ಈ ಭೂಲೋಕದಲ್ಲಿ ಅನೇಕ ಭೂಕಂಪಗಳು ಘಟಿಸಲಿವೆಯೆಂಬ ಸೂಚನೆಯನ್ನು ದೇವನು ನನಗೆ ಅರುಹಿದ್ದಾನೆ. ನಾನು ಮುಂಚಿತವಾಗಿಯೇ ಹೇಳಿದ್ದಂತೆ, ಅಮೇರಿಕ ಮತ್ತು ಯುರೋಪು ಭೂಕಂಪಗಳಿಗೆ ಗುರಿಯಾಗಿವೆ. ಹಾಗೆಯೇ ಏಷ್ಯಾ ಸಹ ಈಡಾಗುವುದು ಖಂಡಿತ. ಅವುಗಳಲ್ಲಿ ಕೆಲವು ಪ್ರಳಯಕಾಲದ ಭಯಂಕರವಾದ ಸರ್ವನಾಶಕ್ಕೆ ಸಮಾನವಾಗಿರಬಹುದು. ಹಲವಾರು ಮಂದಿ ಮಡಿಯುವರು. ರಕ್ತದ ಹೊಳೆಗಳೇ ಹರಿಯುವುವು.

“ಮನುಷ್ಯನುಂಟಾದ ಕಾಲದಿಂದ ಇಷ್ಟರವರೆಗೆ ಸಂಭವಿಸದ ರೀತಿಯ ಅತ್ಯಂತ ಭಯಂಕರವಾದ ನಾಶವು ಉಂಟಾಗುವುದು. ಭೂಮಿಯ ನಾನಾ ಭಾಗಗಳು ಅಲ್ಲಿ ಎಂದೂ ಜನವಾಸವಿರಲಿಲ್ಲವೆಂದು ಭಾಸವಾಗುವಷ್ಟರ ಮಟ್ಟಿಗೆ ಅಡಿಮೇಲಾಗಿ ಸರ್ವನಾಶವಾಗುವುವು. ಅದರೊಂದಿಗೆ ಭೂಮಿಯಲ್ಲಿಯೂ ಆಕಾಶದಲ್ಲಿಯೂ ಭಯಾನಕವಾದ ನಾಶಗಳು ಘಟಿಸುವುವು. ವಿವೇಕಿಗಳಾದ ಜನರು ಇವುಗಳ ಅಸಾಮಾನ್ಯತೆಯನ್ನು ಗ್ರಹಿಸುವರು. ಅವುಗಳ ಕುರಿತು ವೈಜ್ಞಾನಿಕ ಹಾಗೂ ತತ್ವಶಾಸ್ತ್ರ ಗ್ರಂಥಮಾಲೆಗಳಿಂದ ಏನನ್ನೂ ಅರಿಯಲು ಸಾಧ್ಯವಾಗಲಿಕ್ಕಿಲ್ಲ. ಆಗ ಜನರು ಮುಂದೇನು ಸಂಭವಿಸಬಹುದೆಂದು ಕಳವಳಗೊಳ್ಳುವರು. ಅನೇಕರು ರಕ್ಷಿಸಲ್ಪಡುವರು; ಅನೇಕರು ನಾಶವಾಗುವರು. ಅಂತಹ ದಿನಗಳು ಅತಿ ಸಮೀಪವಾಗಿವೆ. ಅಷ್ಟೇಕೆ, ಬಾಗಿಲಲ್ಲೇ ಬಂದು ನಿಂತಿವೆ. ಒಂದು ಮಹಾನಾಶವನ್ನು ಈ ಲೋಕವು ಕಣ್ಣಾರೆ ಕಾಣಲಿದೆ. ಭೂಕಂಪಗಳು ಮಾತ್ರವಲ್ಲ, ಭೂಮಿಯಲ್ಲೂ ಆಕಾಶದಲ್ಲೂ ಇನ್ನೂ ಭಯಂಕರವಾದ ವಿಪತ್ತುಗಳು ಘಟಿಸುವುವು. ಮನುಷ್ಯರು ಪರಮಾತ್ಮನನ್ನು ಮರೆತು, ತಮ್ಮ ಪ್ರಯತ್ನ ಹಾಗೂ ಹೃದಯದ ಸಕಲ ಆಶಯಗಳನ್ನು ಕೇವಲ ಲೌಕಿಕ ಆಡಂಬರಗಳಿಗಾಗಿ ಮೀಸಲಾಗಿರಿಸಿದ ಕಾರಣದಿಂದಾಗಿ ಇವೆಲ್ಲ ಸಂಭವಿಸುವುವು..... ‘ಓರ್ವ ಪ್ರವಾದಿಯನ್ನು ಕಳುಹಿಸದೆ ನಾವು ಜನರನ್ನು ಶಿಕ್ಷಿಸುವುದಿಲ್ಲ’ ಎಂದು ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ (17:16) ಹೇಳಿರುವನು.

“ಪಶ್ಚಾತ್ತಾಪಪಡುವವರು ರಕ್ಷಣೆಯನ್ನು ಹೊಂದುವರು. ಆಪತ್ತುಗಳಿಗೆ ಭಯಪಡುವವರೊಡನೆ ಕರುಣೆ ತೋರಿಸಲ್ಪಡುವುದು. ಈ ಕಷ್ಟ ಪರಂಪರೆಗಳಿಗೆ ಗುರಿಯಾಗಲಾರೆವೆಂದು ನೀವು ಭಾವಿಸುವಿರಾ? ಅಥವಾ ಉಪಾಯದಿಂದ ಸ್ವಯಂ ರಕ್ಷಣೆ ಪಡೆಯಲು ನಿಮಗೆ ಸಾಧ್ಯವಿದೆಯೇ? ಎಂದಿಗೂ ಸಾಧ್ಯವಿಲ್ಲ. ಅಂದು ಮನುಷ್ಯರ ಎಲ್ಲ ಯೋಜನೆಗಳು ಪರಾಜಯಗೊಳ್ಳುವುವು. ಅಮೇರಿಕದಲ್ಲಿ ಮತ್ತು ಇನ್ನಿತರ ಭೂಖಂಡಗಳಲ್ಲಿ ಭೂಕಂಪಗಳಾದರೂ ನಿಮ್ಮ ರಾಜ್ಯವು ಸುರಕ್ಷಿತವಾಗಿಯೇ ಇರುವುದೆಂದು ಭಾವಿಸಬೇಡಿ. ಅದಕ್ಕಿಂತಲೂ ಅತ್ಯಂತ ದಾರುಣವಾದ ಕಷ್ಟನಷ್ಟಗಳಿಗೆ ನೀವು ಗುರಿಯಾಗಬೇಕಾದೀತು.

“ಎಲೈ ಯುರೋಪಿನ ಜನಾಂಗಗಳೇ, ನೀವು ಸುರಕ್ಷಿತರಲ್ಲ. ಎಲೈ ಏಷ್ಯಾದ ಜನಾಂಗಗಳೇ, ನೀವು ಸಹ ಸುರಕ್ಷಿತರಲ್ಲ. ಎಲೈ ದ್ವೀಪ ನಿವಾಸಿಗಳೇ, ನಿಮ್ಮ ಸ್ವಯಂ ಕಲ್ಪಿತ ದೇವರುಗಳು ಆ ದಿನದಂದು ನಿಮ್ಮ ರಕ್ಷಣೆಗೆ ಬರಲಾರರು. ದೊಡ್ಡ ದೊಡ್ಡ ನಗರಗಳು ನಾಶವಾಗುವುದನ್ನು ಮತ್ತು ಜನಭರಿತ ಪ್ರದೇಶಗಳು ಜನಶೂನ್ಯವಾಗುವ ಭವಿಷ್ಯದ ಚಿತ್ರವನ್ನು ನಾನು ಈಗಲೇ ಕಾಣುತ್ತಿದ್ದೇನೆ. ಆ ಸರ್ವಾಧಿಪತಿಯಾದ ದೇವನು ಒಂದು ದೀರ್ಘಕಾಲದವರೆಗೆ ಮೌನಾವಲಂಬಿಯಾಗಿದ್ದನು. ಅವನ ಸಮ್ಮುಖದಲ್ಲೇ

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

♦ ಅನ್ನದಾನ ಮಾಡುವುದು ಮತ್ತು ಪರಿಚಿತರಿಗೂ ಅಪರಿಚಿತರಿಗೂ ಸಲಾಂ ಹೇಳುವುದು ಉತ್ತಮವಾದ ಇಸ್ಲಾಮಿಕ ಕರ್ಮವಾಗಿದೆ. (ಬುಖಾರಿ)

♦ ಯಾರ ನಾಲಗೆಯಿಂದಲೂ ಕೈಯಿಂದಲೂ ಜನರು ಸುರಕ್ಷಿತರಾಗಿರುವರೋ, ಅವನು ಮಾಡುವ ಕರ್ಮ ಅತಿ ಉತ್ಕೃಷ್ಟವಾಗಿದೆ. (ಬುಖಾರಿ)

♦ ಏಕದೇವ ಸಿದ್ಧಾಂತದಲ್ಲಿ ಅಧಿಷ್ಠಿತವಾದ ಸರಳ ಜೀವಿತ ವ್ಯವಸ್ಥೆ ಅಲ್ಲಾಹನಿಗೆ ಅತಿ ಇಷ್ಟಕರವಾದ ಧರ್ಮವಾಗಿದೆ. (ಬುಖಾರಿ)

♦ ನಿಸ್ಸಂಶಯ, (ಅನುಷ್ಠಿಸಲು ಅತಿ) ಸೌಕರ್ಯವುಳ್ಳ ಧರ್ಮ ಇಸ್ಲಾಮಾಗಿದೆ. ಈ ಧರ್ಮದಲ್ಲಿ ತೀವ್ರತೆ ಕೈಗೊಳ್ಳುವ ಯಾರನ್ನೂ ಅದು ಪರಾಜಯ ಗೊಳಿಸದೆ ಇರಲಿಕ್ಕಿಲ್ಲ. ಆದುದರಿಂದ ನೀವು (ತೀವ್ರತೆಯನ್ನು ಬಿಟ್ಟು) ಮಿತವಾಗಿ ವರ್ತಿಸಿರಿ. (ಪೂರ್ಣವಾಗಿ ಅನುಷ್ಠಿಸಲು ಸಾಧ್ಯವಾಗದಿದ್ದರೆ ಪೂರ್ಣತೆಯೊಂದಿಗೆ) ಸಮೀಪಿಸಲು ಪ್ರಯತ್ನಿಸಿ, ಸಂತೋಷಿಸಿ (ಪೂರ್ಣವಾಗಿ ಅನುಷ್ಠಿಸಲು ಶಕ್ತಿ ಪ್ರದಾನ ಮಾಡಲು) ಬೆಳಿಗ್ಗೆ, ಸಂಜೆ ಮತ್ತು ರಾತ್ರಿ (ಅಲ್ಲಾಹನೊಡನೆ) ಸಹಾಯ ಯಾಚಿಸಿರಿ. (ಬುಖಾರಿ)

♦ ಸತ್ಕರ್ಮಗಳಿಗೆ ಪ್ರತಿಫಲ 10ರಿಂದ 700 ಪಟ್ಟು. ದುಷ್ಕರ್ಮಗಳಿಗೆ, ಅಲ್ಲಾಹನು ಕ್ಷಮಿಸದಿದ್ದರೆ ಅದಕ್ಕೆ ತುಲ್ಯವಾದುದು. (ಬುಖಾರಿ)

♦ ಸತ್ಯ ವಿಶ್ವಾಸಿಯ ಸ್ಥಿತಿ ಅದ್ಭುತ! ಎಲ್ಲವೂ ಅವನಿಗೆ ಗುಣಕರ. ಈ ವಿಶೇಷತೆ ಸತ್ಯವಿಶ್ವಾಸಿಗಲ್ಲದೆ ಇನ್ನ್ಯಾರಿಗೂ ಇಲ್ಲ. ಸಂತುಷ್ಟನಾಗುವಾಗ ಕೃತಜ್ಞತೆ ಸೂಚಿಸುತ್ತಾನೆ. ದುಃಖಿತನಾಗುವಾಗ ಸಹನೆ ಕೈಗೊಳ್ಳುವನು. ಆಗ ಅದು (ಸುಖ ದುಃಖ) ಅವನಿಗೆ ಗುಣಕರವಾಗುವುದು. (ಮುಸ್ಲಿಂ)

♦ ಒಬ್ಬ ಮುಸ್ಲಿಮನಿಗೆ ಆಯಾಸ, ರೋಗ, ದುಃಖ, ಕ್ಲೇಶ, ವ್ಯಥೆ ಇತ್ಯಾದಿ ಬಾಧಿಸಿದರೆ, ಅಥವಾ ಸಣ್ಣ ಒಂದು ಮುಳ್ಳು ತಾಗಿದರೆ ಆ ಕಾರಣದಿಂದ ಅಲ್ಲಾಹು ಅವನ ಪಾಪಗಳನ್ನು ಕ್ಷಮಿಸುವನು. (ಮುತ್ತಫಿಕ್ ಅಲೈಹಿ)

---

ಹೇಯವಾದ ಅನೇಕ ಅತಿ ದುಷ್ಕೃತ್ಯಗಳು ನಡೆಯುತ್ತಿದ್ದರೂ ಅವನು ಸುಮ್ಮಗಿದ್ದನು. ಆದರೆ ಈಗ ಅವನು ಭಯಂಕರ ಸ್ವರೂಪದಿಂದ ತನ್ನ ಮುಖವನ್ನು ತೋರಿಸುವನು. ಅಂತಹ ಕಾಲ ದೂರವಿಲ್ಲ! ಕಿವಿ ಇದ್ದವರು ಕೇಳಿಕೊಳ್ಳಲಿ! ನಾನು ಎಲ್ಲರನ್ನೂ ದೇವನ ರಕ್ಷಣೆಯಲ್ಲಿ ಒಂದುಗೂಡಿಸಲಿಕ್ಕೆ ಕೈಲಾದಷ್ಟು ಪ್ರಯತ್ನಿಸಿದೆ. ಆದರೆ ನಿಯತಿ ನಿಯಮ ಪೂರ್ಣಗೊಳ್ಳಬೇಕಲ್ಲವೇ? ನಾನು ಸತ್ಯವಾಗಿಯೂ ನಿಮ್ಮೊಡನೆ ಹೇಳುತ್ತೇನೆ: ಈ ರಾಜ್ಯದ ಸರದಿ ಸಹ ಸಮೀಪಿಸುತ್ತಿದೆ. ನೋಹಾ ಪ್ರವಾದಿಯ ಕಾಲ* ನಿಮ್ಮ ಕಣ್ಣ ಮುಂದೆ ಪ್ರತ್ಯಕ್ಷವಾಗುವುದು. ಪ್ರವಾದಿ ಲೂತ್‌ರವರ ರಾಜ್ಯದಲ್ಲಿ ಸಂಭವಿಸಿದ್ದನ್ನು** ನಿಮ್ಮ ಸ್ವಂತ ಕಣ್ಣುಗಳಿಂದ ಕಾಣುವಿರಿ. ಆದರೆ ಪರಮಾತ್ಮನು ತನ್ನ ಕೋಪವನ್ನು ನಿಧಾನವಾಗಿ ತೋರಿಸುವನು. ನಿಮ್ಮ ಮೇಲೆ ದಯಾದೃಷ್ಟಿಯನ್ನು ಬೀರುವಂತೆ ನೀವು ಅವನನ್ನು ಪಶ್ಚಾತ್ತಾಪದಿಂದ ಪ್ರಾರ್ಥಿಸಿರಿ. ದೇವನನ್ನು ಮರೆತವನು ಮನುಷ್ಯನಲ್ಲ; ಕ್ರಿಮಿಕೀಟಕ್ಕೆ ಸಮಾನನು. ದೇವನಿಗೆ ಯಾರು ಹೆದರುವುದಿಲ್ಲವೋ ಅವನು ಸತ್ತಂತೆಯೇ ಸರಿ; ಜೀವವಿಲ್ಲದವನು."

(ಹಖೀಖತುಲ್ ವಹ್ಯ್. 1907 ಪುಟ : 256–257)

– ಹಝ್ರತ್ ಮಿರ್ಝಾ ಗುಲಾಂ ಅಹ್ಮದ್

ಅಹ್ಮದಿಯಾ ಸಂಘಟನೆಯ ಸ್ಥಾಪಕರು

*ಭಯಂಕರ ಜಲಪ್ರಳಯ

**ಭೀಕರ ಭೂಕಂಪ

# ಸ್ಥಿರವಾದ ಶಾಂತಿಸ್ಥಾಪನೆಯ ಮೂಲ ತತ್ವಗಳು




ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನೇತಾರರೂ ಪಂಚಮ ಖಲೀಫರೂ ಆಗಿರುವ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಲಂಡನಿನಲ್ಲಿ ಜರಗಿದ 15ನೇ ನ್ಯಾಶನಲ್ ಪೀಸ್ ಸಿಂಪೋಸಿಯಂ (ಶಾಂತಿ ವಿಚಾರಗೋಷ್ಠಿ)ನಲ್ಲಿ ಮಾಡಿದ ಪ್ರಮುಖ ಭಾಷಣ.

*** ಅಸಮಾನತೆ, ತೀವ್ರ ದಾರಿದ್ರ್ಯ, ಜಾಗತಿಕ ಶಸ್ತ್ರಾಸ್ತ್ರ ವಾಣಿಜ್ಯ, ಅನ್ಯಾಯಭರಿತ ವಿದೇಶ ನೀತಿ ಮೊದಲಾದವುಗಳೇ ತೀವ್ರವಾದವನ್ನು ಉತ್ಪಾದಿಸುವ ಶಕ್ತಿಗಳೆಂದು ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಹೇಳಿದರು.**

*** ತೀವ್ರ ಬಲಪಂಥೀಯ ಶಕ್ತಿಗಳ ಎದ್ದೇಳುವಿಕೆ ಹಿಂದಿನ ಅಂಧಕಾರಮಯ ಕಾಲದ ನೆನಪನ್ನು ಮರುಕಳಿಸುವಂತೆ ಮಾಡುತ್ತದೆ ಎಂದು ಖಲೀಫರು ಹೇಳಿದರು.**

*** ಇಸ್ಲಾಮ್ ಧರ್ಮ ಎಲ್ಲ ವಿಧಗಳ ಉಗ್ರಗಾಮಿ ಚಟುವಟಿಕೆಗಳನ್ನು ಮತ್ತು ಸಂಘರ್ಷಗಳನ್ನು ತಿರಸ್ಕರಿಸುತ್ತದೆ ಎಂದು ಹಝ್ರತ್ ಖಲೀಫರು ಸಾಬೀತುಗೊಳಿಸಿದರಲ್ಲದೆ ಇಂದಿನ ಸಂಘರ್ಷಗಳು ಭೌಗೋಳಿಕವೂ ರಾಜಕೀಯವೂ ಆಗಿರುವ ಕಾರಣಗಳಿಂದ ಉದ್ಭವಿಸಿದವುಗಳೇ ಹೊರತು ಅವು ಧರ್ಮದೊಂದಿಗೆ ಸಂಬಂಧಿಸಿಲ್ಲ ಎಂದು ಹೇಳಿದರು.**

*** ಜಾಗತಿಕ ನಾಯಕರು ಸಮೀಪ ದೃಷ್ಟಿ ಬಾಧಿತರೂ ಸುರಂಗ ದೃಷ್ಟಿ ಬಾಧಿತರೂ ಆಗಿದ್ದಾರೆಂದು ಮುಸ್ಲಿಮ್ ನಾಯಕರು ಹೇಳಿದರು.**

*2018 ಮಾರ್ಚ್ ದಿನಾಂಕ 17ರಂದು ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ (ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ನಾಯಕರೂ ಪಂಚಮ ಖಲೀಫರೂ) ಯುನೈಟೆಡ್ ಕಿಂಗ್‌ಡಮಿನ ಅಹ್ಮದಿಯಾ ಮುಸ್ಲಿಮ್ ಜಮಾಅತ್ ವತಿಯಿಂದ ಲಂಡನಿನ ಬೈತುಲ್ ಫತೂಹ್ ಮಸ್‌ಜಿದ್‌ನಲ್ಲಿ ಜರಗಿಸಲಾದ 15ನೇ ನ್ಯಾಶನಲ್ ಪೀಸ್ ಸಿಂಪೋಸಿಯಂನಲ್ಲಿ ಪ್ರಮುಖ ಭಾಷಣ ಮಾಡಿದರು. 550 ಅಹ್ಮದಿಯೇತರರಾದ ಅತಿಥಿಗಳು ಭಾಗವಹಿಸಿದರು. ಅವರಲ್ಲಿ ಸರಕಾರದ ಸಚಿವರು, ವಿದೇಶ ರಾಯಭಾರಿಗಳು, ಪಾರ್ಲಿಮೆಂಟಿನ ಎರಡು ಸಭೆಗಳ ಸದಸ್ಯರು ಮತ್ತು ಇನ್ನಿತರ ಗಣ್ಯರು ಸೇರಿದ್ದರು. ಖಲೀಫರ ಭಾಷಣದ ಪೂರ್ಣರೂಪ ಹೀಗಿದೆ:*

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್ – ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ (ಪ್ರಾರಂಭಿಸುತ್ತೇನೆ). ಎಲ್ಲ ಆದರಣೀಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವಬರಕಾತುಹೂ – ನಿಮ್ಮ ಮೇಲೆ ಅಲ್ಲಾಹನ ಶಾಂತಿ ಮತ್ತು ಅನುಗ್ರಹಗಳು ಸುರಿಯಲ್ಪಡಲಿ.

ಮೊದಲನೆಯದಾಗಿ, ನಮ್ಮ ವಾರ್ಷಿಕ ಪೀಸ್ ಸಿಂಪೋಸಿಯಂನಲ್ಲಿ ಭಾಗವಹಿಸಲು ನಮ್ಮೊಂದಿಗೆ ಸೇರಿರುವ ಬಗ್ಗೆ ತಮಗೆಲ್ಲರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಕಳೆದ 15 ವರ್ಷಗಳಿಂದ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಈ ಪೀಸ್ ಸಿಂಪೋಸಿಯಂವನ್ನು ಜಾಗತಿಕ ಶಾಂತಿಯನ್ನು ಪ್ರೋತ್ಸಾಹಿಸಲಿಕ್ಕೋಸ್ಕರ ಜರಗಿಸಿ ಅದರ ಆತಿಥ್ಯವನ್ನು ನಿರ್ವಹಿಸುತ್ತಿದೆ. ನಾವು ಪ್ರತಿ ವರ್ಷ ಈ ಸಮಾರಂಭವನ್ನು ಜರಗಿಸುವುದರ ಪ್ರಯೋಜನವಾದರೂ ಏನು? ಮುಸ್ಲಿಮ್ ದೇಶಗಳಲ್ಲಿಯೂ ಇತರ ಸ್ಥಳಗಳಲ್ಲಿಯೂ ಈ ಕಾಲಾವಧಿಯಲ್ಲಿ ಶಾಂತಿ ಸ್ಥಾಪನೆಗೆ ಸಂಬಂಧಿಸಿ ಸುಧಾರಣೆಯಾಗಿಲ್ಲ; ಮಾತ್ರವಲ್ಲ ಅದರ ಸ್ಥಿತಿ ಹೆಚ್ಚು ಕೆಟ್ಟುಹೋಗಿದೆ ಎಂದು ನಿಮ್ಮ ಪೈಕಿ ಕೆಲವರು ಪ್ರಶ್ನಿಸಬಹುದು. ಲೋಕದ ಬಹುತೇಕ ಪ್ರದೇಶಗಳಲ್ಲಿ ಒಡಕು, ದ್ವೇಷ ಮತ್ತು ಅನ್ಯಾಯ ವರ್ಧಿಸಿವೆ. ಸಮಾಜಗಳು ಧ್ರುವೀಕರಣಗೊಂಡಿವೆ. ಯುದ್ಧಗಳು ಸಂಭವಿಸಿವೆ. ದೇಶಗಳು ಪರಸ್ಪರ ಬೆದರಿಸುತ್ತಿವೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿಯೂ ಅಭಿವೃದ್ಧಿಶೀಲ ದೇಶಗಳಲ್ಲಿಯೂ ಅಸಮಾನತೆ ವರ್ಧಿಸಿದೆ.

ಇಂತಹ ಪರಿಸ್ಥಿತಿಯಲ್ಲಿ ನಿಮ್ಮ ಪ್ರಶ್ನೆ ಸಮಂಜಸವೇ ಆಗಿದೆ. ಆದರೆ ಲೋಕದ ಎಲ್ಲ ಭಾಗಗಳಲ್ಲಿ ಎಲ್ಲ ಜನರನ್ನು, ಬಡವರನ್ನೂ ಶ್ರೀಮಂತರನ್ನೂ ಶಕ್ತಿಶಾಲಿಗಳನ್ನೂ ಮರ್ದಿತರನ್ನೂ ಧಾರ್ಮಿಕ ಮನೋಭಾವದವರನ್ನೂ ಧರ್ಮರಹಿತರನ್ನೂ ಶಾಂತಿ ಮತ್ತು ನ್ಯಾಯಪಾಲನೆ ಬಗ್ಗೆ ಉತ್ತೇಜಿಸಲು ಪ್ರಯತ್ನಿಸಬೇಕೆಂದು ನಮ್ಮ ಧರ್ಮ ನಮ್ಮೊಂದಿಗೆ ಆವಶ್ಯಪಡುತ್ತದೆ. ಆದುದರಿಂದ ಮಾನವರೆಲ್ಲರೂ ಮಾನವೀಯ ಮೌಲ್ಯಗಳನ್ನು ಅರಿತುಕೊಂಡು ಅವುಗಳನ್ನು ಗೌರವಿಸಲು ಅವರಿಗಿರುವ ಕರ್ತವ್ಯವನ್ನು ಮನಗಾಣುವಂತೆ ಮಾಡಲು ನಾವು ನಮ್ಮ ಪ್ರಯತ್ನವನ್ನು ಮುಂದುವರಿಸುವೆವು. ಇಸ್ಲಾಮ್ ಧರ್ಮ ತತ್ವಗಳ ಪ್ರಕಾರ ನಾವು ನಮ್ಮ ಸೃಷ್ಟಿಕರ್ತನಿಗೆ ಸಂಬಂಧಿಸಿ ನಮ್ಮ ಕರ್ತವ್ಯಗಳನ್ನು ಈಡೇರಿಸಬೇಕಾಗಿದೆ ಮತ್ತು ನಮ್ಮ ಸಹಜೀವಿಗಳ ಹಕ್ಕುಗಳನ್ನು ಈಡೇರಿಸಿ ಕೊಡಬೇಕಾಗಿದೆ.

ಈ ಸಂಕ್ಷಿಪ್ತ ಮುನ್ನುಡಿಯ ನಂತರ ಈ ಪ್ರಕ್ಷುಬ್ಧ ಕಾಲಘಟ್ಟದಲ್ಲಿ ನನ್ನ ಅಭಿಪ್ರಾಯದಲ್ಲಿ ಅತ್ಯಂತ ಮುಖ್ಯವಾಗಿರುವ ಕೆಲವು ವಿಷಯಗಳ ಬಗ್ಗೆ ಮಾತನಾಡಲು ಈ ಸಂದರ್ಭವನ್ನು ಬಳಸಿಕೊಳ್ಳುತ್ತೇನೆ.

ಇಂದಿನ ಕಾಲದಲ್ಲಿ ಲೋಕದ ಜನರ ಜೀವಿತವನ್ನು ಉತ್ತಮಗೊಳಿಸಲು ಪ್ರಮುಖ ಶಕ್ತಿಶಾಲಿ ದೇಶಗಳು ಮತ್ತು ಅಂತರ್‍ರಾಷ್ಟ್ರೀಯ ಸಂಸ್ಥೆಗಳು ಕೆಲವು ಯೋಜನೆಗಳನ್ನು ರೂಪಿಸುವುದನ್ನು ಕಾಣುತ್ತಿದ್ದೇವೆ. ಇತ್ತೀಚೆಗೆ ರಾಜಕಾರಣಿಗಳು ಮತ್ತು ಬುದ್ಧಿ ಜೀವಿಗಳು ಚರ್ಚೆ ಮಾಡಿದ ಮತ್ತು ಪ್ರಚಾರ ಮಾಡಿದ ವಿಷಯ ಜಾಗತಿಕ ಹವಾಮಾನದ ಬದಲಾವಣೆ ಮತ್ತು ವಿಶಿಷ್ಟವಾಗಿ ಕಾರ್ಬನ್ ಆಮ್ಲಗಳ ವಿಸರ್ಜನೆಯನ್ನು ತಗ್ಗಿಸುವ ಬಗ್ಗೆಯಾಗಿದೆ. ಪರಿಸರದ ಸಂರಕ್ಷಣೆ ಮತ್ತು ನಮ್ಮ ಭೂಮಿಯ ಸಂರಕ್ಷಣೆ ನಿಶ್ಚಯವಾಗಿಯೂ ಅತ್ಯಂತ ಅಮೂಲ್ಯವೂ ಶ್ರೇಷ್ಠವೂ ಆಗಿರುವ ವಿಷಯಗಳಾಗಿವೆ. ಆದರೆ ಅದೇ ಸಮಯದಲ್ಲಿ ಅಭಿವೃದ್ಧಿ ಹೊಂದಿದ ದೇಶಗಳು ಮತ್ತು ವಿಶಿಷ್ಟವಾಗಿ ಅವುಗಳ ನಾಯಕರು ಮನವರಿಕೆ ಮಾಡಬೇಕಾದುದೇನೆಂದರೆ ಅದೇ ರೀತಿ ತುರ್ತಾಗಿ ಗಮನಿಸಬೇಕಾದ ಬೇರೆ ವಿಷಯಗಳೂ ಇವೆ.

ವಿಶ್ವದ ಅತ್ಯಂತ ಬಡದೇಶಗಳಲ್ಲಿ ವಾಸಿಸುವ ಜನರಿಗೆ ಪರಿಸರದ ಬಗ್ಗೆ ಕಾಳಜಿ ಇಲ್ಲ ಮತ್ತು ಕಾರ್ಬನ್ ಆಮ್ಲ ವಿಸರ್ಜನೆಯ ಅಂಕಿ ಅಂಶಗಳ ಬಗ್ಗೆ ಇತ್ತೀಚೆಗಿನ ವರದಿ ಬಗ್ಗೆ ಆಸಕ್ತಿಯೂ ಇರುವುದಿಲ್ಲ. ಅವರು ಪ್ರತಿದಿನ ಬೆಳಗ್ಗೆ ಎದ್ದೇಳುವುದು ಈ ದಿನ ತಮ್ಮ ಮಕ್ಕಳಿಗೆ ಆಹಾರ ಒದಗಿಸುವುದು ಹೇಗೆ ಎಂಬ ಚಿಂತೆಯೊಂದಿಗಾಗಿದೆ. ಅವರ ಆರ್ಥಿಕ ಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಅವರ ದಾರಿದ್ರ್ಯ ನಾವು ಮನವರಿಕೆ ಮಾಡಿಕೊಳ್ಳುವುದಕ್ಕೆ ಅತೀತವಾಗಿದೆ. ಉದಾಹರಣೆಗೆ, ಹಲವು ದೇಶಗಳ ಸ್ಥಿತಿ ಹೇಗಿದೆ ಎಂದರೆ ಅಲ್ಲಿನ ನಾಗರಿಕರಿಗೆ ಶುದ್ಧವಾದ ಕುಡಿಯುವ ನೀರು ಲಭಿಸುವುದಿಲ್ಲ. ಅವರು ಕೊಳಕು ಹೊಂಡಗಳ ನೀರನ್ನು ಬಳಸಲು ನಿರ್ಬಂಧಿತರಾಗುತ್ತಾರೆ. ಅದು ಸಹ ಸುಲಭವಾಗಿ ಲಭಿಸುವುದಿಲ್ಲ. ಮಹಿಳೆಯರು ಮತ್ತು ಮಕ್ಕಳು ಪ್ರತಿದಿನ ಹಲವು ಮೈಲುಗಳಷ್ಟು ದೂರ ಹೋಗಿ ತಮ್ಮ ಕುಟುಂಬಕ್ಕೆ ಆವಶ್ಯಕವಾದ ನೀರನ್ನು ದೊಡ್ಡ ಪಾತ್ರೆಗಳಲ್ಲಿ ತುಂಬಿಸಿಕೊಂಡು ತಲೆಯಲ್ಲಿ ಹೊತ್ತುಕೊಂಡು ತರುತ್ತಿದ್ದಾರೆ.

ನಾವು ಇಂತಹ ಕಷ್ಟಗಳನ್ನು ಅನ್ಯ ಜನರ ಸಮಸ್ಯೆಗಳೆಂದು ಪರಿಗಣಿಸಬಾರದು. ಇಂತಹ ದಾರಿದ್ರ್ಯದ ಪರಿಣಾಮ ಲೋಕದ ಮೇಲುಂಟಾಗುವುದೆಂದು ನಾವು ಮನವರಿಕೆ ಮಾಡಿಕೊಳ್ಳಬೇಕು ಮತ್ತು ಜಾಗತಿಕ ಶಾಂತಿಯನ್ನೂ ಭದ್ರತೆಯನ್ನೂ ಅದು ಬಾಧಿಸುವುದೆಂದು ತಿಳಿಯಬೇಕು. ಆ ದೇಶಗಳ ಮಕ್ಕಳು ತಮ್ಮ ಹಗಲುಗಳನ್ನು ನೀರನ್ನು ಸಂಗ್ರಹಿಸಲು ವಿನಿಯೋಗಿಸಲು ನಿರ್ಬಂಧಿತರಾಗುವ ಕಾರಣ ಅವರಿಗೆ ಶಾಲೆಗೆ ಹೋಗಲು ಸಾಧ್ಯವಾಗುವುದಿಲ್ಲ ಮತ್ತು ಯಾವುದೇ ರೀತಿಯ ವಿದ್ಯಾಭ್ಯಾಸ ಗಳಿಸಲಾಗುವುದಿಲ್ಲ. ಅನಕ್ಷರತೆ ಮತ್ತು ದಾರಿದ್ರ್ಯದ ವಿಷಮ ವೃತ್ತದಲ್ಲಿ ಅವರು ಸಿಲುಕಿಕೊಂಡಿದ್ದು ಅದು ಕೊನೆಗೊಳ್ಳುವ ಹಾಗೆ ಕಾಣಿಸುವುದಿಲ್ಲವಾದುದರಿಂದ ಅದು ಸಮಾಜಕ್ಕೆ ಹಾನಿಕರವಾಗುತ್ತದೆ. ಇಂದಿನ ಕಾಲದಲ್ಲಿ ಇಂತಹ ಜನರ ಯಾತನೆ ಆಧುನಿಕ ತಂತ್ರಜ್ಞಾನದ ಮೂಲಕ ವರ್ಧಿಸುವಂತಾಗಿದೆ. ಯುದ್ಧ ಪೀಡಿತ ದೇಶಗಳ ಜನರು ಮತ್ತು ಶೋಷಿತ ಪ್ರದೇಶಗಳ ಜನರು ಆಧುನಿಕ ತಂತ್ರಜ್ಞಾನದ ಮೂಲಕ ಅಭಿವೃದ್ಧಿ ಹೊಂದಿದ ದೇಶಗಳ ಜನರು ಜೀವಿಸುವ ಸುಖ ಸಮೃದ್ಧ ಸ್ಥಿತಿಯನ್ನೂ ಅವರಿಗೆ ಪ್ರಗತಿ ಹೊಂದಲು ಸಾಧ್ಯವಿರುವುದನ್ನೂ ಈ ಬಡ ಜನರು ಕಾಣುತ್ತಾರೆ. ಅವರು ತಮ್ಮ ಮತ್ತು ಅವರ ಮಧ್ಯೆ ಇರುವ ಬೃಹತ್ತಾದ ವ್ಯತ್ಯಾಸವನ್ನು ಕಂಡು ಬೇಗುದಿಗೊಂಡು ಆಂತರಿಕ ಕಲಹಗಳಲ್ಲಿ ನಿರತರಾಗುತ್ತಾರೆ. ಇಂತಹ ಜನರನ್ನು ಉಗ್ರಗಾಮಿಗಳು ವಶಪಡಿಸಿಕೊಂಡು ಆ ಬಡಜನರಿಗೆ ಆರ್ಥಿಕ ಸಹಾಯಗಳನ್ನು ನೀಡುತ್ತಾರೆ ಮತ್ತು ಅವರ ಕುಟುಂಬಕ್ಕೆ ಉತ್ತಮ ಜೀವಿತ ಒದಗಿಸುವುದಾಗಿ ವಾಗ್ದಾನ ಮಾಡುತ್ತಾರೆ. ಹಾಗೆಯೇ, ಅವಿದ್ಯಾವಂತ ತರುಣರನ್ನು ಉಗ್ರಗಾಮಿಗಳು ಸುಲಭವಾಗಿ ಮನವೊಲಿಸಿ ಅವರು ಭಯೋತ್ಪಾದಕರಾಗುವಂತೆ ಮಾಡುತ್ತಾರೆ. ಈ ಬಡ ಜನರು ವಾಸಿಸುವ ದೇಶದ ಆಡಳಿತೆಗಾರರು ತಮ್ಮ ದೇಶದ ಜನರ ಹಿತಕ್ಕಾಗಿ ಏನೂ ಮಾಡದುದನ್ನು ಉಗ್ರಗಾಮಿಗಳು ತಮ್ಮ ಹಿತಕ್ಕೆ ಸದುಪಯೋಗಪಡಿಸುತ್ತಾರೆ.

ಅತ್ಯಂತ ಖೇದಕರವಾದುದೇನೆಂದರೆ, ಯುದ್ಧ ಪೀಡಿತ ಅಥವಾ ಶೋಷಿತ ದೇಶಗಳ ಹೆಚ್ಚಿನ ಆಡಳಿತೆಗಾರರು ತಮ್ಮ ಸ್ವಂತ ಸ್ಥಾನವನ್ನೂ ಅಧಿಕಾರವನ್ನೂ ಸಂರಕ್ಷಿಸುವ ಕಾಳಜಿ ಹೊಂದಿರುತ್ತಾರೆ. ಅವರಿಗೆ ಜನರ ಕಷ್ಟಗಳನ್ನು ನಿವಾರಿಸುವ ಬಗ್ಗೆ ಯಾವ ಕಾಳಜಿಯೂ ಇರುವುದಿಲ್ಲ. ಇದರ ಪರಿಣಾಮವಾಗಿ ನಿರ್ಗತಿಕರು ತಮ್ಮ ದೇಶದ ಭ್ರಷ್ಟ ನಾಯಕರನ್ನು ತಾತ್ಸಾರ ಭಾವದಿಂದ ಕಾಣುತ್ತಾರೆ ಮತ್ತು ಲೋಕದ ಮಹಾಶಕ್ತಿಶಾಲಿ ದೇಶಗಳನ್ನು ತಮ್ಮ ಶತ್ರುಗಳಾಗಿ ಕಾಣುತ್ತಾರೆ. ನಾವು ಇದರ ಭಯಾನಕ ಪರಿಣಾಮಗಳನ್ನು ಮುಸ್ಲಿಮ್ ದೇಶಗಳಲ್ಲಿಯೂ ಕಾಣುವುದು ವಿಷಾದಕರವಾಗಿದೆ. ತಮ್ಮ ಮೂಲ ದೇಶಗಳ ದುರವಸ್ಥೆಯನ್ನು ವೀಕ್ಷಿಸಿದ ಅಭಿವೃದ್ಧಿ ಹೊಂದಿದ ದೇಶದಲ್ಲಿ ವಾಸಿಸುವ ಕೆಲವು ತರುಣರು ಉಗ್ರಗಾಮಿಗಳಾಗಿ ಪರಿವರ್ತನೆ ಹೊಂದಿ ಪಶ್ಚಿಮದ ದೇಶಗಳಲ್ಲಿ ಭಯಾನಕ ಭಯೋತ್ಪಾದಕ ಕೃತ್ಯಗಳನ್ನು ಮಾಡಿದ್ದಾರೆ.

ಆದುದರಿಂದ ನಾನು ದೃಢವಾಗಿ ನಂಬುವುದೇನೆಂದರೆ, ನಾವು ನಮ್ಮ ಲೋಕವನ್ನು ಸಂರಕ್ಷಿಸಲು ಇಚ್ಛಿಸುತ್ತೇವಾದರೆ ಮತ್ತು ನಮ್ಮ ಮುಂದಿನ ಪೀಳಿಗೆಗೆ ಸದವಕಾಶಗಳ ಬಳುವಳಿ ನೀಡಲು ಬಯಸುತ್ತೇವಾದರೆ ಅಭಿವೃದ್ಧಿಶೀಲ ದೇಶಗಳ ಜೀವನ ಮಟ್ಟವನ್ನು

ವರ್ಧಿಸಲು ಪ್ರತಿಯೊಂದು ರೀತಿಯ ಪ್ರಯತ್ನ ಮಾಡುವುದು ಆವಶ್ಯಕವಾಗಿದೆ. ಬಡ ದೇಶಗಳನ್ನು ತಾತ್ಸಾರ ಭಾವನೆಯಿಂದ ನೋಡಬಾರದು. ಅವರು ನಮ್ಮ ಕುಟುಂಬದ ಭಾಗವಾಗಿರುವ ಸಹೋದರರೂ ಸಹೋದರಿಯರೂ ಎಂದು ಗಣಿಸಬೇಕು. ಅಭಿವೃದ್ಧಿಶೀಲ ದೇಶಗಳು ತಮ್ಮ ಕಾಲುಗಳಲ್ಲಿ ತಾವೇ ನಿಲ್ಲುವಂತೆ ಮಾಡಲು ಸಹಾಯ ಮಾಡಿ, ಆ ದೇಶದ ಜನರಿಗೆ ಸದವಕಾಶಗಳನ್ನೂ ಪ್ರತೀಕ್ಷೆಯನ್ನೂ ನೀಡಿ ನಾವು ವಾಸ್ತವಿಕವಾಗಿ ನಮಗೆಯೇ ನೆರವು ನೀಡುತ್ತೇವೆ ಮತ್ತು ಲೋಕದ ಭವಿಷ್ಯತ್ ಕಾಲವನ್ನು ಸಂರಕ್ಷಿಸುತ್ತಿದ್ದೇವೆ. ಹಾಗೆ ಮಾಡದಿದ್ದರೆ, ಅಭಿವೃದ್ಧಿಶೀಲ ದೇಶಗಳ ದಾರಿದ್ರ್ಯ ಲೋಕದ ಇತರ ದೇಶಗಳನ್ನು ಈಗಾಗಲೇ ನಕಾರಾತ್ಮಕವಾಗಿ ಬಾಧಿಸುತ್ತಿರುವುದಾಗಿ ನಾವು ಕಾಣುತ್ತಿದ್ದೇವೆ.

ಇನ್ನೊಂದು ವಿಷಯವೇನೆಂದರೆ, ಇತ್ತೀಚೆಗಿನ ಭಯೋತ್ಪಾದಕ ಆಕ್ರಮಣಗಳು ಮತ್ತು ಪಶ್ಚಿಮದ ದೇಶಗಳಿಗೆ ವಲಸೆಗಾರರು ಹೆಚ್ಚಾಗಿ ಆಗಮಿಸಿದ ಕಾರಣದಿಂದ ಪಶ್ಚಿಮದ ಅನೇಕ ದೇಶಗಳಲ್ಲಿ ಭಯಾನಕವಾಗಿ ರಾಷ್ಟ್ರೀಯತೆಯ ಭಾವನೆಗಳು ವರ್ಧಿಸುತ್ತಿದ್ದು ಹಿಂದಿನ ಅಂಧಕಾರಮಯ ಕಾಲದ ನೆನಪು ಮರುಕಳಿಸುವಂತೆ ಮಾಡುತ್ತಿದೆ. ಅತ್ಯಂತ ಕಳವಳಕರವಾಗಿರುವುದು ತೀವ್ರ ಬಲಪಂಥೀಯ ಗುಂಪುಗಳು ಹೆಚ್ಚು ಹೆಚ್ಚಾಗಿ ವಾಚಾಳಿಗಳಾಗುತ್ತಿದ್ದಾರೆ; ಅವರ ಸಂಖ್ಯೆ ವರ್ಧಿಸುತ್ತಿದೆ; ಅವರು ರಾಜಕೀಯವಾಗಿ ಸಹ ಲಾಭಗಳಿಸಿದ್ದಾರೆ. ಇಂತಹ ಜನರು ಸಹ ಉಗ್ರಗಾಮಿಗಳಾಗಿದ್ದು ಪಶ್ಚಿಮದ ಸಮಾಜವನ್ನು ವಿಷಮಯವನ್ನಾಗಿ ಮಾಡಲು ಬಯಸುತ್ತಿದ್ದಾರೆ. ಭಿನ್ನ ವರ್ಣಗಳನ್ನು ಅಥವಾ ಭಿನ್ನ ವಿಶ್ವಾಸಗಳನ್ನು ಹೊಂದಿದವರ ವಿರುದ್ಧ ಗುಂಪುಗಳನ್ನು ಉದ್ರೇಕಿಸುತ್ತಿದ್ದಾರೆ.

ವಾಕ್ಚಾತುರ್ಯವುಳ್ಳ ಕೆಲವು ಶಕ್ತಿಶಾಲಿ ಜಾಗತಿಕ ನಾಯಕರ ಭಾಷಣಗಳು ರಾಷ್ಟ್ರೀಯತೆ ಭರಿತವಾಗುತ್ತವೆ ಮತ್ತು ರಣೋತ್ಸಾಹದಿಂದ ತುಂಬಿದ್ದು ಅವರು ತಮ್ಮ ದೇಶದ ನಾಗರಿಕರಿಗೆ ಬೇರೆ ಎಲ್ಲರಿಗಿಂತಲೂ ಮೇಲೆ ಅಧಿಕಾರ ನೀಡಲು ಇಚ್ಛಿಸುತ್ತಿದ್ದಾರೆ. ಸರಕಾರಗಳು ಮತ್ತು ರಾಜಕೀಯ ನಾಯಕರು ತಮ್ಮ ದೇಶದ ಜನರ ಹಕ್ಕುಗಳನ್ನು ಸಂರಕ್ಷಿಸುವ ಹೊಣೆಗಾರಿಕೆಯನ್ನು ಹೊಂದಿದ್ದಾರೆ ಎನ್ನುವುದನ್ನು ನಾನು ಅಲ್ಲಗಳೆಯುವುದಿಲ್ಲ. ಅಂತಹ ನಾಯಕರು ನ್ಯಾಯಪೂರ್ಣವಾಗಿ ವರ್ತಿಸುವವರಾದರೆ, ಅನ್ಯರ ಹಕ್ಕುಗಳ ಮೇಲೆ ಅತಿಕ್ರಮಣ ಮಾಡುವುದಿಲ್ಲವಾದರೆ ಅವರು ತಮ್ಮ ನಾಗರಿಕರ ಜೀವಿತವನ್ನು ಉತ್ತಮ ಪಡಿಸುವವರಾದರೆ ಅದು ಮಹತ್ತಾದ ಸದ್ಗುಣವಾಗಿದೆ. ಆದರೆ ಸ್ವಾರ್ಥ ಉದ್ದೇಶದ ಧೋರಣೆಗಳನ್ನು ರೂಪಿಸುವುದು, ದುರಾಶೆಯಿಂದ ಅನ್ಯರ ಹಕ್ಕುಗಳನ್ನು ಅಪಹರಿಸುವುದು ತಪ್ಪು ಕೆಲಸಗಳಾಗಿವೆ ಮತ್ತು ಲೋಕದಲ್ಲಿ ವಿರೋಧ ಮತ್ತು ಒಡಕಿನ ಬೀಜ ಬಿತ್ತುವ ಮಾರ್ಗವೂ ಆಗಿದೆ.

ಇನ್ನೊಂದು ವಿಷಯ ಅಂತರಾಷ್ಟ್ರೀಯ ಶಸ್ತ್ರಾಸ್ತ್ರಗಳ ವಾಣಿಜ್ಯವಾಗಿದೆ. ಇಂದಿನ ಕಾಲದಲ್ಲಿ ಲೋಕವು ಹಿಂದೆಂದಿಗಿಂತಲೂ ಪರಿಷ್ಕೃತವೆಂದು ಗಣಿಸುತ್ತಾರೆ. ಆದರೆ 2018ರಲ್ಲಿ ಯುದ್ಧ ಶಸ್ತ್ರಗಳಿಂದ ಧ್ವಂಸಗೊಳಿಸಲಾದ ಅನೇಕ ದೇಶಗಳಿವೆ. ಈ ಕೃತ್ಯಗಳನ್ನು ಅಮಾನವೀಯ ಕೃತ್ಯಗಳೆಂದು ವರ್ಗೀಕರಿಸಬಹುದಾಗಿದೆ. ಸಿರಿಯಾ, ಇರಾಖ್ ಮತ್ತು ಯಮನ್ ದೇಶಗಳಲ್ಲಿ ಸರಕಾರದ ಸೈನ್ಯ, ವಿದ್ರೋಹಿ ಸೈನ್ಯ ಮತ್ತು ಭಯೋತ್ಪಾದಕರ ಗುಂಪುಗಳು ಪರಸ್ಪರ ಹೋರಾಡುತ್ತಿವೆ. ಅವರೆಲ್ಲರಿಗೂ ವಿವಿಧ ಹಿತಾಸಕ್ತಿಗಳಿದ್ದರೂ ಒಂದು ವಿಷಯದಲ್ಲಿ ಸಮಾನತೆ ಇದೆ. ಅವರೆಲ್ಲರೂ ಬಳಸುವ ಬಹುತೇಕ ಆಯುಧಗಳು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಉತ್ಪಾದಿಸಲ್ಪಟ್ಟವುಗಳಾಗಿವೆ. ಬಹಿರಂಗವಾಗಿಯೂ ಅಹಂಭಾವದಿಂದಲೂ ಪ್ರಮುಖ ಶಕ್ತಿಶಾಲಿ ದೇಶಗಳು ನಿರಪರಾಧಿ ಜನರನ್ನು ಕೊಲ್ಲಲು, ಅಂಗವಿಕಲ ಗೊಳಿಸಲು, ಹಿಂಸಾಚಾರ ನಡೆಸಲು ಆಯುಧಗಳನ್ನು ಮಾರಾಟ ಮಾಡುತ್ತಾ ಇವೆ.

ಖೇದಕರವಾದುದೇನೆಂದರೆ, ಇಂತಹ ದೇಶಗಳು ತಮ್ಮ ದೇಶದ ಆರ್ಥಿಕ ವ್ಯವಸ್ಥೆಯನ್ನು ಉತ್ತೇಜಿಸಲು ಮತ್ತು ತಮ್ಮ ಭಂಡವಾಳ ವರ್ಧಿಸಲು ಮಾತ್ರ ತಮ್ಮ ಶ್ರದ್ಧೆಯನ್ನು ಕೇಂದ್ರೀಕರಿಸುತ್ತವೆ. ಅವರು ಅದರ ದುಷ್ಪರಿಣಾಮಗಳ ಬಗ್ಗೆ ಯೋಚಿಸುವುದೇ ಇಲ್ಲ. ಅವರು ವಿನಾಶಕಾರಿ ಆಯುಧಗಳನ್ನು ಮಾರಾಟ ಮಾಡಲು ಅತ್ಯಂತ ಹೆಚ್ಚು ಮೊತ್ತದ ಕಂಟ್ರಾಕ್ಟನ್ನು ಪಡೆಯಲು ಇಚ್ಛಿಸುತ್ತಾರೆ. ಅವರ ಆಯುಧಗಳನ್ನು ಪ್ರಯೋಗಿಸಿದರೆ ಅದು ಅಪರಾಧಿಗಳನ್ನು ಮತ್ತು ನಿಷ್ಕಳಂಕರನ್ನು ವ್ಯತ್ಯಾಸ ಮಾಡದೆ ಕಾರ್ಯ ನಿರ್ವಹಿಸುತ್ತದೆ. ಮಕ್ಕಳು, ಮಹಿಳೆಯರು ಮತ್ತು ಬಲಹೀನರು ಎಂಬ ವ್ಯತ್ಯಾಸ ಮಾಡದೆ ಎಲ್ಲರನ್ನೂ ಕೊಲ್ಲುವ ಆಯುಧಗಳನ್ನು ಈ ಜನರು ದುರಭಿಮಾನ ಭರಿತರಾಗಿ ಮಾರಾಟ ಮಾಡುತ್ತಾರೆ. ಪಟ್ಟಣಗಳನ್ನೂ ನಗರಗಳನ್ನೂ ಯಾವುದೇ ವ್ಯತ್ಯಾಸವಿಲ್ಲದೆ ಧ್ವಂಸ ಮಾಡುವ ಆಯುಧಗಳನ್ನು ಅವರು ನಿರ್ಲಜ್ಜರಾಗಿ ಮಾರಾಟ ಮಾಡುತ್ತಾರೆ. ಆಯುಧ ಮಾರಾಟ ಮಾಡುವ ದೇಶ ತಾತ್ಕಾಲಿಕ ಲಾಭ ಪಡೆಯಬಹುದಾದರೂ ಅವರ ಕೈಗಳು ಲಕ್ಷಾಂತರ ಜನರ ರಕ್ತದಿಂದ ತೊಯ್ದು ಕೊಂಡಿರುತ್ತವೆ. ಅಸಂಖ್ಯಾತ ಮಕ್ಕಳು ತಮ್ಮ ತಂದೆ ತಾಯಂದಿರು ಅಮಾನವಿಯತೆಯಿಂದ ವಧಿಸಲ್ಪಟ್ಟದ್ದನ್ನು ಕಂಡಿದ್ದಾರೆ. ತಮ್ಮ ತಂದೆ ತಾಯಂದಿರನ್ನು ತಮ್ಮಿಂದ ಏಕೆ ತೆಗೆದುಕೊಂಡು ಹೋಗಿದ್ದಾರೆ ಎಂಬುದರ ಬಗ್ಗೆ ಆಶ್ಚರ್ಯ ಪಡುವ ಹೊರತು ಬೇರೇನು ಮಾಡಲು ಅವರಿಗೆ ಸಾಧ್ಯ. ಸಾವಿರಾರು ಸಂಖ್ಯೆಯ ಮಹಿಳೆಯರು ವಿಧವೆಯರಾಗಿದ್ದಾರೆ. ಅವರು ಪ್ರತೀಕ್ಷೆ ರಹಿತರೂ ದುರ್ಬಲರೂ ಆಗಿದ್ದಾರೆ. ಇಂತಹ ಧ್ವಂಸಗಳಿಂದ ಯಾವ ಒಳಿತು ಸಂಭವಿಸಲು ಸಾಧ್ಯ?

ನಾನು ಕಾಣುವುದೇನೆಂದರೆ, ಮಕ್ಕಳ ಒಂದು ತಲೆಮಾರು ಜಾಗತಿಕ ಶಾಂತಿಯನ್ನು ಕೆಡಿಸುವವರ ಬಾಹುಗಳಿಗೆ ತಳ್ಳಲ್ಪಡುತ್ತಿದೆ. ಒಬ್ಬ ಚಿಕ್ಕ ಮಗು ಅಥವಾ ಹದಿಹರೆಯದವ ತನ್ನಿಂದ ತನ್ನ ತಂದೆ ತಾಯಂದಿರನ್ನು ಬರ್ಬರತೆಯಿಂದ ಕಿತ್ತುಕೊಂಡದ್ದನ್ನು ಕಾಣುವಾಗ ಅದಕ್ಕೆ ಪ್ರತಿಕ್ರಿಯೆ ಮಾಡಿದರೆ ಅವರನ್ನು ನಿಂದಿಸುವುದಾದರೂ ಹೇಗೆ ತಾನೆ ಸಾಧ್ಯ? ನಾನು ಇದರ ಮೊದಲು ದಾರಿದ್ರ್ಯದಿಂದಿರುವವರನ್ನು ತೀವ್ರವಾದಿಗಳು ತಮ್ಮ ಪ್ರಭಾವಕ್ಕೊಳಪಡಿಸುವ ಬಗ್ಗೆ ಹೇಳಿದ್ದೆ. ಅದೇ ರೀತಿ ಯುದ್ಧದಿಂದ ಸಂತ್ರಸ್ತರಾದವರನ್ನೂ ವಶೀಕರಿಸಲು ಅವರು ಪ್ರಯತ್ನಿಸುತ್ತಿದ್ದಾರೆ. ಉಗ್ರವಾದಿಗಳು ಅಪಕ್ವ ಯುವಕರನ್ನು ಅವರ ಮೇಲೆ ಸುಲಭವಾಗಿ ಪ್ರಭಾವ ಬೀರಬಹುದೆಂದು, ಅವರು ಉಗ್ರ ಪ್ರತೀಕಾರ ಮಾಡಬಲ್ಲರೆಂದು ತಿಳಿದು ತಮ್ಮ ಜೊತೆ ಸೇರಿಸಿಕೊಳ್ಳುತ್ತಿದ್ದಾರೆ. ಈ ಯುವ ಜನರು ಶಾಲೆಗೆ ಹೋಗಿ ವಿದ್ಯಾಭ್ಯಾಸಗಳಿಸಿ ಸಭ್ಯರಾಗಿ

ಬೆಳೆದು ನ್ಯಾಯಪಾಲನೆ ಮಾಡುವ ನಾಗರಿಕರಾಗುವುದಕ್ಕೆ ಬದಲಾಗಿ ಅವರು ಗಳಿಸುವ ವಿದ್ಯೆ ಗ್ರೇನೇಡುಗಳನ್ನೂ ರಾಕೆಟ್ ಲಾಂಚರ್‌ಗಳನ್ನೂ ಬಳಸುವ ವಿಧಾನ ಹೇಗೆ, ಆತ್ಮಹತ್ಯಾ ದಾಳಿ ನಡೆಸುವುದು ಹೇಗೆ, ಲೋಕದಲ್ಲಿ ವಿಧ್ವಂಸಕ ಕೃತ್ಯ ನಡೆಸುವುದು ಹೇಗೆ ಎಂಬುದರ ಬಗ್ಗೆಯಾಗಿದೆ.

ಕೆಲವು ದೇಶಗಳು ತಮ್ಮ ದೇಶದಿಂದ ಸಾವಿರಾರು ಮೈಲು ದೂರದಲ್ಲಿ ಸಂಭವಿಸುತ್ತಿರುವ ಸಂಘರ್ಷಗಳಲ್ಲಿ ಅನಾವಶ್ಯಕವಾಗಿ ಹಸ್ತಕ್ಷೇಪ ನಡೆಸುತ್ತಿವೆ. ಅವರು ತಮ್ಮ ಸೈನಿಕರನ್ನು ಅಲ್ಲಿಗೆ ಕಳುಹಿಸುತ್ತಾರೆ ಅಥವಾ ಬಾಂಬ್ ದಾಳಿ ಮಾಡಿ ಧ್ವಂಸ ಮಾಡುತ್ತಾರೆ.

ಅನೇಕ ವಿಷಯಗಳಿಗೆ ಸಂಬಂಧಿಸಿ ಲೋಕ ತಾನು ಹಿಂದೆ ಮಾಡಿದ ತಪ್ಪುಗಳಿಂದ ಪಾಠ ಕಲಿತಿಲ್ಲ. 2003ರ ಇರಾಖ್ ಯುದ್ಧ ಅನ್ಯಾಯಭರಿತವೂ ಸುಳ್ಳು ಪ್ರಚಾರಗಳ ಮೂಲಕ ನಡೆದದ್ದೂ ಎಂದು ಬಹುತೇಕ ಅಂಗೀಕರಿಸಲಾಗುತ್ತಿದೆ. ಲಿಬ್ಯಾದಲ್ಲಿ ಪಾಶ್ಚಿಮಾತ್ಯ ಶಕ್ತಿಗಳು ಹಸ್ತಕ್ಷೇಪ ನಡೆಸಿದ ನಂತರ ಆ ದೇಶ ಅರಾಜಕತೆಯಿಂದ ಪೀಡಿತವಾಗಿದ್ದು, ಉಗ್ರವಾದಿಗಳ ಕೇಂದ್ರವೂ ಆಗಿದೆ. ಆದರೆ ಮಹಾಶಕ್ತಿಗಳು ಇದರಿಂದ ಪಾಠ ಕಲಿತಿಲ್ಲ. ನಗರಗಳು ಮತ್ತು ಪಟ್ಟಣಗಳು ಅವರಿಂದ ಧ್ವಂಸಗೊಳಿಸಲ್ಪಡುತ್ತಿವೆ. ಸಾವಿರಾರು ಕಟ್ಟಡಗಳು ನಿರ್ನಾಮವಾಗಿವೆ.

ನಾನು ಪ್ರಾರಂಭದಲ್ಲಿ ಅಂತರ್ರಾಷ್ಟ್ರೀಯ ಸಮುದಾಯ ಹವಾಮಾನ ಬದಲಾವಣೆಯ ಬಗ್ಗೆ ತಮ್ಮ ಶ್ರದ್ಧೆಯನ್ನು ಕೇಂದ್ರೀಕರಿಸಿರುವ ಬಗ್ಗೆ ಮತ್ತು ನಾವು ಶ್ವಾಸೋಚ್ಛ್ವಾಸ ಮಾಡುವ ಗಾಳಿಯನ್ನು ಶುದ್ಧವಾಗಿಡುವ ಬಗ್ಗೆ ಇಚ್ಛಿಸುತ್ತಿದೆ ಎಂದು ಹೇಳಿದ್ದೆ. ಬೃಹತ್ ಮಟ್ಟದ ಬಾಂಬ್ ದಾಳಿಯಿಂದ ಪರಿಸರ ಕೆಟ್ಟುಹೋಗಲಾರದು ಎಂದು ಚಿಂತಿಸುವವನು ಯಾರಾದರೂ ಇದ್ದಾನೆಯೇ? ಇನ್ನೊಂದು ವಿಷಯವೇನೆಂದರೆ, ಯುದ್ಧ ಪೀಡಿತ ದೇಶಗಳಲ್ಲಿ ಎಂದಾದರೂ ಶಾಂತಿ ಸ್ಥಾಪಿತವಾದರೆ ಆ ದೇಶದ ನಗರಗಳನ್ನೂ ಪಟ್ಟಣಗಳನ್ನೂ ಪೂರ್ಣವಾಗಿ ಪುನರ್ ನಿರ್ಮಿಸಬೇಕಾಗುತ್ತದೆ. ಇದು ಒಂದು ಬೃಹತ್ ಉದ್ದಿಮೆಯಾಗುವುದು. ಆ ಮೂಲಕ ಹಾನಿಕಾರಕ ವಿಸರ್ಜನೆಗಳು ಮತ್ತು ಪರಿಸರ ಮಾಲಿನ್ಯ ತಲೆದೋರುವುವು. ಈ ರೀತಿ ನಾವು ಒಂದು ಕಡೆ ನಾವು ನಮ್ಮ ಭೂಲೋಕವನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದೇವೆ. ಇನ್ನೊಂದು ಕಡೆ ನಾವು ಅದನ್ನು ನಿರ್ಲಕ್ಷ್ಯದಿಂದ ನಾಶ ಮಾಡುತ್ತಿದ್ದೇವೆ. ಆದುದರಿಂದ ನಾನು ಭಾವಿಸುವುದೇನೆಂದರೆ ಜಾಗತಿಕ ಶಕ್ತಿಗಳು ಸಮೀಪ ದೃಷ್ಟಿ ಬಾಧಿತರೂ ಸುರಂಗ ದೃಷ್ಟಿ ಬಾಧಿತರೂ ಆಗಿದ್ದಾರೆ.

ಆಯುಧ ನಿರ್ಮಾಣದ ಪರವಾಗಿ ವಾದಿಸುವವರು ಹೇಳುವ ಮುಖ್ಯ ಪ್ರತಿಪಾದನೆ ಏನೆಂದರೆ ಆಯುಧವನ್ನು ಹೊಂದುವುದು ಪ್ರತಿರೋಧಾತ್ಮಕ ಶಕ್ತಿ ಗಳಿಸುವಂತೆ ಮಾಡಿ ಶಾಂತಿಯನ್ನು ಸ್ಥಾಪಿಸುವುದು. ನಾವು ನಮ್ಮ ಟೆಲಿವಿಶನಿನ ಗುಂಡಿ ಒತ್ತಿದರೆ ಸಮಾಚಾರ ಒಂದು ಮಿನಿಟು ಆಲಿಸುವುದಾದರೆ ನಮಗೆ ತಿಳಿಯುವುದು ಅವರ ವಾದ ತಪ್ಪು ಗ್ರಹಿಕೆ ಉಂಟುಮಾಡುವುದೂ ಮಿಥ್ಯವೂ ಎಂದು. ತಮ್ಮ ತಂದೆ ತಾಯಂದಿರನ್ನು ಕಳೆದುಕೊಂಡ ಸಾವಿರಗಟ್ಟಲೆ ನಿಷ್ಕಳಂಕ ಮಕ್ಕಳು ಮತ್ತು ಅಂಗವಿಕಲರಾದ ಸಾವಿರಗಟ್ಟಲೆ ಮಕ್ಕಳು ಅವರ ವಾದವನ್ನು ಅಂಗೀಕರಿಸಲಾರರು. ವಿಧವೆಯರಾದ ಸಾವಿರಾರು ಮಹಿಳೆಯರು, ವಸತಿ ಹೀನರಾದ ಲಕ್ಷಾಂತರ ಜನರು ಸಹ ಅವರ ವಾದವನ್ನು ಅಂಗೀಕರಿಸಲಾರರು. ನಾವು ನಮ್ಮ ಮಕ್ಕಳಿಗೆ ಪ್ರತೀಕ್ಷೆ ಭರಿತ ಬಳುವಳಿ ನೀಡಲು ಬಯಸುತ್ತೇವಾದರೆ ನಮ್ಮ ಮುಂದಿನ ಪೀಳಿಗೆಗೆ ಶಾಂತಿಭರಿತ ಲೋಕವನ್ನು ಬಳುವಳಿಯಾಗಿ ನೀಡಲು ಬಯಸುತ್ತೇವಾದರೆ ನಾವು ಯಾವ ಧರ್ಮದವರಾದರೂ ನಾವು ನಮ್ಮ ಆದ್ಯತೆಗಳನ್ನು ತುರ್ತಾಗಿ ಬದಲಾಯಿಸಬೇಕಾಗಿದೆ.

ಲೌಕಿಕ ಲಾಭದಾಶೆ ಮತ್ತು ಅಧಿಕಾರದ ಆಶೆಯಿಂದ ನುಂಗಲ್ಪಡುವುದಕ್ಕೆ ಬದಲಾಗಿ ಪ್ರತಿಯೊಂದು ದೇಶ ಶ್ರೀಮಂತವಾಗಿರಲಿ, ಬಡವಾಗಿರಲಿ ಅದು ಲೋಕದಲ್ಲಿ ಶಾಂತಿ ಸ್ಥಾಪಿಸುವುದಕ್ಕೆ ಮತ್ತು ಭದ್ರತೆ ನೀಡುವುದಕ್ಕೆ ಬೇರೆ ಎಲ್ಲವುಗಳ ಮೇಲೆ ಆದ್ಯತೆ ನೀಡಬೇಕು. ಆಯುಧಗಳ ಸಂಗ್ರಹದ ಸ್ಪರ್ಧೆಯಲ್ಲಿ ಭಾಗವಹಿಸುವುದಕ್ಕೆ ಬದಲಾಗಿ ನಾವು ಮಾನವೀಯರನ್ನು ಸಂರಕ್ಷಿಸುವ ಸ್ಪರ್ಧೆಯಲ್ಲಿ ಭಾಗವಹಿಸಬೇಕು.

ಯುದ್ಧ ಮಾಡುವ ದೇಶಗಳ ಗಡಿಯನ್ನು ಮತ್ತು ಬಂದರುಗಳನ್ನು ಮುಚ್ಚಿಬಿಟ್ಟು ನಿಷ್ಕಳಂಕ ಮಕ್ಕಳು ಹಸಿವೆಯಿಂದ ಬಳಲುವಂತೆ ಮಾಡುವುದಕ್ಕೆ ಬದಲಾಗಿ, ರೋಗಿಗಳು ಚಿಕಿತ್ಸೆ ರಹಿತರಾಗುವಂತೆ ಮಾಡುವುದಕ್ಕೆ ಬದಲಾಗಿ ನಾವು ನಮ್ಮ ಹೃದಯಗಳನ್ನು ಒಬ್ಬರಿನ್ನೊಬ್ಬರಿಗೆ ತೆರೆಯಬೇಕು, ನಮ್ಮನ್ನು ವಿಭಜಿಸುವ ಗೋಡೆಗಳನ್ನು ಕೆಡವಿ ಹಾಕಬೇಕು., ಹಸಿದವನಿಗೆ ಊಟ ನೀಡಬೇಕು ಮತ್ತು ಕಷ್ಟವನ್ನನುಭವಿಸುವವನಿಗೆ ನೆರವು ನೀಡಬೇಕು.

ರಾಜಕೀಯ ಪೈಪೋಟಿ ಬಗ್ಗೆ ಹೇಳುವುದಾದರೆ, ಯುನೈಟೆಡ್ ಸ್ಟೇಟ್ಸ್ ಮತ್ತು ಉತ್ತರಕೊರಿಯಾದ ಮಧ್ಯೆ ಇರುವ ವಿವಾದ ಜಾಗತಿಕ ಶಾಂತಿಗೆ ಬೆದರಿಕೆ ಒಡ್ಡುತ್ತಾ ಇದೆ. ಇವೆರಡು ದೇಶಗಳ ಮಧ್ಯೆ ಸಂಘರ್ಷ ತಲೆದೋರಿದರೆ ಅದು ದಕ್ಷಿಣ ಕೊರಿಯಾ, ಚೀನ ಮತ್ತು ಜಪಾನನ್ನು ತೀವ್ರವಾಗಿ ಬಾಧಿಸುವುದು. ಯುನೈಟೆಡ್ ಸ್ಟೇಟ್ಸ್ ಪ್ರೆಸಿಡೆಂಟ್ ಅಚಾನಕವಾಗಿ ಉತ್ತರ ಕೊರಿಯಾದ ನಾಯಕನನ್ನು ಭೇಟಿಯಾಗುವ ಇಚ್ಛೆ ಪ್ರಕಟಿಸಿದ ಕಾರಣ ಬಿಗುವು ಕಡಿಮೆಯಾಗಿದ್ದರೂ ಶಾಂತಿ ಸ್ಥಾಪನೆ ಬಗ್ಗೆ ಖಾತರಿ ಇಲ್ಲ. ಅವರು ಯಾವ ಶರತ್ತಿನ ಪ್ರಕಾರ ಭೇಟಿಯಾಗುವರು, ಎಲ್ಲಿ ಯಾವಾಗ ಭೇಟಿಯಾಗುವರು ಎಂದು ಸ್ಪಷ್ಟವಾಗಿಲ್ಲ. ಒಂದು ಒಪ್ಪಂದವಾದರೆ ಅದೆಷ್ಟು ಕಾಲ ಬಾಳುವುದು ಎಂದು ದೇವನಿಗೆ ಮಾತ್ರ ತಿಳಿದಿರುವುದು. ಎರಡೂ ಕಡೆಗಳಲ್ಲೂ ಪರಸ್ಪರ ದ್ವೇಷ ಬಹಳ ಇದೆ. ಇರಾನಿನೊಂದಿಗೆ ಪಶ್ಚಿಮದ ದೇಶಗಳು ಅಣು ಒಪ್ಪಂದ ಮಾಡಿದ್ದುವು. ಆದರೆ ಈಗ ಅದರ ಸ್ಥಿತಿ ಅಸ್ಥಿರವಾಗಿದೆ.

ಆದುದರಿಂದ ಅನೇಕ ವಿಷಯಗಳು ಭಯಾನಕವಾಗಿ ಕೆಳಭಾಗದಲ್ಲಿ ಅಡ್ಡಾಡುತ್ತಿವೆ. ಅವುಗಳಲ್ಲಿ ಯಾವುದಾದರೂ ಒಂದು ಎಂದಾದರೂ ಸ್ಫೋಟಿಸಬಹುದು. ಅದರ ಪರಿಣಾಮಗಳು ಊಹೆಗೆ ನಿಲುಕದುದಾಗಿದೆ. ಆದರೆ ಇಸ್ಲಾಮ್ ಉಪದೇಶಿಸುವುದೇನೆಂದರೆ, ಎಲ್ಲ ವಿಧ ಕೆಟ್ಟ ಯೋಚನೆಗಳನ್ನು ಮತ್ತು ಅಸೂಯೆಯನ್ನು ಹೃದಯದಿಂದ ನಿರ್ಮೂಲನೆ ಮಾಡಿ ಕಾರುಣ್ಯ, ಪ್ರೀತಿ ಮತ್ತು ಅನುಕಂಪವನ್ನು ಹೃದಯದಲ್ಲಿ ತುಂಬುವಾಗ ಮಾತ್ರ ಶಾಂತಿಯನ್ನು ಗಳಿಸಲು ಸಾಧ್ಯ.

ಇಸ್ಲಾಮ್ ಉಗ್ರಗಾಮಿ ಧರ್ಮ ಎಂದೂ ಅದು ಹಿಂಸಾಚಾರವನ್ನು ಉತ್ತೇಜಿಸುತ್ತದೆ ಎಂದೂ ಮುಸ್ಲಿಮರಲ್ಲಿ ಬಹುತೇಕ ಜನರು ದೇಶಕ್ಕೆ ಅವಿಧೇಯರಾಗಿದ್ದಾರೆಂದೂ ಅಥವಾ ದೇಶದಲ್ಲಿ ಅಸ್ತವ್ಯಸ್ತತೆ ಹರಡಲು ಪ್ರಯತ್ನಿಸುತ್ತಾರೆಂದೂ ಆಕ್ಷೇಪಿಸಲಾಗುತ್ತಿದೆ. ಇಂತಹ ಆಪಾದನೆಗಳು ಸುಳ್ಳು ಎಂದೂ ಅನ್ಯಾಯ ಭರಿತ ಎಂದೂ ನಾನು ಹೇಳಲು ಬಯಸುತ್ತೇನೆ. ತಥಾಕಥಿತ ಮುಸ್ಲಿಮ್ ಭಯೋತ್ಪಾದಕರು ಇಸ್ಲಾಮಿನ ಹೆಸರಿನಲ್ಲಿ ಕೃತ್ಯಗಳನ್ನು ನಡೆಸುವುದಾಗಿ ವಾದಿಸುತ್ತಾರಾದರೂ ನಾವು ಒಂದು ಧಾರ್ಮಿಕ ಯುದ್ಧವನ್ನು ವೀಕ್ಷಿಸುವುದಾಗಿ ನಾನು ಕಾಣುವುದಿಲ್ಲ. ಈಗ ನಡೆಯುತ್ತಿರುವ ಯುದ್ಧಗಳು ಮತ್ತು ನಡೆಸಲಾಗುವ ಹಿಂಸಾಚಾರಗಳು ಭೌಗೋಳಿಕ ಮತ್ತು ರಾಜಕೀಯ ಲಾಭ ಪಡೆಯಲಿಕ್ಕೋಸ್ಕರವಾಗಿದೆ. ಜಿಹಾದಿ ಭಯೋತ್ಪಾದಕರೆಂದು ಕರೆಯಲ್ಪಡುವವರು ಮತ್ತು ಉಗ್ರವಾದಿ ಮತ ಪಂಡಿತರು ಇಸ್ಲಾಮಿನ ಹೆಸರನ್ನು ಅಪಕೀರ್ತಿಗೊಳಪಡಿಸುತ್ತಿದ್ದಾರೆ. ಶಾಂತಿಪ್ರಿಯರೂ ನಿಯಮಗಳನ್ನು ಪಾಲಿಸುವವರಾದ ಬಹುಸಂಖ್ಯಾತರಾದ ಮುಸ್ಲಿಮ್ ನಾಗರಿಕರ ಪ್ರಯತ್ನಗಳನ್ನು ಅವರು ದುರ್ಬಲಗೊಳಿಸುತ್ತಾರೆ. ಇಸ್ಲಾಮ್ ಧರ್ಮ ಎಲ್ಲ ವಿಧಗಳ ತೀವ್ರವಾದವನ್ನು ತಿರಸ್ಕರಿಸುತ್ತದೆ ಮತ್ತು ಇದರ ಮೊದಲು ಪಠಿಸಲಾದ ಪವಿತ್ರ ಖುರ್‌ಆನಿನ ವಚನ ಅದಕ್ಕೆ ಪುರಾವೆಯಾಗಿದೆ. ಇಸ್ಲಾಮಿನ ಆರಂಭ ಕಾಲದ ಯುದ್ಧಗಳು ಎಲ್ಲ ಧರ್ಮಗಳನ್ನು ಸಂರಕ್ಷಿಸಲು ಮತ್ತು ವಿಶ್ವಾಸದ ಸ್ವಾತಂತ್ರ್ಯ ಸಂರಕ್ಷಿಸಲು ಹೂಡಿದವು ಎಂದು ಪವಿತ್ರ ಖುರ್‌ಆನಿನ ವಚನಗಳು ಪ್ರತಿಪಾದಿಸುತ್ತವೆ. ಈ ವಚನದಲ್ಲಿ ಕ್ರೈಸ್ತರ ಚರ್ಚ್‌ಗಳ ಬಗ್ಗೆ, ಯಹೂದಿಯರ ದೇವಾಲಯಗಳ ಬಗ್ಗೆ, ಇತರ ದೇವಾಲಯಗಳು ಮತ್ತು ಮಸ್‌ಜಿದ್‌ಗಳ ಬಗ್ಗೆ ಪ್ರಸ್ತಾಪಿಸಲಾಗಿದೆ.

ನಾನು ಈ ವಿಷಯದ ಬಗ್ಗೆ ಪದೇ ಪದೇ ಪ್ರಸ್ತಾಪಿಸಿದ್ದೇನೆ. ಧಾರ್ಮಿಕ ವಿಶ್ವಾಸದ ಸ್ವಾತಂತ್ರ್ಯ ಮತ್ತು ಮನಸ್ಸಾಕ್ಷಿ ಸ್ವಾತಂತ್ರವನ್ನು ಉಲ್ಲಂಘಿಸುವವನು ಇಸ್ಲಾಮಿನಿಂದ ದೂರ ಸರಿದವನೆಂದು ನಾನು ಪುನರಾವರ್ತಿಸುತ್ತೇನೆ. ಪಾಶ್ಚಿಮಾತ್ಯ ಮೀಡಿಯಗಳಲ್ಲಿ ಇದನ್ನು ಅಂಗೀಕರಿಸುವ ಕೆಲವು ಪ್ರಸಿದ್ಧೀಕರಣಗಳಿವೆ. ನಾನು ಅವುಗಳನ್ನು ಪ್ರಶಂಸಿಸುತ್ತೇನೆ. ಅವರು ಸತ್ಯ ಮತ್ತು ನ್ಯಾಯದ ಬೆಂಬಲಿಗರಾಗಿದ್ದಾರೆ. ಉದಾಹರಣೆಗೆ, "ದಿ ಗಾರ್ಡಿಯನ್" ಪತ್ರಿಕೆಯಲ್ಲಿ ಪ್ರಕಟಿಸಲಾದ ಒಂದು ಅಂಕಣದಲ್ಲಿ ಲೇಖಕರು ಹೀಗೆ ಬರೆದಿದ್ದಾರೆ:

"ಮುಸ್ಲಿಮ್ ಭಯೋತ್ಪಾದನೆ ಹಿಂದೆಂದೂ ಮತ್ತು ಈಗ ಸಹ ಇಸ್ಲಾಮಿನ ಅಭಿವೃದ್ಧಿಗೋಸ್ಕರವಾಗಿರಲಿಲ್ಲ ಎಂದು ನಾನು ವಾದಿಸುತ್ತೇನೆ. ಅದು ಭೂಸ್ವತ್ತಿನ ಅಧಿಕಾರ ಗಳಿಸಲು, ನೈಸರ್ಗಿಕ ಮತ್ತು ಆರ್ಥಿಕ ಸಾಧನ ಸಂಪತ್ತನ್ನು ಕದಿಯಲು ಮತ್ತು ಮುಸ್ಲಿಮ್ ದೇಶಗಳ ಜನರನ್ನು ನಿರ್ಗತಿಕರನ್ನಾಗಿ ಮಾಡುವ ಜಾಗತಿಕ ಆರ್ಥಿಕ ಧೋರಣೆಗಳನ್ನು ರೂಪಿಸಲಿಕ್ಕೋಸ್ಕರವಾಗಿದೆ."

ಮುಸ್ಲಿಮ್ ನಾಮಧೇಯರು ಮಾಡುವ ಭಯೋತ್ಪಾದಕ ಕೃತ್ಯಗಳನ್ನು ಮೇಲಿನ ಶಬ್ದಗಳು ನಿಖರವಾಗಿ ಚಿತ್ರಿಸುತ್ತವೆ. ಇನ್ನೊಂದು ರಾಷ್ಟ್ರೀಯ ಪತ್ರಿಕೆಯಲ್ಲಿ ಪತ್ರಕರ್ತ ಪೀಟರ್ ಓಬೋರ್ನ್ ವಿಶ್ವಸನೀಯ ಸಾಕ್ಷ್ಯ ಒದಗಿಸಿ ಹೇಳುತ್ತಾರೆ: ಗಮನಾರ್ಹ ಸಂಖ್ಯೆಯಲ್ಲಿ ಮುಸ್ಲಿಮರು ಉಗ್ರಗಾಮಿಗಳಾದುದು ಕೆಲವು ಪಾಶ್ಚಿಮಾತ್ಯ ಗೂಢಚಾರ ಸಂಸ್ಥೆಗಳ ಹಸ್ತಕ್ಷೇಪದ ಕಾರಣದಿಂದಾಗಿದೆ. ಇದಕ್ಕೆ ಸಂಬಂಧಿಸಿ ಒಬ್ಬ ಮಾಜಿ ಬ್ರಿಟಿಷ್ ಇಂಟೆಲಿಜೆನ್ಸ್ ಆಫೀಸರ್ ಹೇಳಿದುದನ್ನು ಹೀಗೆ ಉಲ್ಲೇಖಿಸುತ್ತಾರೆ: "ಇದು ಸರಿಯಲ್ಲ. ಒಂದು ಕಡೆ ನಮ್ಮ ಪೋಲೀಸರು ನಮ್ಮ ಸಮಾಜವನ್ನು ರಕ್ಷಿಸಲು ಭಯೋತ್ಪಾದನೆ ವಿರುದ್ಧ ಹೋರಾಡುತ್ತಾರೆ. ಇನ್ನೊಂದು ಕಡೆ ನಮ್ಮ ಮತ್ತು ಅಮೇರಿಕದ ಭದ್ರತಾ ಪಡೆಗಳು ಜಿಹಾದಿಗಳಿಗೆ ತರಬೇತಿ ಮತ್ತು ಆಯುಧಗಳನ್ನು ನೀಡಿ ಭಯೋತ್ಪಾದನೆಗೆ ರಹಸ್ಯ ಬೆಂಬಲ ನೀಡುತ್ತಾರೆ."

"ದಿ ಬೋಸ್ಟನ್ ಗ್ಲೋಬ್"ನಲ್ಲಿ ಪ್ರಕಟಿಸಲಾದ ಒಂದು ಲೇಖನದಲ್ಲಿ ಡೈರೆಕ್ಟರ್ ಆಫ್ ದಿ ಸೆಂಟರ್ ಫೋರ್ ಸಸ್ಟೈನೇಬ್ಲ್ ಡೆವಲಪ್‌ಮೆಂಟ್, ಎಟ್ ಕೊಲಂಬಿಯಾ ಯುನಿವರ್ಸಿಟಿ (Director of the Center for Sustainable Development at Columbia University) ಪ್ರೊಫೆಸರ್ ಜೆಫ್ರೀ ಸಾಚ್ಸ್ (Professor Jeffrey Sachs) ಬರೆಯುತ್ತಾರೆ: "ಮಧ್ಯಪೂರ್ವ ದೇಶಗಳಲ್ಲಿ ಸರಕಾರಗಳನ್ನು ಅಸಂಖ್ಯಾತ ಸಂದರ್ಭಗಳಲ್ಲಿ ಸಿ.ಐ.ಎ ಕಿತ್ತು ಹಾಕಿದೆ. ಈ ದೇಶಗಳ ಅಸ್ಥಿರತೆಯಲ್ಲಿ ಅಮೇರಿಕದ ಪಾತ್ರವನ್ನು ಮೀಡಿಯಾದ ಪಂಡಿತರು ನಿರ್ಲಕ್ಷಿಸಿದ್ದಾರೆ."

ಸಂಘರ್ಷಗಳ ನಿವಾರಣೆಗೆ ಬಹುಸಂಖ್ಯಾತ ದೇಶಗಳು ಪರಿಹಾರ ಕಂಡುಕೊಳ್ಳಬೇಕೆಂದು ಬೆಂಬಲಿಸುತ್ತಾ ಪ್ರೊಫೆಸರ್ ಸಾಚ್ಸ್ ಹೇಳುತ್ತಾರೆ: "ಅಮೇರಿಕ ಮಧ್ಯಪೂರ್ವದಲ್ಲಿ ತನ್ನ ಹೋರಾಟವನ್ನು ಕೂಡಲೆ ನಿಲ್ಲಿಸಬೇಕು. ವಾಸ್ತವಿಕ ಪರಿಹಾರಕ್ಕೆ ಮತ್ತು ಭದ್ರತೆಗೋಸ್ಕರ ಸಂಯುಕ್ತರಾಷ್ಟ್ರ ಸಂಘದ ರಾಜತಂತ್ರಜ್ಞತೆಯನ್ನು ಅವಲಂಬಿಸಬೇಕು."

ಅನೇಕ ಮುಸ್ಲಿಮೇತರ ಅಂಕಣಗಾರರು ತಮ್ಮ ಇತ್ತೀಚೆಗಿನ ಅಂಕಣ ಬರಹಗಳಲ್ಲಿ ಹೀಗೆ ಬರೆದಿದ್ದಾರೆ: "ದಾಯೆಶ್ (IS) ಮೊದಲಾದ ಭಯೋತ್ಪಾದಕ ಗುಂಪುಗಳು ಬಾಹ್ಯ ಬೆಂಬಲವಿಲ್ಲದೆ ಬೆಳವಣಿಗೆ ಪಡೆಯುತ್ತಿರಲಿಲ್ಲ."

ಹಸ್ತಕ್ಷೇಪ ನಡೆಸುವುದು ಯಾವಾಗಲೂ ತಪ್ಪೆಂದು ನಾನು ಹೇಳಲಾರೆ. ಆದರೆ ಯಾವುದೇ ಕೃತ್ಯ ಸಮಯೋಚಿತವೂ ಸ್ವಾರ್ಥ ರಹಿತವೂ ಆಗಿರಬೇಕು. ಪವಿತ್ರ ಖುರ್‌ಆನ್ ಅಧ್ಯಾಯ 49 ವಚನ 10ರಲ್ಲಿ ಹೇಳಿರುವುದೇನೆಂದರೆ, ಬಾಹ್ಯ ಹಸ್ತಕ್ಷೇಪ ದೀರ್ಘಕಾಲ ನೆಲೆನಿಲ್ಲುವ ಶಾಂತಿಗೋಸ್ಕರವಾಗಿರಬೇಕು. ಮುಸ್ಲಿಮರು ತಮ್ಮ ವಿರೋಧಿಗಳೊಂದಿಗೆ ಕೂಡ ನ್ಯಾಯಪೂರ್ಣವಾಗಿ ವರ್ತಿಸಬೇಕೆಂದು ಪವಿತ್ರ ಖುರ್‌ಆನ್ ಉಪದೇಶಿಸುತ್ತದೆ.

ಇಸ್ಲಾಮ್ ಕೊನೆಯ ಪರಿಹಾರ ಮಾರ್ಗವಾಗಿ ಪ್ರತಿರೋಧಕ ಯುದ್ಧ ಮಾಡಲು ಆದ್ಯ ಕಾಲದ ಮುಸ್ಲಿಮರಿಗೆ ಅನುಮತಿ ನೀಡುವುದರೊಂದಿಗೆ ಅವರು ನ್ಯಾಯ ನಿಷ್ಠೆಯನ್ನು ಪಾಲಿಸಬೇಕೆಂದೂ ಶಾಂತಿ ಸ್ಥಾಪಿತವಾದ ನಂತರ ಸ್ವಾರ್ಥ ಭಾವನೆಯಿಂದ ಅತಿರೇಕವಾಗಿ ವರ್ತಿಸಬಾರದೆಂದೂ ಉಪದೇಶಿಸಿದೆ.

ಮುಸ್ಲಿಮರಿಗೂ ಮುಸ್ಲಿಮೇತರರಿಗೂ ನಿಶ್ಚಯವಾಗಿಯೂ ಈ ತತ್ವ ನ್ಯಾಯಪೂರ್ಣವೂ ಹಿತಕರವೂ ಆಗಿದೆ. ಆಕ್ರಮಣಗಾರನನ್ನು ತಡೆಯಲು ಬಲ ಪ್ರಯೋಗ ಮಾಡಬಹುದಾದರೂ ಅದು ಮಿತಿಮೀರಬಾರದು ಮತ್ತು ಪ್ರತೀಕಾರ ರೂಪದಲ್ಲಿ ಅಥವಾ ಸೊತ್ತು ಸಂಪತ್ತನ್ನು ಸೂರೆ ಮಾಡುವ ರೀತಿಯಲ್ಲಾಗಬಾರದು.

ಆಕ್ರಮಣಗಾರ ಶಾಂತಿಗೆ ಮರಳಿದರೆ ಅವನ ಹಕ್ಕುಗಳನ್ನು ಕಿತ್ತುಕೊಳ್ಳಬಾರದು ಮತ್ತು ಯಾವುದೇ ರೀತಿಯಲ್ಲಿ ಸ್ವಾರ್ಥಲಾಭ ಗಳಿಸಬಾರದು.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಜನರನ್ನು ಶಾಂತಿಯಲ್ಲಿ ಒಟ್ಟಿಗೆ ಸೇರಿಸಲು ತನ್ನ ಜೀವಿತ ಕಾಲದಲ್ಲೆಲ್ಲ ಪ್ರಯತ್ನಿಸಿದರು. ಅವರು ಅನ್ಯರಿಗೋಸ್ಕರ ತನ್ನ ಹಕ್ಕನ್ನು ಬಿಟ್ಟುಕೊಡಲು ಸದಾ ಸಿದ್ಧರಾಗುತ್ತಿದ್ದರು. ಅನೇಕ ಮುಸ್ಲಿಮೇತರ ಲೇಖಕರು ಮತ್ತು ವಿದ್ವಾಂಸರು ಇಸ್ಲಾಮ್ ಬಗ್ಗೆ ಗಹನವಾಗಿ ಅಧ್ಯಯನ ಮಾಡಿ ಹೀಗೆ ಸಾಕ್ಷ್ಯ ಹೇಳಿದ್ದಾರೆ– ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಯಾವಾಗಲೂ ಸಮುದಾಯಗಳನ್ನು ಒಗ್ಗೂಡಿಸಲು ಪ್ರಯತ್ನಿಸುತ್ತಿದ್ದರು. ಅವರು ವಿಶ್ವಾಸದ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದರು. ಉದಾಹರಣೆಗೆ. ಓಕ್ಸ್‌ಫೋರ್ಡ್ ಯುನಿವರ್ಸಿಟಿಯಲ್ಲಿ ಸೆನೆಟರ್ ರೀಸರ್ಚ್ ಫೆಲೋ ಆಗಿರುವ ಪೀಟರ್ ಫ್ರಾಂಕೋ ಪನ್ (Peter Franco Pan) ತನ್ನ ಪುಸ್ತಕ ಸಿಲ್ಕ್‌ರೋಡ್ಸ್ (Silk Roads)ನಲ್ಲಿ, ಹಝ್ರತ್ ಮುಹಮ್ಮದ್(ಸ) ಹೇಗೆ ಅಂತರ್‌ಧರ್ಮೀಯ ಸೌಹಾರ್ದ ಮತ್ತು ಚರ್ಚೆಗೆ ಪ್ರಯತ್ನಿಸುತ್ತಿದ್ದಾರೆಂದೂ ಕ್ರೈಸ್ತ ಮತ್ತು ಯಹೂದಿ ಸಮುದಾಯದವರೊಂದಿಗೆ ನಿಕಟ ಸಂಬಂಧ ಸ್ಥಾಪಿಸಿದ್ದಾರೆಂದೂ ಬರೆದಿದ್ದಾರೆ.

ಆ ಕಾಲಘಟ್ಟದಲ್ಲಿ ವಿವಿಧ ಸಮುದಾಯಗಳು ಒಮ್ಮತ ಹೊಂದಿದ ವಿಷಯಗಳ ಬಗ್ಗೆ ಪ್ರಸ್ತಾಪಿಸಿರುವುದು ಗಮನಾರ್ಹ ಎಂದು ಲೇಖಕರು ಹೇಳಿದ್ದಾರೆ. ಪವಿತ್ರ ಪ್ರವಾದಿಯ ಸಂದೇಶ ರಾಜಿ ಮಾಡಿಸುವುದಾಗಿತ್ತು ಎಂದು ಅವರು ಹೇಳಿದ್ದಾರೆ. ಇಸ್ಲಾಮಿನ ಪ್ರವಾದಿಯನ್ನು ಮದೀನ ಪಟ್ಟಣದ ಆಡಳಿತಾಧಿಕಾರಿಯನ್ನಾಗಿ ಮಾಡಿದ ಸಂದರ್ಭದ ಬಗ್ಗೆ ಲೇಖಕರು ಹೀಗೆ ಬರೆದಿದ್ದಾರೆ: "ಪಟ್ಟಣದ (ಮದೀನದ) ಪ್ರಮುಖ ಯಹೂದಿಯರು ಮುಹಮ್ಮದರಿಗೆ ತಮ್ಮ ಬೆಂಬಲವನ್ನು ಪ್ರತಿಜ್ಞಾ ಪೂರ್ವಕವಾಗಿ ಸೂಚಿಸಿದರು. ಪರಸ್ಪರ ಸಂರಕ್ಷಣೆಯ ಖಾತರಿಯನ್ನು ಪಡೆದರು. ಇವುಗಳನ್ನು ಒಂದು ಅಧಿಕೃತ ದಾಖಲೆ ಪತ್ರದಲ್ಲಿ ನಮೂದಿಸಿ ತಮ್ಮ ಧರ್ಮ ಮತ್ತು ಸ್ವತ್ತುಗಳು ಈಗ ಮತ್ತು ಮುಂದಿನ ಕಾಲದಲ್ಲಿ ಮುಸ್ಲಿಮರಿಂದ ಸಂರಕ್ಷಿಸಲ್ಪಡುವುದಾಗಿ ಬರೆದಿದ್ದರು."

ಲೇಖಕರು ಹೀಗೆ ಸಹ ಬರೆದಿದ್ದಾರೆ: "ಮುಹಮ್ಮದ್ ಮತ್ತು ಅವರ ಅನುಯಾಯಿಗಳು ಅವರ ಆಡಳಿತ ಪ್ರದೇಶ ವರ್ಧಿಸಿದಾಗ ಯಹೂದಿಯರ ಮತ್ತು ಕ್ರೈಸ್ತರ ಭಯವನ್ನು ನಿವಾರಿಸಲು ಬಹಳ ಪ್ರಯತ್ನ ಮಾಡಿದ್ದರು."

ಆದುದರಿಂದ ಸತ್ಯವೇನೆಂದರೆ, ಇಸ್ಲಾಮ್ ಯಾವಾಗಲೂ ಯಾವುದೇ ವಿಧದ ಭಯೋತ್ಪಾದನೆಗೆ ಮತ್ತು ತೀವ್ರವಾದಕ್ಕೆ ನೇರವಾಗಿ ವಿರುದ್ಧವಾಗಿದೆ. ಕೆಲವು ಮುಸ್ಲಿಮರ ದುಷ್ಕೃತ್ಯಗಳು ಸಮಾಜಕ್ಕೆ ಹಾನಿಯುಂಟುಮಾಡಿದೆ ಎಂದು ನಾನು ಅಂಗೀಕರಿಸುತ್ತೇನಾದರೂ ಇಂದಿನ ಕಾಲದ ಲೋಕದ ಚಂಚಲ ಸ್ಥಿತಿಗೆ ಮುಸ್ಲಿಮರು ಮಾತ್ರ ಹೊಣೆಗಾರರು ಮತ್ತು ನಿಂದಾರ್ಹರು ಎಂದು ನಾನು ಅಂಗೀಕರಿಸುವುದಿಲ್ಲ. ಅನೇಕ ಟಿಪ್ಪಣಿಗಾರರು ಮತ್ತು ನಿಷ್ಣಾತರು ಬಹಿರಂಗವಾಗಿ ಹೇಳಿದ್ದಾರೆ– ಕೆಲವು ಮುಸ್ಲಿಮೇತರ ಶಕ್ತಿಗಳು ಮತ್ತು ಗುಂಪುಗಳು ಶಾಂತಿ ಭಂಗ ಮಾಡುವುದರಲ್ಲಿ, ಸೌಹಾರ್ದ ಕೆಡಿಸುವುದರಲ್ಲಿ ತಮ್ಮ ಭಾಗ ನಿರ್ವಹಿಸಿದೆ ಎಂದು.

ಇಂದಿನ ಜಾಗತಿಕ ಸಮಸ್ಯೆಗಳಿಗೆ ಮುಸ್ಲಿಮರನ್ನು ಮಾತ್ರ ನಿಂದಿಸಬೇಕೆಂಬ ಅಭಿಪ್ರಾಯದಿಂದ ಮಾನವರು ದೂರ ಸರಿಯಬೇಕಾದ ಸಮಯ ಇದಾಗಿದೆ ಎಂದು ಹೇಳುವುದು ಸರಿಯಾಗಿದೆ.

ನಮ್ಮ ರಾಜಕೀಯ ನಾಯಕರು ತಮ್ಮ ಪಕ್ಷಗಳ ಅಥವಾ ಸರಕಾರಗಳ ಬೆಳವಣಿಗೆಗಳಿಗೆ ಆದ್ಯತೆ ನೀಡುವುದಕ್ಕೆ ಬದಲಾಗಿ ಮಾನವರ ಮುಂದಿನ ಶಾಂತಿಮಯ ಸ್ಥಿತಿ ಮತ್ತು ಸಮೃದ್ಧಿ ಬಗ್ಗೆ ಆದ್ಯತೆ ನೀಡಬೇಕಾದುದು ಆವಶ್ಯಕವಾದ ಸಮಯ ಇದಾಗಿದೆ.

ಲೋಕದಲ್ಲಿ ಸತ್ಯವಾದ ಶಾಂತಿ ಸ್ಥಾಪಿಸುವ ಮಾರ್ಗ ಇದೇ ಆಗಿದೆ.

ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ನಾವು ತಿಳಿದು ಕೊಳ್ಳಬೇಕಾದುದೇನೆಂದರೆ, ಬಲಪ್ರಯೋಗ ಯಾವುದೇ ದೀರ್ಘಕಾಲೀನ ಪ್ರಯೋಜನ ಅಪೂರ್ವವಾಗಿ ಮಾತ್ರ ನೀಡುತ್ತದೆ. ಉತ್ತರ ಕೊರಿಯಾ, ಇರಾನ್ ಅಥವಾ ಬೇರೆ ದೇಶಕ್ಕೆ ಸಂಬಂಧಿಸಿ ಮಹಾಶಕ್ತಿ ದೇಶಗಳು ಜಾಗರೂಕತೆಯಿಂದ ಮುಂದುವರಿಯಬೇಕು ಮತ್ತು ಪ್ರತಿಯೊಂದು ಪಕ್ಷದ ಕಾಳಜಿಗಳೇನೆಂದು ಆಲಿಸಬೇಕು. ನಾನು ಇದರ ಮೊದಲು ಉಲ್ಲೇಖಿಸಿದ ಒಬ್ಬ ಅಂಕಣಗಾರ ಹೀಗೆ ಹೇಳಿದ್ದಾರೆ: "ಜಾಗತಿಕ ಮಹಾಶಕ್ತಿ ದೇಶಗಳು ರಾಜತಂತ್ರಜ್ಞತೆಯಿಂದ ವರ್ತಿಸಬೇಕು ಮತ್ತು ಬಿಗುವು ಪರಿಹರಿಸಲು ಆದ್ಯತೆ ನೀಡಬೇಕು."

ಮಹಾಶಕ್ತಿ ದೇಶಗಳು ಶಾಂತಿ ಒಪ್ಪಂದ ಮಾಡಲು ಆದ್ಯತೆ ನೀಡಬೇಕು. ಅವು ಏಕ ಪಕ್ಷೀಯ ಲಾಭವುಂಟು ಮಾಡುವುದಾಗಿರಬಾರದು. ಅದು ಎಲ್ಲ ಪಕ್ಷಗಳ ಹಿತಗಳನ್ನು ಕಾಪಾಡಬೇಕು. ಶಾಂತಿ ಸ್ಥಾಪನೆಯಾದ ನಂತರ ಹಿಂದಿನ ಕಾಲದ ದ್ವೇಷವನ್ನು ಬಿಡಬೇಕು. ಪರಸ್ಪರ ಆದರ ಭಾವನೆಯಿಂದ ಒಗ್ಗೂಡಿ ಮುಂದೆ ಸಾಗಬೇಕು.

ಕ್ಷಮೆ ನೀಡಿದ ಅತ್ಯಂತ ಮಹತ್ವಪೂರ್ಣ ಏಕಮಾತ್ರ ಘಟನೆ ಮಾನವನ ಚರಿತ್ರೆಯಲ್ಲಿ ಸಂಭವಿಸಿದುದು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಡೆವಳಿಕೆ ಮೂಲಕವಾಗಿದೆ ಎಂದು ನನ್ನ ದೃಢ ವಿಶ್ವಾಸವಾಗಿದೆ. ಹದಿಮೂರು ವರ್ಷಗಳ ಕಾಲ ಅವರು ಮತ್ತು ಅವರ ಅನುಯಾಯಿಗಳು ಘೋರ ಕ್ರೂರ ಹಿಂಸಾಚಾರಗಳಿಗೆ ಗುರಿಯಾಗಿದ್ದರು. ಅವರನ್ನು ಅವರ ಮನೆಗಳಿಂದ ಹೊರಹಾಕಲಾಗಿತ್ತು. ಮಕ್ಕದಿಂದ ಅವರು ವಲಸೆ ಹೋಗಬೇಕಾಯಿತು. ಆ ಕಾಲಘಟ್ಟದಲ್ಲಿ ಮುಸ್ಲಿಮರು ಕ್ರೂರವಾಗಿ ವಧಿಸಲ್ಪಟ್ಟರು. ಅವರನ್ನು ಶಾರೀರಿಕ ಮತ್ತು ಮಾನಸಿಕ ಹಿಂಸೆಗೆ ಗುರಿಪಡಿಸಲಾಯಿತು. ಅವರು ಸಾಮುದಾಯಿಕ ಬಹಿಷ್ಕಾರಕ್ಕೆ ಈಡಾದರು. ಮುಸ್ಲಿಮರು ಕೆಂಡದ ಮೇಲೆ ಸಹ ಮಲಗಿಸಲ್ಪಡುತ್ತಿದ್ದರು. ಮುಸ್ಲಿಮ್ ಮಹಿಳೆಯರ ಕಾಲುಗಳನ್ನು ಬೇರೆ ಬೇರೆ ಒಂಟೆಗಳಿಗೆ ಕಟ್ಟಿ ಒಂಟೆಗಳು ವಿರುದ್ಧ ದಿಕ್ಕುಗಳಿಗೆ ಓಡುವಂತೆ ಮಾಡಿದ್ದರು. ಆಗ ದೇಹ ಎರಡು ಭಾಗಗಳಾಗಿ ಸೀಳಲ್ಪಡುತ್ತಿತ್ತು. ಹೀಗೆ ಸಂಭವಿಸಿದರೂ ಹಝ್ರತ್ ಮುಹಮ್ಮದ್

**(14ನೇ ಪುಟಕ್ಕೆ)**

# ವಿಶ್ವದಾಚೆ: ವೈಜ್ಞಾನಿಕ ಯುಗದಲ್ಲಿ ದೇವ ವಿಶ್ವಾಸ

♦ **ಉಮರ್ ನಾಸಿರ್, ವೆಸ್ಟ್ ಮಿಡ್‌ಲೇಂಡ್ಸ್, ಯು.ಕೆ.**

ಮಾನವರ ಚರಿತ್ರೆಯಲ್ಲಿ ಅತ್ಯಂತ ಸುಂದರವಾದ ಸಂಭಾಷಣೆ ನಡೆದುದು ಯಾವಾಗ ಎಂದು ನಿಮಗೆ ತಿಳಿದಿದೆಯೇ? ಅದು ಮುಹಮ್ಮದ್ ಪೈಗಂಬರ್(ಸ) ಮತ್ತು ಮುಂದೆ ಅವರ ಪ್ರಥಮ ಖಲೀಫರಾದ ಅಬೂಬಕರ್ ಸಿದ್ದೀಖ್(ರ) ಮಧ್ಯೆ ನಡೆದ ಸಂಭಾಷಣೆಯಾಗಿತ್ತು. ಅವರೊಬ್ಬ ಶ್ರೀಮಂತ ಗೌರವಾನ್ವಿತ ವ್ಯಾಪಾರಿಯಾಗಿದ್ದು ಅವರು ವಾಸಿಸುತ್ತಿದ್ದ ಮಕ್ಕದಿಂದ ಹೊರಗೆ ವ್ಯಾಪಾರಕ್ಕೋಸ್ಕರ ಅರಬ್ ಮರುಭೂಮಿಯಲ್ಲಿ ಸಂಚರಿಸುವವರಾಗಿದ್ದರು.

ಅವರು ಒಮ್ಮೆ ಮರಳಿ ತನ್ನ ನಗರಕ್ಕೆ ಆಗಮಿಸಿದಾಗ ಮಕ್ಕದ ಪ್ರಮುಖ ವ್ಯಕ್ತಿಗಳು ನಗುತ್ತಾ ಹೇಳಿದರು– ಅವರ ಸ್ನೇಹಿತ ಮುಹಮ್ಮದ್(ಸ) ತನಗೆ ಅಲ್ಲಾಹನ ಸಂದೇಶ ದೇವದೂತರ ಮೂಲಕ ಲಭಿಸಿದೆ ಎಂದು ವಾದಿಸುತ್ತಿದ್ದಾರೆ ಎಂದು. ಅಬೂಬಕರ್(ರ) ಕೂಡಲೆ ಮುಹಮ್ಮದ್ ಪೈಗಂಬರರ(ಸ) ಸಮೀಪಕ್ಕೆ ಹೋಗಿ ಕೇಳಿದರು: "ನೀವು ಈ ವಾದ ಮಾಡಿರುವಿರೋ?" ಹಝ್ರತ್ ಪೈಗಂಬರರು(ಸ) ಅವರಿಗೆ ನೇರವಾಗಿ ಉತ್ತರ ನೀಡದೆ ತನ್ನ ವಾದದ ಬಗ್ಗೆ ಮತ್ತು ಅದಕ್ಕೆ ಕಾರಣವೇನೆಂದು ವಿವರಿಸಲು ತೊಡಗಿದರು. ಆದರೆ ಹಝ್ರತ್ ಅಬೂಬಕರ್(ರ) ಅದನ್ನು ಆಲಿಸಲು ಮುಂದಾಗದೆ ಪುನಃ ಕೇಳಿದರು: "ನೀವು ಈ ವಾದ ಮಾಡಿರುವಿರೋ?" ಆಗ ಸಹ ಹಝ್ರತ್ ಪೈಗಂಬರರು(ಸ) ನೇರವಾದ ಉತ್ತರ ನೀಡಲಿಲ್ಲ. ಆಗ ಹಝ್ರತ್ ಅಬೂಬಕರ್(ರ) ಇನ್ನೊಮ್ಮೆ ಕೇಳಿದರು: "ನೀವು ಈ ವಾದ ಮಾಡಿರುವಿರೋ?" ಕೊನೆಗೆ ಹಝ್ರತ್ ಪೈಗಂಬರರು(ಸ) ತನ್ನ ನಿಲುವು ಬದಲಾಯಿಸಿ ಹೇಳಿದರು: "ಹೌದು. ನಾನು ಆ ರೀತಿ ವಾದಿಸಿರುವೆ." ಆಗ ಹಝ್ರತ್ ಅಬೂಬಕರ್(ರ) ಘೋಷಿಸಿದರು: "ತಾವು ಅಲ್ಲಾಹನ ಸಂದೇಶವಾಹಕರೆಂದು ನಾನು ಸಾಕ್ಷ್ಯ ಹೇಳುತ್ತೇನೆ." ತಾನು ವಾದದ ಬಗ್ಗೆ ಯಾವುದಾದರೂ ಸಾಕ್ಷ್ಯಾಧಾರವನ್ನು ಆಲಿಸಿದ್ದರೆ ಅದು ತನ್ನ ವಿಶ್ವಾಸದ ಮಟ್ಟವನ್ನು ತಗ್ಗಿಸುತ್ತಿತ್ತು ಎಂದು ಹಝ್ರತ್ ಅಬೂಬಕರ್(ರ) ಹೇಳಿದರು.

**ವೈಜ್ಞಾನಿಕತೆ:** ವಿಶ್ವಾಸ ಎಂಬುದು ಈಗ ಒಂದು ಕೊಳಕು ಶಬ್ದವಾಗಿ ಪರಿಣಮಿಸಿದೆ. ಅದರ ವಾಸ್ತವಿಕ ಅರ್ಥ ಅಸ್ಪಷ್ಟವಾಗಿದೆ. ಅದರ ಅರ್ಥವ್ಯಾಪ್ತಿಯನ್ನು ಬುದ್ಧಿಜೀವಿಗಳು ಪರಿಹಾಸ ಮಾಡುತ್ತಾರೆ. ವೈಜ್ಞಾನಿಕ ಪರೀಕ್ಷೆಯೇ, ಮಾನವರ ಮೋಕ್ಷಕ್ಕಿರುವ ಕೀಲಿಗೈ ಎಂದು ಅವರು ನಂಬುತ್ತಾರೆ. ಅವರ ನಿಲುವು ಪ್ರಾಯಶಃ ಸ್ವಲ್ಪಮಟ್ಟಿಗೆ ಸಮರ್ಥನೀಯವಾಗಿದೆ. ವೈಜ್ಞಾನಿಕ ಕ್ರಾಂತಿಯಿಂದ ಲೌಕಿಕ ಅಭಿವೃದ್ಧಿ ಇತ್ತೀಚೆಗಿನ ಶತಮಾನಗಳಲ್ಲಿ ಸಂಭವಿಸಿದುದು ಎಲ್ಲರೂ ಕಾಣುವಂತೆ ಸ್ಪಷ್ಟವಾಗಿದೆ. ಔಷಧಶಾಸ್ತ್ರದಲ್ಲಿ ಮತ್ತು ತಂತ್ರಜ್ಞಾನದಲ್ಲಿ ಸಂಭವಿಸಿರುವ ಪ್ರಗತಿಗೆ ವೈಜ್ಞಾನಿಕ ಅನ್ವೇಷಣೆಯು ಕಾರಣವಾಗಿದೆ. ನಾವು ದತ್ತಾಂಶಗಳನ್ನು ಸಂಗ್ರಹಿಸಿ ನಮ್ಮ ಸಿದ್ಧಾಂತಗಳನ್ನು ಪ್ರಾಯೋಗಿಕವಾಗಿ ಪರೀಕ್ಷಿಸುತ್ತೇವೆ. ಅವುಗಳ ಪರಿಣಾಮಗಳು ಜೀವಿಸುವ ರೀತಿಯನ್ನು ಸಂಪೂರ್ಣವಾಗಿ ಬದಲಾಯಿಸಿವೆ. ಆದರೆ ಈಗ ವಿಜ್ಞಾನ ನಮ್ಮ ಜೀವಿತ ಮಟ್ಟವನ್ನು ಸುಧಾರಣೆ ಮಾಡುವ ಒಂದು ಉಪಕರಣವಾಗಿ ಮಾತ್ರ ಬಾಕಿಯಾಗಿಲ್ಲ. ಅದು ಧರ್ಮದ ಹೃದಯವನ್ನು ಗುರಿಯಾಗಿರಿಸುವ ಒಂದು ಆಯುಧವಾಗಿಯೂ ಮಾರ್ಪಾಡುಗೊಂಡಿದೆ. ಇಂದಿನ ಕಾಲದ ಪ್ರಮುಖ ನಾಸ್ತಿಕರಾದ ರಿಚರ್ಡ್ ಡಾಕಿನ್ಸ್ ಮತ್ತು ಸ್ಯಾಮ್ ಹಾರಿಸ್ ಪ್ರಸಿದ್ಧ ವಿಜ್ಞಾನಿಗಳಾಗಿದ್ದಾರೆ. ಅವರು ಮತ್ತು ಅವರನ್ನು ಹಿಂಬಾಲಿಸುವ ಹಲವರು ನಂಬುವುದೇನೆಂದರೆ, ಮನುಷ್ಯರು ಆಧುನಿಕ ವಿಜ್ಞಾನದ ಶಕ್ತಿಗೆ ಶರಣಾಗಿ ಪುರಾತನ ಅಂಧವಿಶ್ವಾಸಗಳ ಸಂಕೋಲೆಗಳಿಂದ ಸ್ವಾತಂತ್ರ್ಯ ಗಳಿಸಬಹುದು. ನಿಶ್ಚಯವಾಗಿಯೂ ಅವರ ಪ್ರಚಾರದ ಅತ್ಯುತ್ಸಾಹ ಧಾರ್ಮಿಕ ಶ್ರದ್ಧೆಗೆ ಸಮವಾಗಿದ್ದು ಅವರ ಹೊಸ ದೇವನು ವಿಜ್ಞಾನವಾಗಿದೆ. ಭವಿಷ್ಯತ್ ಜ್ಞಾನವುಳ್ಳ ದಾರ್ಶನಿಕನೂ ಗಣಿತ ಶಾಸ್ತ್ರಜ್ಞನೂ ಆಗಿರುವ ಡೇವಿಡ್ ಬೆರ್‌ಲಿನ್‌ಸ್ಕಿ ಹೀಗೆ ಹೇಳಿದ್ದಾರೆ:

"ಬೇರೆ ಏನೂ ಇಲ್ಲದಿದ್ದರೂ, ಸಾಂಪ್ರದಾಯಿಕ ಧಾರ್ಮಿಕ ಚಿಂತನೆಗಳ ವಿರುದ್ಧ ಆಕ್ರಮಣದಿಂದ ನಮ್ಮ ಕಾಲದಲ್ಲಿ ವಿಶ್ವಾಸದ ಕ್ರೋಢೀಕರಣವಾಗಿ ವಿಚಾರವಾದಿ ಪುರುಷ ಮತ್ತು ಮಹಿಳೆ ತಮ್ಮ ವಿಶ್ವಾಸವಾಗಿ ಅಥವಾ ಖಂಡಿತವಾಗಿ ತಮ್ಮ ಭಕ್ತಿಯಾಗಿ ವಿಜ್ಞಾನವನ್ನು ಕಾಣುತ್ತಾರೆ..... ಉಗ್ರಗಾಮಿಯಾದ ಧಾರ್ಮಿಕ ವಿಶ್ವಾಸಿಯ ಹಾಗೆ ಅದು ಎಲ್ಲರ ಮುಂದೆ ನಮಗೆ ಪರಿಚಿತವಾಗಿರುವ ಆವಶ್ಯಕತೆಯನ್ನಿರಿಸುತ್ತದೆ; ನನ್ನ ಎದುರಿಗೆ ನಿನಗೆ ಬೇರೆ ದೇವರುಗಳಿಲ್ಲ ಎಂದು."(David Berlinski, The Devil's Delusion-2010).

ಈ ದರ್ಶನಶಾಸ್ತ್ರದ ಅನುಯಾಯಿಗಳು 'ನವ ನಾಸ್ತಿಕರು' ಎಂದು ಕರೆಯಲ್ಪಡುತ್ತಾರೆ. ಪ್ರಾಯೋಗಿಕವಾಗಿ ಸಾಕ್ಷ್ಯಗಳ ಮೂಲಕ ಸಾಬೀತುಗೊಳಿಸಲಾದ ದೇವನನ್ನು ನಂಬುವುದು ವಿಚಾರಹೀನತೆ ಎಂದು ಅವರು ನಂಬುತ್ತಾರೆ. ವಾಸ್ತವಿಕತೆಗಳ ರಹಸ್ಯಗಳನ್ನು ಕಂಡುಹಿಡಿಯಲು ವೈಜ್ಞಾನಿಕ ವಿಧಾನಕ್ಕೆ ಅವರು ಪ್ರಥಮ ಸ್ಥಾನ ನೀಡುತ್ತಾರೆ. ಅವರ ಅಭಿಪ್ರಾಯ ಪ್ರಕಾರ ಯಾವುದಾದರೂ ಸತ್ಯ ವೈಜ್ಞಾನಿಕ ವಿಧಾನಗಳಿಂದ ಸಾಬೀತಾಗುವುದಿಲ್ಲವಾದರೆ ಅದು ಸತ್ಯವೇ ಅಲ್ಲ. ಅದು ಸ್ವಂತ ಇಚ್ಛೆ ಪ್ರಕಾರದ ಯೋಚನೆ ಮತ್ತು ಅತ್ಯಂತ ಕೆಟ್ಟ ಅಜ್ಞಾನಾವಸ್ಥೆಯೂ ಆಗಿದೆ.

ಇಂತಹ ಜನರ ಸಾಮಾನ್ಯ ವಾದವನ್ನು ಸಯಂಟಿಸಮ್ (Scientism) ಎನ್ನುತ್ತಾರೆ. ಅವರು ಹೇಳುವುದೇನೆಂದರೆ, ದೇವನಿದ್ದಾನೆಂಬುದಕ್ಕೆ ಯಾವ ಸಾಕ್ಷ್ಯವೂ ಇಲ್ಲ. ಸಾಕ್ಷ್ಯ ಎಂದು ಅವರು ಹೇಳುವುದು ಪ್ರಯೋಗಿಕವಾಗಿ ಸಾಬೀತಾಗುವುದರ ಕುರಿತಾಗಿದೆ. ನಮ್ಮ ಸುತ್ತಲೂ ಇರುವ ಭೌತಿಕ ವಾಸ್ತವಿಕತೆ ಬಗ್ಗೆ ಮಾಹಿತಿಗಳು ದೊರಕಬೇಕು. ದೇವಾಸ್ತಿತ್ವವನ್ನು ಇತರ ಕಾಲ್ಪನಿಕ ಸಿದ್ಧಾಂತದ ಹಾಗೆ ಪರಿಗಣಿಸಿ ಕಾಲ್ಪನಿಕ ಸಿದ್ಧಾಂತಗಳನ್ನು ವಾಸ್ತವಿಕವೆಂದು ಸಾಬೀತುಗೊಳಿಸುವಂತಹ ಸಾಕ್ಷ್ಯವನ್ನು ಅವರು ಆವಶ್ಯಪಡುತ್ತಾರೆ. ನವ ನಾಸ್ತಿಕರು ಹೇಳುವುದು– ಹೀಗೆ ನಾವು ಆರಾಧಿಸುತ್ತಾ, ಪ್ರೀತಿಸುತ್ತಾ, ಭಯಪಡುತ್ತಾ ಒಂದು ಅಸ್ತಿತ್ವಕ್ಕೆ ಸಂಬಂಧಿಸಿ ವರ್ತಿಸುತ್ತಾ ಜೀವಿಸುವುದಾದರೆ ಆ ಅಸ್ತಿತ್ವದ ಬಗ್ಗೆ ನಮಗೆ ಭೌತಿಕಶಾಸ್ತ್ರ, ರಸಾಯನ ಶಾಸ್ತ್ರದ ಸಿದ್ಧಾಂತಗಳ ಹಾಗೆ ಸಾಕ್ಷ್ಯಗಳು ದೊರಕಬೇಕು. ಕೇವಲ ಕೆಲ ವ್ಯಕ್ತಿಗಳ ಅನುಭವ ಜ್ಞಾನ ಸಾಕಾಗಲಾರದು. ಆವಶ್ಯಕರವಾದುದು ನಿಖರವಾದ ಪುರಾವೆಯಾಗಿದೆ.

**ನವ ನಾಸ್ತಿಕರ ಮೌಢ್ಯ:** ನವ ನಾಸ್ತಿಕರ ಈ ವಾದ ಅಸಮಂಜಸವಾ

ಗಿದೆ. ಒಬ್ಬ ಆಸ್ತಿಕ ಒಂದು ಕಡೆಗೆ ಬೊಟ್ಟುಮಾಡಿ 'ನೋಡು ಅಲ್ಲಿ ದೇವನಿದ್ದಾನೆ' ಎಂದು ತೋರಿಸಿಕೊಡಲಾರ. ಅದೇ ರೀತಿ ಬೀಜಗಣಿತದ ಒಂದು ಸಮೀಕರಣ ಮೂಲಕ ದೇವನನ್ನು ಕಂಡುಹಿಡಿಯಲಾರ. ಆದರೆ ಸಾಕ್ಷ್ಯದ ಕುರಿತು ಬೇಡಿಕೆ ಸರಿಯಾದುದೇ ಆಗಿದ್ದರೂ ನವ ನಾಸ್ತಿಕರು ಆವಶ್ಯಪಡುವ ರೀತಿಯ ಸಾಕ್ಷ್ಯ ಸಮಂಜಸವಾದುದಲ್ಲ. ನವ ನಾಸ್ತಿಕರು ಪ್ರಾಯೋಗಿಕವಾಗಿ ಸ್ಥಾಪಿಸುವ ಸಾಕ್ಷ್ಯವನ್ನು ಆವಶ್ಯಪಡುತ್ತಿದ್ದಾರೆ. ಅವರು ದೇವನ ಅಸ್ತಿತ್ವದ ಬಗ್ಗೆ ನೇರವಾದ ಭೌತಿಕ ಸಾಕ್ಷ್ಯವನ್ನು ಆವಶ್ಯಪಡುತ್ತಾರೆ. ವಿಜ್ಞಾನವನ್ನು ಎತ್ತಿ ಹಿಡಿಯುವ ಅವರ ಉತ್ಸಾಹದಲ್ಲಿ ಅವರು ಮುಖ್ಯ ವಿಷಯವನ್ನು ಮರೆತಿದ್ದಾರೆ. ಸಂಶೋಧನೆಯ ರೀತಿ ಸಂಶೋಧನೆಗೆ ಒಳಗಾಗುವ ವಸ್ತುವಿಗೆ ಅನುಸಾರವಾಗಿರಬೇಕು. ನಾವು ಸಂಶೋಧನೆಯನ್ನು ತಪ್ಪು ರೀತಿಯಲ್ಲಿ ಮಾಡುವುದಾದರೆ ನಾವು ತಪ್ಪು ಪುರಾವೆಗಳನ್ನು ಗಳಿಸುವೆವು ಮತ್ತು ನಮ್ಮ ಪ್ರಯತ್ನಗಳು ನಿಷ್ಫಲವಾಗುವುವು. ಮನುಷ್ಯನ ಜೀವಕೋಶದ ಆಂತರಿಕ ಸ್ಥಿತಿಯನ್ನು ಟೆಲಸ್ಕೋಪಿನಿಂದ ನೋಡಲು ಸಾಧ್ಯವಾಗದು. ಭೂಕಂಪವನ್ನು ಗೈಗರ್ ಗಣಕದಿಂದ ಅಳೆಯಲು ಸಾಧ್ಯವಿಲ್ಲ. ನಾವು ಸಂಶೋಧಿಸಲು ಉದ್ದೇಶಿಸುವ ವಸ್ತುವಿಗೆ ಅನುಸಾರವಾಗಿ ನಾವು ಸಂಶೋಧನೆ ನಡೆಸಬೇಕು.

ದೇವನೆಂದರೆ ಒಂದು ವಸ್ತುವಲ್ಲ. ಅವನು ಒಂದು ದೇಹ ಹೊಂದಿರುವವನಲ್ಲ. ಭೌತಿಕ ವಸ್ತುಗಳ ಮಿಶ್ರಣವೂ ಅವನಲ್ಲ. ಅವನು ಎಲ್ಲ ಭೌತಿಕ ವಸ್ತುಗಳ ಸೃಷ್ಟಿಕರ್ತನೂ ಪರಿಪಾಲಕನೂ ಆಗಿದ್ದಾನೆ. ವಿಶ್ವದ ಸೃಷ್ಟಿಕರ್ತನೇ ವಿಶ್ವವಾಗಲಾರ ಎಂಬುದು ಸ್ವತಃಸಿದ್ಧವಾಗಿದೆ. ಜಡವಸ್ತು, ಶಕ್ತಿ, ಸ್ಥಳ, ಸಮಯ ಮೊದಲಾದುವುಗಳಿಗೆ ಅತೀತನಾದವನು ಅವುಗಳೊಂದಿಗೆ ಬಂಧಿತನಾಗಲಾರನು. ಅಂತಹ ಅಸ್ತಿತ್ವದ ಬಗ್ಗೆ ಭೌತಿಕ, ಪ್ರಾಯೋಗಿಕ ಸಾಕ್ಷ್ಯವನ್ನು ಹುಡುಕುವುದು ಸಂಪೂರ್ಣವಾಗಿ ಅನುಚಿತವಾಗಿದೆ ಮತ್ತು ಹಾಗೆ ಮಾಡುವುದು ನಿರಾಶಾಜನಕವಾಗುವುದು.

**ಪ್ರಾಯೋಗಿಕ ಸಾಕ್ಷ್ಯಗಳ ಮಿತಿ:** ಈ ವಿಷಯಕ್ಕೆ ಸಂಬಂಧಿಸಿ ದೇವನ ಬಗ್ಗೆ ಮಾತ್ರವಲ್ಲ, ವೈಜ್ಞಾನಿಕ ಒಮ್ಮತದ ಅಭಿಪ್ರಾಯವೇನೆಂದರೆ, ಪ್ರಾಯೋಗಿಕ ಸಾಕ್ಷ್ಯದ ಅಭಾವದಿಂದ ಒಂದು ವಸ್ತು ಇಲ್ಲವೆಂದಾಗುವುದಿಲ್ಲ. ಉದಾಹರಣೆಗೆ, ಭೌತಿಕ ಶಾಸ್ತ್ರಜ್ಞರು ಹೇಳುವುದೇನೆಂದರೆ, ವಿಶ್ವದ ಶೇಖಡ 95ರಷ್ಟು ಭಾಗ ನಮಗೆ ಸಂಪೂರ್ಣ ಮರೆಯಾಗಿದೆ. ಆ ಭಾಗವನ್ನು ನಮ್ಮ ಯಾವುದೇ ಸೂಕ್ಷ್ಮ ಉಪಕರಣಗಳು ಭೌತಿಕವಾಗಿ ಪತ್ತೆ ಹಚ್ಚಲಾರವು. ನಾವು ಕಾಣುವುದು, ಅನುಭವಿಸುವುದು ಮತ್ತು ಪತ್ತೆ ಹಚ್ಚುವುದು ವಿಶ್ವದ ಶೇಖಡ 5 ಭಾಗವನ್ನು ಮಾತ್ರವಾಗಿದೆ. ಉಳಿದ ಭಾಗ ಕಪ್ಪು ಪದಾರ್ಥವೂ ಕಪ್ಪು ಶಕ್ತಿಯೂ ಆಗಿದೆ. ಅದರ ಅಸ್ತಿತ್ವವನ್ನು ಪತ್ತೆ ಹಚ್ಚಿರುವುದು ನಾವು ಕಾಣುವ ಮತ್ತು ಅನುಭವಿಸುವುದರ ಮೇಲೆ ಅದುಂಟುಮಾಡುವ ಪ್ರಭಾವದ ಮೂಲಕವಾಗಿದೆ.

ನಕ್ಷತ್ರಗಳ ಬಗ್ಗೆ ಸಂಗ್ರಹಿಸಿದ ದತ್ತಾಂಶಗಳು ಮತ್ತು ಅಂತರ್ ದೃಷ್ಟಿಯಿಂದ ಗಳಿಸಿದ ಅಂತರಂಗ ವೀಕ್ಷಣೆ ಬೇರೆ ಬೇರೆಯಾಗಿವೆ. ನಾವು ಪ್ರಜ್ಞೆಯುಳ್ಳ ಜೀವಿಗಳಾಗಿದ್ದೇವೆ. ಪ್ರಜ್ಞೆ ನಮ್ಮ ಅನನ್ಯತೆಯ ಮುಖ್ಯ ಸಾರವಾಗಿದೆ. ಹೀಗಿದ್ದರೂ ಯಾವುದೇ ವಿಜ್ಞಾನಿ ಆಲೋಚನೆ, ಭಾವನೆ ಅಥವಾ ನೆನಪನ್ನು ಪ್ರತ್ಯೇಕಿಸಿ ತೋರಿಸಿದ್ದಾನೆಯೇ? ನಮ್ಮ ಪ್ರಜ್ಞೆಯ ಅನುಭವ ಬೇರೆಯೇ ಸ್ವರೂಪದ್ದೆಂದು ಸ್ವಲ್ಪ ಮಾತ್ರ ಯೋಚಿಸಿದರೆ ತಿಳಿಯಬಹುದಾಗಿದೆ. ಅದು ವಿದ್ಯುತ್ ಶಕ್ತಿಯಿಂದ ಮಾಡಲಾಗುವ ಬ್ರೈನ್ ಸ್ಕ್ಯಾನ್‌ಗಳಿಂದ ಸಂಪೂರ್ಣ ವ್ಯತ್ಯಾಸವಾಗಿದೆ. ಆಧುನಿಕ ವಿಜ್ಞಾನದ ಉಪಕರಣಗಳು ಅವುಗಳ ವ್ಯತ್ಯಾಸ ಕಂಡುಹಿಡಿದಿಲ್ಲ.

ಅಲ್ಲಿರುವ ಕಪ್ಪು ಪದಾರ್ಥ ಮತ್ತು ಕಪ್ಪು ಶಕ್ತಿ ಬಗ್ಗೆಯಾಗಲೀ ಇಲ್ಲಿರುವ ಪ್ರಜ್ಞೆಯ ಬಗ್ಗೆಯಾಗಲೀ ಯಾವುದೇ ನೇರವಾದ ಒಂದಿಷ್ಟು ಪ್ರಾಯೋಗಿಕ ಸಾಕ್ಷ್ಯವಿಲ್ಲದಿದ್ದರೂ ವೈಜ್ಞಾನಿಕ ವಿಚಾರಗಳು ಅವುಗಳನ್ನು ಅಂಗೀಕರಿಸುತ್ತವೆ. ಒಂದು ವಸ್ತು ಸೂಕ್ಷ್ಮತರವಾಗಿರುವಾಗ ನಾವು ಅಂತಹ ವಸ್ತುವನ್ನು ನಮ್ಮ ಬಾಹ್ಯ ಇಂದ್ರಿಯಗಳಿಂದ ಗುರುತಿಸಲು ಸಾಧ್ಯವಾಗುವುದಿಲ್ಲ. ಅದರ ಬಗ್ಗೆ ಪ್ರಾಯೋಗಿಕ ಸಾಕ್ಷ್ಯ ಸಹ ದೊರಕಿಸಲಾಗುವುದಿಲ್ಲ. ನಾವು ಅದರ ಪ್ರಭಾವವನ್ನು ಮಾತ್ರ ಅಳೆಯಲು ಶಕ್ತರಾಗುವೆವು. ದೇವನ ಅಸ್ತಿತ್ವದ ಅನ್ವೇಷಣೆಯಲ್ಲಿ ಇದು ಅಮೂಲ್ಯ ಮಾರ್ಗದರ್ಶನ ನೀಡುತ್ತದೆ. ದೇವನು ಅಸ್ತಿತ್ವದಲ್ಲಿ ಇದ್ದರೆ ಅವನು ಅತ್ಯಂತ ಸೂಕ್ಷ್ಮ ಅಸ್ತಿತ್ವವನ್ನು ಹೊಂದಿರಬೇಕಾಗಿದೆ. ಅವನು ಬೇರೆ ಪ್ರತಿಯೊಂದರ ಅಸ್ತಿತ್ವದ ಮೂಲ ಕಾರಣವಾಗಿದ್ದಾನೆ. ಅವನು ಅಸ್ತಿತ್ವದ ಸಾರವಾಗಿದ್ದಾನೆ. ನಮ್ಮ ವಿಜ್ಞಾನ ಬಾಹ್ಯ ಜಗತ್ತಿನ ಶೇಖಡ 95 ಭಾಗವನ್ನು ಪತ್ತೆಹಚ್ಚಲು ಅಸಮರ್ಥವಾಗಿರುವಾಗ ಅದಕ್ಕೆ ದೇವನನ್ನು ಪತ್ತೆ ಹಚ್ಚಲು ಹೇಗೆ ತಾನೆ ಸಾಧ್ಯವಾಗುವುದು? ಪವಿತ್ರ ಖುರ್‌ಆನ್ ದೇವನ ಬಗ್ಗೆ ಸುಂದರವಾಗಿ ಸಾರಾಂಶ ರೂಪದಲ್ಲಿ ಹೀಗೆ ಹೇಳಿದೆ: "ದೃಷ್ಟಿಗಳು ಅವನನ್ನು ತಲಪಲಾರವು. ಆದರೆ ಅವನು ದೃಷ್ಟಿಗಳನ್ನು ತಲಪುತ್ತಾನೆ. ಅವನು ಅತಿ ಸೂಕ್ಷ್ಮನೂ ಎಲ್ಲ ಬಲ್ಲವನೂ ಆಗಿದ್ದಾನೆ." (ಪವಿತ್ರ ಖುರ್‌ಆನ್ 6:104).

ನಮ್ಮ ಭೌತಿಕ ಇಂದ್ರಿಯಗಳು ದೇವನನ್ನು ತಲಪಲಾರವು. ಏಕೆಂದರೆ ಅವನು ಅತಿ ಸೂಕ್ಷ್ಮನಾಗಿದ್ದಾನೆ. ಆದರೆ ಕಪ್ಪು ಪದಾರ್ಥ ಮತ್ತು ಕಪ್ಪು ಶಕ್ತಿ ಹಾಗಿರುವ ಭೌತಿಕ ಅಪೂರ್ವ ವಸ್ತುಗಳ ಹಾಗೆ ದೇವನನ್ನು ಕಂಡು ಹಿಡಿಯಲು ನಮ್ಮ ಪ್ರಯತ್ನಗಳ ಮೇಲೆ ಅವನು ಅವಲಂಬಿತನಾಗಿಲ್ಲ. ನಾವು ಕೇವಲ ಊಹೆಯನ್ನು ಮತ್ತು ನಿಷ್ಕರ್ಷಾತ್ಮಕ ಸಾಕ್ಷ್ಯವನ್ನು ಅವಲಂಬಿಸಬೇಕಾಗಿಲ್ಲ. ನಾವು ಅವನನ್ನು ನೇರವಾಗಿ ಕಾಣಬೇಕೆಂಬ ಆವಶ್ಯಕತೆಯನ್ನು ಹೊಂದಿದ್ದೇವೆ ಎಂದು ಅವನಿಗೆ ತಿಳಿದಿದೆ ಎಂದು ಖುರ್‌ಆನ್ ಸಾರುತ್ತದೆ. "ಅವನು ದೃಷ್ಟಿಗಳನ್ನು ತಲಪುತ್ತಾನೆ" ಎಂದರೆ ಅವನು ತನ್ನ ಮೂಲಕವೇ ತನ್ನನ್ನು ಅತ್ಯಂತ ಉಚಿತವಾದ ರೀತಿಯಲ್ಲಿ ಮಾನವರಿಗೆ ಪ್ರಕಟಿಸುತ್ತಾನೆ.

**ಸಿಡಿಲು ಮಿಂಚು:** ಆದರೆ ಅತ್ಯಂತ ಉಚಿತವಾದ ರೀತಿ ಯಾವುದು? ದೇವನು ಪ್ರಾಯೋಗಿಕ ಸಾಕ್ಷ್ಯಗಳ ಮೂಲಕ ಪತ್ತೆ ಹಚ್ಚಲು ಸಾಧ್ಯವಿಲ್ಲದ ಅತಿಸೂಕ್ಷ್ಮ ಅಸ್ತಿತ್ವವೆಂದು ನವ ನಾಸ್ತಿಕರು ಅಂಗೀಕರಿಸಿದರೂ ದೇವನು ಸ್ಪಷ್ಟವಾಗಿ ತನ್ನನ್ನು ನೈಸರ್ಗಿಕ ಪ್ರಕ್ರಿಯೆಗಳ ಮೂಲಕ ಪ್ರಕಟಿಸಬೇಕೆಂದು ಅವರು ವಾದಿಸಬಹುದು ದೇವನು ವಾಸ್ತವಿಕವಾಗಿ ಸರ್ವಶಕ್ತನಾಗಿದ್ದರೆ ನಾವು ಕಾಣುವ ಹಾಗೆ ಅವನು ಏಕೆ ತನ್ನನ್ನು ಪ್ರಕಟಿಸುವುದಿಲ್ಲ? ಉದಾಹರಣೆಗೆ, ಒಬ್ಬ ನಾಸ್ತಿಕ ತನ್ನ ಅವಿಶ್ವಾಸವನ್ನು ಪ್ರಕಟಿಸುವಾಗ ಆಕಾಶದಿಂದ "ನೀನು ನನ್ನ ಬಗ್ಗೆ ಸಂಶಯ ಪಡುತ್ತಿರುವೆಯೋ? ಎಂದು ಏಕೆ ಗುರುಗುಟ್ಟುವುದಿಲ್ಲ. ಒಬ್ಬ ನಾಸ್ತಿಕನು ಪರಿಹಾಸ ಮಾಡುತ್ತಾ ತನ್ನನ್ನು ಸಿಡಿಲು ಮಿಂಚು ಬಡಿಯಲಿ ಎಂದು ಹೇಳುವಾಗ ದೇವನು ಏಕೆ ಹಾಗೆ ಮಾಡುವುದಿಲ್ಲ? ದೇವನಿಗೆ ಹಾಗೆ ಮಾಡಲು ಸಾಮರ್ಥ್ಯವಿದ್ದರೆ ಅವನನ್ನು ಅದರಿಂದ ತಡೆಯುವುದಾದರೂ ಏನು? ಎಂದು ನಾಸ್ತಿಕರು ಕೇಳುತ್ತಾರೆ.

ಈ ಪ್ರಶ್ನೆಗಳಿಗಿರುವ ಉತ್ತರವೇನೆಂದರೆ, ಧರ್ಮ ಪ್ರತಿಪಾದಿಸುವ ದೇವನ ಬಗ್ಗೆ ನಾಸ್ತಿಕರು ಚಿಂತಿಸಬೇಕು. ದೇವನು ಸರ್ವಶಕ್ತನೆಂದು

ಧರ್ಮ ಕಲಿಸುತ್ತಿದೆಯಾದರೂ ಅವನು ಜಾಣ್ಮೆಯುಳ್ಳವನೆಂದು ಸಹ ಧರ್ಮ ಹೇಳುತ್ತದೆ. ಅವನು ತನ್ನ ಸೃಷ್ಟಿಯ ಉದ್ದೇಶವನ್ನು ಈಡೇರಿಸುವ ರೀತಿಯಲ್ಲಿ ತನ್ನ ಸಂದೇಶವನ್ನು ತಲಪಿಸುವ ವಿಧಾನವನ್ನು ಆಯ್ಕೆ ಮಾಡುವನು.

ನಾಸ್ತಿಕರು ಆವಶ್ಯಪಡುತ್ತಿರುವ ರೀತಿಯಲ್ಲಿ ದೇವನು ತನ್ನನ್ನು ಪ್ರಕಟಿಸುವುದು ಅವನ ಉದ್ದೇಶ ಲಕ್ಷ್ಯಗಳಿಗೆ ವಿರುದ್ಧವಾಗಿರುತ್ತದೆ. ಅವನು ಸೃಷ್ಟಿಸಿ ಉದ್ದೇಶಿಸುವುದೇನೆಂದರೆ ನಾವು ಅವನನ್ನು ತಿಳಿದುಕೊಳ್ಳಲು ಪ್ರಯತ್ನಿಸಬೇಕು ಎಂದಾಗಿದೆ. ಆ ಮೂಲಕ ನಾವು ಅವನೊಂದಿಗೆ ಸಂಬಂಧ ಸ್ಥಾಪಿಸಲು ಅರ್ಹರಾಗಬೇಕು. ದೇವನ ಅಸ್ತಿತ್ವ ಸೂರ್ಯ ಚಂದ್ರರ ಹಾಗೆ ಬಹಿರಂಗವಾಗಿ ಪ್ರಕಟವಾಗಿರುವುದಾದರೆ ಅವನನ್ನು ನಂಬುವುದರಲ್ಲಿ ಯಾವ ಶ್ರೇಷ್ಠತೆಯೂ ಇರುವುದಿಲ್ಲ. ಪ್ರತಿಯೊಬ್ಬನಿಗೆ ವಿಶ್ವಾಸವು ಆವಶ್ಯಕವಾಗಿದೆ. ವಿಶ್ವಾಸವಿಲ್ಲದೆ ನಾವು ಅನ್ಯರ ಬಗ್ಗೆ ವಿಶ್ವಸ್ತತೆ ಪ್ರಕಟಿಸಲಾರೆವು. ಅಂತರ್ ದೃಷ್ಟಿ ಮತ್ತು ಪರಿಶ್ರಮ ವಿಶ್ವಾಸಕ್ಕೆ ಆವಶ್ಯಕವಾಗಿದೆ. ಈ ಗುಣಗಳನ್ನು ಪ್ರದರ್ಶಿಸಿದರೆ ದೇವನ ಬಹುಮಾನ ಗಳಿಸಲು ಅರ್ಹರಾಗುತ್ತೇವೆ. ಅದಕ್ಕೋಸ್ಕರ ವಾಸ್ತವಿಕವಾಗಿ ಪ್ರೇಮಿಸಬೇಕಾದವನ ಸಾಮೀಪ್ಯ ಪಡೆಯಲು ಪರದೆಯ ಮೂಲಕ ಪರಿಶ್ರಮಿಸಬೇಕಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ:

"ಮೇಘಛಾಯೆಗಳಿಂದ ಅಲ್ಲಾಹನು ಮತ್ತು ದೇವದೂತರು ಅವರ ಬಳಿಗೆ ಬಂದು ಸಂಗತಿಯನ್ನು ಇತ್ಯರ್ಥ ಮಾಡಬೇಕೆಂದಲ್ಲದೆ ಬೇರೇನನ್ನಾದರೂ ಅವರು (ಅವಿಶ್ವಾಸಿಗಳು) ನಿರೀಕ್ಷಿಸುತ್ತಾರೆಯೇ? ಎಲ್ಲ ಸಂಗತಿಗಳು ಅಲ್ಲಾಹನೆಡೆಗೆ ಮರಳಿಸಲ್ಪಡುತ್ತವೆ." (ಪವಿತ್ರ ಖುರ್‌ಆನ್ 2:211).

**ದೇವನ ಬಗ್ಗೆ ಊಹಾಪೋಹ:** ದುರದೃಷ್ಟಕರವಾಗಿ ಅನೇಕ ನಾಸ್ತಿಕರು ದೇವನ ಜಾಣ್ಮೆ ಬಗ್ಗೆ ಆಲಿಸಲು ಸಿದ್ಧರಾಗಲಾರರು. ಏಕೆಂದರೆ ಅವರಲ್ಲಿ ಬಹುತೇಕ ಜನರು ನಂಬದಿರುವ ಬಗ್ಗೆ ತೀರ್ಮಾನಿಸಿದ್ದಾರೆ ಮತ್ತು ಅವರು ಯಾವುದೇ ಹೊಸ ಸಾಕ್ಷ್ಯವನ್ನು ಹಿಂದಿನ ಸಾಕ್ಷ್ಯಗಳನ್ನು ತಿರಸ್ಕರಿಸಿದ ಹಾಗೆಯೇ ತಿರಸ್ಕರಿಸುವರು. ಮೇಲೆ ನಾನು ಬರೆದ ಉದಾಹರಣೆಗಳನ್ನು ನೋಡಿರಿ. ದೇವನು ತನ್ನ ಅಸ್ತಿತ್ವವನ್ನು ಪ್ರತಿಧ್ವನಿಸುವ ಶಬ್ದದೊಂದಿಗೆ ಆಕಾಶದಲ್ಲಿ ಪ್ರಕಟಿಸುವುದಾದರೆ ನಾಸ್ತಿಕರು ಅದನ್ನು ಸಂಶಯ ದೃಷ್ಟಿಯಿಂದ ಕಾಣಲಾರರೆ? ಖೇದಕರವಾದುದೇನೆಂದರೆ ಅವರು ಹಾಗೆಯೇ ಕಾಣುವರು. ಒಬ್ಬ ಪ್ರಮುಖ ನಾಸ್ತಿಕ ರಿಚರ್ಡ್ ಡಾಕಿನ್ಸ್ ಹೇಳಿದುದನ್ನು ಗಮನಿಸಿರಿ:

ಸಂದರ್ಶಕ: "ನೀವು ದೇವಾಸ್ತಿತ್ವದಲ್ಲಿ ನಂಬುವಂತೆ ಮಾಡಬಹುದಾದುದು ಏನು?"

ಡಾಕಿನ್ಸ್: "ಅದು ಬಹಳ ಸುಲಭ ಎಂದು ನಾನು ಹೇಳಿದ್ದೆ. ಯೇಸುಕ್ರಿಸ್ತರ ದ್ವಿತೀಯಾಗಮನ ಅಥವಾ ಮೊಳಗುವ ಒಂದು ಗಂಭೀರ ಶಬ್ದ 'ನಾನು ದೇವನು' ಎಂದು ಹೇಳಬೇಕು. ಆದರೆ ನನಗೆ ತೋರುವುದೇನೆಂದರೆ ದ್ವಿತೀಯಾಗಮನ ಕಾಲದಲ್ಲಿ ಮೊದಲಿಗೆ ಮೊಳಗುವ ಶಬ್ದ ಕೇಳಿಸಿದರೂ ಆಗ ಪ್ರಾಯಶಃ ಹೀಗೆ ವಿಶದೀಕರಿಸಬಹುದು– ಅದೊಂದು ಮನೋವಿಕಲ್ಪ ಎಂದು ಅಥವಾ ಅದು ಡೇವಿಡ್ ಕೊಪರ್ ಫೀಲ್ಡ್ ರಚಿಸಿದ ಮಾಯಾಜಾಲ ಎಂದು."

ಸಂದರ್ಶಕ: "ಹಾಗಾದರೆ ನಿಮ್ಮನ್ನು ನಂಬುವಂತೆ ಮಾಡಬಲ್ಲದು ಏನು?"

ಡಾಕಿನ್ಸ್: "ನಾನು ಯೋಚಿಸುದೇನೆಂದರೆ, ಏನೂ ನನ್ನ ನಿಲುವನ್ನು ಬದಲಾಯಿಸದು. ಒಬ್ಬ ವಿಜ್ಞಾನಿ ಹೊಸ ಸಾಕ್ಷ್ಯ ದೊರೆತರೆ ತನ್ನ ಅಭಿಪ್ರಾಯವನ್ನು ಬದಲಾಯಿಸಬೇಕೆಂಬ ನನ್ನ ದೃಢ ನಿಲುವಿಗೆ ಅದು ವಿರುದ್ಧವಾಗಿದ್ದರೂ ಸಹ."

(ರಿಚರ್ಡ್ ಡಾಕಿನ್ಸ್ ತನ್ನ ಸಂದರ್ಶಕ ಪೀಟರ್ ಬೋಗೋಸಿಯನ್ ಜೊತೆ ಮಾತುಕತೆಯಲ್ಲಿ. ಯೂಟ್ಯೂಬ್ ಅಕ್ಟೋಬರ್ 11 2013).

ಡಾಕಿನ್ಸ್ ದಿಗ್ಭ್ರಮೆ ಗೊಳಿಸುವ ನಿರ್ಲಜ್ಜತೆಯಿಂದ ನವ ನಾಸ್ತಿಕರ ಮನೋಭಾವವನ್ನು ಪ್ರಕಟಿಸಿದ್ದಾನೆ. ನವ ನಾಸ್ತಿಕರು ದೇವನ ಅಸ್ತಿತ್ವವನ್ನು ನಂಬಲಾರರು. ಏಕೆಂದರೆ ಅವರ ಅಭಿಪ್ರಾಯದಲ್ಲಿ ದೇವನಿರಲು ಸಾಧ್ಯವೇ ಇಲ್ಲ. ಅವರ ಭಾವೋದ್ವೇಗ ಭರಿತ ನಿರಾಕರಣೆ ಯಾವುದಾದರೂ ಸಾಕ್ಷ್ಯವನ್ನು ಪರಿಗಣಿಸುವ ಬಗ್ಗೆ ಕುರುಡಾಗಿದೆ. ವಿಶ್ವವನ್ನು ಸೂಕ್ಷ್ಮವಾಗಿ ರೂಪೀಕರಿಸಿದ ದೈವಿಕ ಯೋಜನೆಯು ಸ್ಪಷ್ಟವಾಗಿ ಕಾಣಿಸುತ್ತಿದ್ದರೂ ಅದನ್ನು ಅಸಂಬದ್ಧವಾಗಿ ಅವರು ನಿರಾಕರಿಸುವುದನ್ನು ನಾವು ಕಾಣುತ್ತಿದ್ದೇವೆ. ನಾಸ್ತಿಕರಾದ ವಿಜ್ಞಾನಿಗಳು ದೇವನ ಪ್ರಜ್ಞಾಪೂರ್ವಕವಾದ ಸೃಷ್ಟಿ ಎಂಬ ತತ್ವದಿಂದ ಓಡಿ ಹೋಗಿರುವರು. ಅವರು ಅಸಮಂಜಸವಾದ ವಾದಗಳನ್ನು ಮುಂದಿಟ್ಟಿರುವರು. ಅವರ ಬಗ್ಗೆ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್, ಚತುರ್ಥ ಖಲೀಫರು ತನ್ನ ಗ್ರಂಥವಾದ ರೆವಲೇಶನ್, ರೇಶನೇಲಿಟಿ, ನೋಲೇಜ್ ಆ್ಯಂಡ್ ರಿಲೀಜಿಯನ್ (Revelation, Rationality, Knowledge & Religion )ನಲ್ಲಿ ಹೀಗೆ ಹೇಳಿದ್ದಾರೆ: "ಅವರು ಮೊದಲನೆಯದಾಗಿ ನಾಸ್ತಿಕರಾಗಿದ್ದಾರೆ ಮತ್ತು ಅನಂತರ ವಿಜ್ಞಾನಿಗಳಾಗಿದ್ದಾರೆ." ಅವರು ನಿರಾಧಾರವಾದ ಲೌಕಿಕ ವಿಶದೀಕರಣಗಳ ಬಗ್ಗೆ ದೃಢ ವಿಶ್ವಾಸ ಹೊಂದಿದ್ದಾರೆ. ಅವರ ಮುಂದಿರುವ ವಾಸ್ತವಿಕಾಂಶಗಳನ್ನು ಅವರು ಕಡೆಗಣಿಸುತ್ತಾರೆ. ಪವಿತ್ರ ಖುರ್‌ಆನ್ ಈ ಮನೋಭಾವದ ಬಗ್ಗೆ ಹೀಗೆ ಹೇಳಿದೆ: "ನಾವು ಅವರಿಗೆ ಆಕಾಶದ ಬಾಗಿಲನ್ನು ತೆರೆದುಕೊಟ್ಟು ಅದರ ಮೂಲಕ ಅವರು ಮೇಲೇರುತ್ತಿದ್ದರೆ (ಸಹ) ಅವರು ಹೇಳುವರು: ನಮ್ಮ ಕಣ್ಣುಗಳಿಗೆ ಮಂಕು ಕವಿದಿದೆ; ನಾವು ಮೋಡಿಗೊಳಿಸಲ್ಪಟ್ಟವರಾಗಿದ್ದೇವೆ." (ಪವಿತ್ರ ಖುರ್‌ಆನ್ 15:15,16).

**ವೈಜ್ಞಾನಿಕ ರೀತಿಯ ಮೂಲ ತತ್ವ:** ದೇವನ ಬಗ್ಗೆ ಭೌತಿಕ ಸಾಕ್ಷ್ಯ ನೀಡುವುದು ಅಸಾಧ್ಯವೆಂದು ನಾವು ವಿವರಿಸಿದ್ದೇವೆ. ಅವನ ಅಸ್ತಿತ್ವದ ಬಗ್ಗೆ ಅವನು ನಾಜೂಕಾಗಿಲ್ಲದ ಸಾಕ್ಷ್ಯವನ್ನು ನೀಡುವುದಿಲ್ಲ. ಹಾಗಾದರೆ ನಾವು ಅವನ ಅಸ್ತಿತ್ವದ ಬಗ್ಗೆ ಯಾವ ಸಾಕ್ಷ್ಯವನ್ನು ನೋಡಬೇಕು?

ಇದಕ್ಕೆ ಉತ್ತರ ಕಂಡುಹಿಡಿಯಲು ನಾವು ವಿಶ್ವದಲ್ಲಿ ದೇವ ನಿರ್ಮಿತ ಸುವ್ಯವಸ್ಥೆ ಕಡೆಗೆ ನೋಡಬೇಕು. ಆಧುನಿಕ ಕಾಲದ ಆಸ್ತಿಕವಾದಿಗಳು ವಿಶದೀಕರಿಸುವ ಮುಖ್ಯ ಅಂಶ ಇದೇ ಆಗಿದೆ. ಅವರು ಚಾತುರ್ಯಪೂರ್ವಕವಾಗಿ ಹೀಗೆ ವಿಶದೀಕರಿಸುತ್ತಾರೆ: ಆಧುನಿಕ ವಿಜ್ಞಾನದ ಸಂಶೋಧನೆಗಳು ಆವಶ್ಯಪಡುವುದೇನೆಂದರೆ ಅಮೂರ್ತ, ಶಾಶ್ವತ, ಪ್ರಜ್ಞಾಮತನಾದ ಒಬ್ಬ ನಿಯೋಜಕನು ವಿಶ್ವಕ್ಕೆ ಇದ್ದಾನೆಂದು. ಅವರ ವಾದಗಳು ಸುಸಂಬದ್ಧ ಮತ್ತು ನಂಬುವಂತಹದ್ದು ಆಗಿವೆ. ಆದರೆ ಈ ವಾದಗಳನ್ನು ಮಾತ್ರ ಅವಲಂಬಿಸುವುದು ಸಾಕಾಗಲಾರದು. ದೇವನು ನಮ್ಮನ್ನು ಸೃಷ್ಟಿಸಿದ್ದರೆ ಅವನ ಅಸ್ತಿತ್ವವನ್ನು ಅರಿತುಕೊಳ್ಳಲು ಸಾಧ್ಯವಾಗುವಂತೆ ಮಾಡುವ ಬೇರೆ ವಿಧಾನಗಳನ್ನು ಒದಗಿಸಿರಬೇಕು. ಕೇವಲ ಪ್ರಕೃತಿಯ ಅದ್ಭುತಗಳನ್ನು ಮಾತ್ರ ಅವಲಂಬಿಸಿ ಮಾಡುವ ವೈಚಾರಿಕ ತರ್ಕಗಳು ಸಾಕಾಗಲಾರವು.

ಇದಕ್ಕಿಂತ ಹೆಚ್ಚು ಚೆನ್ನಾಗಿ ಮನಗಾಣಿಸುವ ವಿಧಾನಗಳಿಲ್ಲವೇ? ಪ್ರಕೃತಿಯ ವಿದ್ಯಮಾನಗಳಿಂದ ಕೇವಲ ದೇವನಿರಬಹುದು ಎಂಬ ವಿಶ್ವಾಸಕ್ಕೆ ಮಾತ್ರ ತಲಪಬಹುದಾಗಿದೆ. ಆದರೆ ಖಂಡಿತವಾಗಿ ದೇವನಿದ್ದಾನೆಂದು ಅವು ಮನವರಿಕೆ ಮಾಡಲಾರವು.

ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಹೀಗೆ ಬರೆದಿದ್ದಾರೆ: "ದೇವನಿರಬೇಕು ಎಂದು ಮಾತ್ರ ಅವರು ಸ್ಥಾಪಿಸುತ್ತಾರೆಯೇ ಹೊರತು ದೇವನಿದ್ದಾನೆ ಎಂದು ದೃಢವಾಗಿ ಅವರು ಸಾಬೀತುಗೊಳಿಸುವುದಿಲ್ಲ. ನಾವು ದೇವನ ಅಸ್ತಿತ್ವವನ್ನು ದೃಢವಾಗಿ ಮನದಟ್ಟು ಮಾಡುವಾಗ ನಮಗೆ ಲಭಿಸುವ ಸಮಾಧಾನ ಅವರ ವಾದಗಳಿಂದ ನಮಗೆ ಲಭಿಸುವುದಿಲ್ಲ."

ದೇವನ ಅಸ್ತಿತ್ವದ ಬಗ್ಗೆ ದೃಢನಂಬಿಕೆ ಗಳಿಸುವುದು ಹೇಗೆ? ಇದಕ್ಕೋಸ್ಕರ ನಾವು ದೇವಸಾಮೀಪ್ಯ ಗಳಿಸಿದವರೆಂದು ಹಿಂದೆ ವಾದಿಸಿದವರ ಕಡೆಗೆ ತಿರುಗಬೇಕು. ಇದು ವೈಜ್ಞಾನಿಕ ರೀತಿಯೇ ಆಗಿದೆ. ನಾವು ವೈಜ್ಞಾನಿಕ ಲೋಕದಲ್ಲಿ ಕಾಣುವುದೇನೆಂದರೆ ನಾವು ಒಂದು ವೈಜ್ಞಾನಿಕ ವಿದ್ಯಮಾನಕ್ಕೆ ಪುರಾವೆ ಗೊತ್ತುಹಚ್ಚಲು ಹಿಂದೆ ಆ ವಿದ್ಯಮಾನವನ್ನು ಕಂಡವರ ಬರಹಗಳನ್ನು ಓದುತ್ತೇವೆ ಮತ್ತು ಅವರು ಮಾಡಿದ ಪ್ರಯೋಗಗಳನ್ನು ಮಾಡಿ ಪರಿಣಾಮಗಳನ್ನು ದೃಢೀಕರಿಸುತ್ತೇವೆ. ಆದುದರಿಂದ ನಾವು ಮಾಡಬೇಕಾದ ಮೊದಲನೆಯ ಕೆಲಸ ಅಂತಹ ನಿಪುಣರನ್ನು ಕಂಡು ಹಿಡಿಯುವುದಾಗಿದೆ.

**ನಿಪುಣರನ್ನು ಭೇಟಿಮಾಡಿರಿ:** ಚರಿತ್ರೆ ದಾಖಲಿಸಿರುವುದೇನೆಂದರೆ ಕೆಲವು ಜನರು ವೈಶಿಷ್ಟ್ಯಪೂರ್ಣವಾಗಿದ್ದರು. ಅವರು ತಾವು ದೇವನೊಂದಿಗೆ ಸಂಬಂಧ ಸ್ಥಾಪಿಸಿರುವೆವು ಎಂದು ವಾದಿಸಿದ್ದರು. ಅವರು ಜೀವಿಸಿದ್ದ ಸಮಾಜದಲ್ಲಿ ಅವರು ಬುದ್ಧಿಶಾಲಿಗಳೂ ಅಸಾಮಾನ್ಯ ಜ್ಞಾನವುಳ್ಳವರೂ ಆಗಿದ್ದರು. ಅವರು ಬಡವರ ಹಿತ ಸಂರಕ್ಷಕರೂ ಬಡವರಿಗೋಸ್ಕರ ಧನ ತ್ಯಾಗ ಮಾಡಲು ಶ್ರೀಮಂತರನ್ನು ಪ್ರೇರೇಪಿಸುವವರೂ ಆಗಿದ್ದರು. ಅವರು ಲೌಕಿಕ ಆಡಂಬರವನ್ನು ತ್ಯಜಿಸಲು ಮತ್ತು ನೈತಿಕತೆಯನ್ನು ಅಳವಡಿಸಲು ಕಲಿಸಿದರು. ಅವರ ಅನುಯಾಯಿಗಳು ಲೋಕದ ನಾಗರಿಕ ಸಮುದಾಯವನ್ನು ಪುನಶ್ಚೇತನಗೈಯ್ಯುವವರಾದರು. ಅವರ ಹೆಸರು ಅವರ ಅನುಯಾಯಿಗಳಿಗೆ ಪರಮ ಪವಿತ್ರವಾಯಿತು. ಅರಬ್ ದೇಶದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್(ಸ), ಯಹೂದಿಯರಲ್ಲಿ ಮೂಸಾ ಪ್ರವಾದಿ ಮತ್ತು ಈಸಾ ಪ್ರವಾದಿ, ಚೀನದಲ್ಲಿ ಕನ್‌ಫ್ಯೂಶಿಯಸ್, ಭಾರತದಲ್ಲಿ ಶ್ರೀಕೃಷ್ಣ, ಶ್ರೀಬುದ್ಧ, ಗ್ರೀಸ್‌ನಲ್ಲಿ ಸೊಕ್ರಟೀಸ್ ಮೊದಲಾದ ಅಸಂಖ್ಯಾತ ಮಹಾನುಭಾವರು. (ಅವರೆಲ್ಲರ ಮೇಲೆ ಅಲ್ಲಾಹನ ಶಾಂತಿ ಇರಲಿ.) ಇವರೆಲ್ಲರೂ ಮಾನವರ ಚರಿತ್ರೆಯಲ್ಲಿ ಇಂದಿನ ತನಕ ಅತ್ಯಂತ ಕೀರ್ತಿ ಪಡೆದವರಾಗಿದ್ದಾರೆ. ಈ ಮಹಾನುಭಾವರೆಲ್ಲರ ಸಂದೇಶಗಳು ಅವರ ಪ್ರಥಮ ಗ್ರಂಥಗಳಲ್ಲಿ ಒಂದೇ ಆಗಿದ್ದುವು. ಆದರೆ ಕಾಲ ದಾಟಿಹೋದ ಹಾಗೆ ಅನೇಕ ವ್ಯಾಖ್ಯಾನಗಳು ಮತ್ತು ಹಸ್ತಕ್ಷೇಪಗಳು ಸಂಭವಿಸಿದುವು. ಹೀಗಿದ್ದರೂ ಮೂಲ ತತ್ವಗಳು ಇಂದಿಗೂ ಸುರಕ್ಷಿತವಾಗಿವೆ. ಒಬ್ಬನೇ ದೇವನ ಅಸ್ತಿತ್ವದಲ್ಲಿ ವಿಶ್ವಾಸ, ಅವನೊಂದಿಗೆ ಪ್ರಾರ್ಥನೆ ಮೂಲಕ ಸಂಬಂಧ ಸ್ಥಾಪಿಸಬಹುದೆಂಬ ವಿಶ್ವಾಸ ಮತ್ತು ಸತ್ಕರ್ಮಗಳ ಮೂಲಕ ದೇವನ ಪ್ರೀತಿ ಗಳಿಸಬಹುದೆಂಬ ವಿಶ್ವಾಸ ಆ ಗ್ರಂಥಗಳಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ದೇವನೆಂಬ ಕಲ್ಪನೆ, ಪರಸ್ಪರ ದೂರವಿರುವ ಸಂಸ್ಕೃತಿಗಳಲ್ಲೂ ಭೂಖಂಡಗಳಲ್ಲಿಯೂ ಆಶ್ಚರ್ಯಕರವಾಗಿ ಕಂಡು ಬಂದಿದೆ. ಅಮೇರಿಕದ ಮೂಲ ನಿವಾಸಿಗಳು ದೇವನನ್ನು ಮಹಾ ಚೇತನ ಎಂದು ಕರೆದರು. ಉನ್ನತ ದೇವನೆಂದು ಆಸ್ಟ್ರೇಲಿಯಾದ ಮೂಲ ಬುಡಕಟ್ಟಿನವರು ಕರೆದರು. ಯಹೋವ ಎಂದು ಯಹೂದಿಯರು, ಅಲ್ಲಾಹ್ ಎಂದು ಮುಸ್ಲಿಮರು ಕರೆಯುತ್ತಾರೆ. ಬೌದ್ಧ ಧರ್ಮದಲ್ಲಿ ಇಶಾನ ಎಂದೆನ್ನುತ್ತಾರೆ. ಹೀಗೆ ವಿವಿಧ ಹೆಸರುಗಳಲ್ಲಿ ಕರೆಯಲ್ಪಡುವ ದೇವನು ಮಾನವ ಚರಿತ್ರೆಯ ಎಲ್ಲ ಕಡೆಗಳಲ್ಲಿದ್ದಾನೆ.

ಪವಿತ್ರ ಖುರ್‌ಆನ್ ಮೇಲೆ ವಿವರಿಸಿದ ಮಹಾನುಭಾವರನ್ನು ಪ್ರವಾದಿಗಳೆಂದು ಹೆಸರಿಸಿದೆ. ಅವರನ್ನು ದೇವನು ಮನುಷ್ಯರನ್ನು ಸುಧಾರಣೆ ಮಾಡಲು ಕಳುಹಿಸಿದನು. ಎಲ್ಲ ಪ್ರಮುಖ ಧರ್ಮಗಳಲ್ಲಿ ಪ್ರವಾದಿಗಳ ಬಗ್ಗೆ ಪ್ರಸ್ತಾಪಿಸಲಾಗಿದ್ದು ಅವರೆಲ್ಲರೂ ವಿವಿಧ ಧರ್ಮಗಳ ಮಧ್ಯೆ ಭಾವೈಕ್ಯಕ್ಕೆ ಪೂರಕವಾಗಿದ್ದಾರೆ.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ: "ನಾವು ಪ್ರತಿಯೊಂದು ಸಮುದಾಯದಲ್ಲೂ ಸಂದೇಶವಾಹಕನನ್ನು ನಿಯೋಜಿಸಿದ್ದೇವೆ. ನೀವು ಅಲ್ಲಾಹನನ್ನು ಆರಾಧಿಸಿರಿ ಮತ್ತು ದುಷ್ಪ್ರೇರಕಗಳಿಂದೆಲ್ಲ ದೂರವಿರಿ ಎಂದು ಅವರ ಉಪದೇಶವಾಗಿತ್ತು." (ಪವಿತ್ರ ಖುರ್‌ಆನ್ 16:37)

ಆದುದರಿಂದ ಲೋಕದ ಪ್ರಮುಖ ಧರ್ಮಗಳು ದೇವನ ಸಾಮೀಪ್ಯ ಪಡೆಯಲು ಕಲಿಸಿದ ವಿಧಾನಗಳು ಯಾವುವು? ದೇವನ ಅಸ್ತಿತ್ವವನ್ನು ಪರೀಕ್ಷಿಸಲು ಸಿಡಿಲು ಮಿಂಚು ಬಡಿತವನ್ನು ತ್ವರಿತವಾಗಿ ಆವಶ್ಯಪಡುವುದೇ? ಆಕಾಶದಲ್ಲಿ ದೇವ ನಾಮ ಮೊಳಗುವುದನ್ನು ಆಲಿಸುವುದನ್ನು ಪ್ರತೀಕ್ಷಿಸುವುದೇ? ದೇವನು ಪ್ರಚಲಿತ ಆವಶ್ಯಕತೆಗೆ ಅನುಸಾರವಾದ ವೈಜ್ಞಾನಿಕ ಯೋಚನೆಗಳನ್ನು ಬರೆದು ಸಂಪುಟಗಳಲ್ಲಿ ಇಳಿಸುವನೆಂದು ಕಾಯುವುದೇ? ಹೀಗೆ ಅಲ್ಲವೇ ಅಲ್ಲ. ವಿನಯದಿಂದ ಪ್ರಾರ್ಥಿಸುತ್ತಾ ಸಹನೆಯಿಂದಿರಬೇಕು ಮತ್ತು ಅನ್ಯರಿಗೆ ಒಳಿತನ್ನು ಮಾಡಬೇಕು. ಈ ಪ್ರಯತ್ನಗಳನ್ನು ಮಾಡದೆ ದೇವ ಸಾಮೀಪ್ಯ ಗಳಿಸಬೇಕೆಂದು ಪ್ರತೀಕ್ಷಿಸುವುದು ದೇವನ ಅನ್ವೇಷಣೆಯಲ್ಲಿ ಪ್ರಾಮಾಣಿಕ ಅಭಿಲಾಷೆ ಇಲ್ಲದುದನ್ನು ಸೂಚಿಸುತ್ತದೆ. ನಮಗಿಂತ ಹಿಂದಿನವರು ಯಾವ ಮಾರ್ಗದಲ್ಲಿ ಚಲಿಸಿ ದೇವ ಸಾಮೀಪ್ಯ ಪಡೆದರೋ ಅದಕ್ಕೆ ವಿರುದ್ಧವಾಗುವುದು ಆ ನಮ್ಮ ವರ್ತನೆ.

**ವಿಶ್ವಾಸದಿಂದ ನಿಸ್ಸಂದಿಗ್ಧತೆಗೆ:** ಮೊತ್ತ ಮೊದಲು ಆವಶ್ಯಕವಾದುದು ವಿಶ್ವಾಸವಾಗಿದೆ. ಆದರೆ ವಿಶ್ವಾಸವೆಂದರೆ ತರ್ಕಬದ್ಧವಲ್ಲದ ಉಪದೇಶಗಳ ಬಗ್ಗೆ ಅಂಧವಿಶ್ವಾಸ ಹೊಂದುವುದಲ್ಲ. ನಮಗೆ ಚಿಂತಿಸುವ ಮನಸ್ಸನ್ನು ನೀಡಿದ ದೇವನು ನಮ್ಮ ಮನಸ್ಸಿಗೆ ಜಿಗುಪ್ಸೆಯನ್ನುಂಟುಮಾಡುವ ಧಾರ್ಮಿಕ ತತ್ವಗಳನ್ನು ಉಪದೇಶಿಸಲಾರ. ಇಸ್ಲಾಮ್ ಧರ್ಮದ ಪ್ರಕಾರ ವಿಶ್ವಾಸವೆಂದರೆ ತಮಗೆ ದೇವನಿಂದ ಸಂದೇಶ ಲಭಿಸಿರುವುದಾಗಿ ವಾದಿಸುವ ಪ್ರವಾದಿಗಳ ವಾದವನ್ನು ಅವರ ಸಾತ್ವಿಕ ಸ್ವಭಾವದ ಕಾರಣದಿಂದ ಅಂಗೀಕರಿಸುವುದರ ಹೆಸರಾಗಿದೆ. ಪ್ರವಾದಿಗಳು ತಮ್ಮ ಅತ್ಯುತ್ಕೃಷ್ಟ ನೈತಿಕ ಗುಣಗಳ ಕಾರಣ ತಮ್ಮ ಕಾಲದಲ್ಲಿ ಆದರ್ಶ ಜೀವಿಗಳಾಗಿದ್ದರು. ಅವರ ಹೆಸರು ಪ್ರಾಮಾಣಿಕತೆ ಮತ್ತು ಸತ್ಯಸಂಧತೆಗೆ ಉಪನಾಮಗಳಾಗಿದ್ದುವು. ಇಸ್ಲಾಮ್ ಧರ್ಮದ ಪ್ರಕಾರ ದೇವನು ಪ್ರಾಮಾಣಿಕವಾದ ಜನರನ್ನು ತನ್ನ ಸಂದೇಶ ಜನರಿಗೆ ತಲಪಿಸಲು ಆಯ್ಕೆ ಮಾಡಿದನು. ಆದುದರಿಂದ ಸತ್ಯಾನ್ವೇಷಿಗಳು ಅವರ ವಾದಗಳ ಬಗ್ಗೆ ಚಿಂತಿಸದೆ ತಿರಸ್ಕರಿಸಲಾರರು. ಪವಿತ್ರ ಖುರ್‌ಆನ್ ಪ್ರವಾದಿಗಳು ಹೀಗೆ ಹೇಳಿದುದಾಗಿ ಪ್ರಸ್ತಾಪಿಸಿದೆ: "ಇದಕ್ಕೆ ಮುಂಚೆ ಒಂದು ದೀರ್ಘಕಾಲ ನಾನು ನಿಮ್ಮ ಮಧ್ಯೆ ಜೀವಿಸಿದ್ದೆನಲ್ಲವೇ? ಆದರೂ ನೀವು ಮನವರಿಕೆ ಮಾಡುವುದಿಲ್ಲವೇ?" (ಪವಿತ್ರ ಖುರ್‌ಆನ್ 10:17).

ಈ ವಾದ ಎಷ್ಟು ಬಲಿಷ್ಠವಾಗಿದೆ ಎಂದು ಬೈಝಾಂಟೈನ್ ಚಕ್ರವರ್ತಿ ಹೆರಾಕ್ಲಿಯಸ್ (ಹಿರ್ಕಲ್) ವ್ಯಕ್ತಪಡಿಸಿದ ಅಭಿಪ್ರಾಯದಿಂದ ತಿಳಿಯುತ್ತದೆ. ಹಝ್‌ರತ್ ಮುಹಮ್ಮದ್ ಪೈಗಂಬರ್[ಸ] ಹೆರಾಕ್ಲಿಯಸ್ ದೊರೆಗೆ ಒಂದು ಪತ್ರ ಬರೆದು ಇಸ್ಲಾಮಿಗೆ ಆಹ್ವಾನಿಸಿದ್ದರು. ಹೆರಾಕ್ಲಿಯಸ್ ಹಝ್‌ರತ್ ಪೈಗಂಬರರ[ಸ] ಬಗ್ಗೆ ಹೆಚ್ಚಿನ ವಿವರ ತಿಳಿಯಲು ಅಲ್ಲಿಂದ ದಾಟಿಹೋಗುತ್ತಿದ್ದ ಒಬ್ಬ ಅರಬಿ ಮುಖಂಡನನ್ನು ಕರೆದು ಹಝ್‌ರತ್ ಪೈಗಂಬರರ ಬಗ್ಗೆ ವಿಚಾರಿಸಿದನು. ಆ ಅರಬಿ ಮುಖಂಡ ಇಸ್ಲಾಮಿನ ಕಠಿಣ ಶತ್ರುವಾಗಿದ್ದನು. ದೊರೆ ಆ ಅರಬಿ ಮುಖಂಡನೊಂದಿಗೆ ಕೇಳಿದನು– ವಾದವನ್ನು ಪ್ರಕಟಿಸುವ ಮೊದಲು ಹಝ್‌ರತ್ ಪೈಗಂಬರರು ಎಂದಾದರೂ ಸುಳ್ಳು ಹೇಳಿದ್ದಾರೋ ಎಂದು. ಆಗ ಆ ಅರಬಿ ಮುಖಂಡ "ಎಂದೂ ಹೇಳಿಲ್ಲ" ಎಂದನು. ಸಂಭಾಷಣೆ ಮುಗಿದ ನಂತರ ಹೆರಾಕ್ಲಿಯಸ್ ಹೇಳಿದನು: "ಒಬ್ಬ ಮನುಷ್ಯನು ಮನುಷ್ಯರ ಬಗ್ಗೆ ಸುಳ್ಳು ಹೇಳದವನಾಗಿದ್ದರೆ ದೇವನ ಬಗ್ಗೆಯೂ ಸುಳ್ಳು ಹೇಳಲಾರ." (ಸಹೀಹ್ ಬುಖಾರಿ ಸಂಪುಟ 1 ಅಧ್ಯಾಯ 1 ಹದೀಸ್ 6).

ಸತ್ಯಸಂಧನೂ ಸಾತ್ವಿಕನೂ ಆಗಿರುವ ವ್ಯಕ್ತಿ ಒಂದು ವಿಶಿಷ್ಟ ಆಧ್ಯಾತ್ಮಿಕ ಮಾರ್ಗದ ಕಡೆಗೆ ಅದನ್ನು ನಂಬಲು ಆಹ್ವಾನಿಸುವುದು ನಮ್ಮ ನೈತಿಕ ಗುಣದ ಅರ್ಹತೆಯನ್ನು ಪರೀಕ್ಷಿಸುವಂತಹದಾಗಿದೆ. ಪ್ರವಾದಿಗಳನ್ನು ಅವರ ಸಾತ್ವಿಕತೆ ಬಗ್ಗೆ ವಿಶ್ವಾಸ ಹೊಂದಿ ನಂಬುವುದಕ್ಕೆ ವಿನಯವೂ ತೆರೆದ ಮನಸ್ಸೂ ಆವಶ್ಯಕವಾಗಿದೆ. ಇದನ್ನು ಹಝ್‌ರತ್ ಅಬೂಬಕರ್[ರ]ರಿಗಿಂತ ಉತ್ತಮವಾಗಿ ಯಾರೂ ಎಲ್ಲಿಯೂ ಪ್ರಕಟಿಸಿರಲಿಲ್ಲ. ಹಝ್‌ರತ್ ಮುಹಮ್ಮದ್ ಪೈಗಂಬರರಿಂದ[ಸ] ಯಾವುದೇ ಸಾಕ್ಷ್ಯಾಧಾರವನ್ನು ಆಲಿಸದೆ ಅವರು ನಂಬಿದರು. ವಾಸ್ತವಿಕವಾಗಿ ಅವರಿಗೆ ಯಾವುದೇ ಹೊಸ ಸಾಕ್ಷ್ಯಾಧಾರದ ಆವಶ್ಯಕತೆ ಇರಲಿಲ್ಲ – ಏಕೆಂದರೆ ಅವರಿಗೆ ಸಾಕ್ಷ್ಯಾಧಾರ ಮೊದಲೇ ಲಭಿಸಿತ್ತು – ಜನರ ಮಧ್ಯದಲ್ಲಿ ಸತ್ಯಸಂಧನೆಂದು ಗುರುತಿಸಲ್ಪಟ್ಟವನ ಸತ್ಯತೆ ಅವರಿಗೆ ತಿಳಿದಿತ್ತು. ಹಝ್‌ರತ್ ಅಬೂಬಕರ್[ರ] ತನ್ನ ನಂಬಿಕೆಯನ್ನು ಮೂಲಾಧಾರವಾಗಿಟ್ಟುಕೊಂಡು ಹಝ್‌ರತ್ ಮುಹಮ್ಮದ್ ಪೈಗಂಬರರ[ಸ] ಮಾತನ್ನು ಅಂಗೀಕರಿಸಿದರು. ಅವರು ಅಲ್ಲಿಂದ ಆಧ್ಯಾತ್ಮಿಕತೆಯ ಉತ್ತುಂಗ ಶಿಖರಗಳನ್ನು ತಲಪಿದರು ಮತ್ತು ಅವರು ಹಝ್‌ರತ್ ಪೈಗಂಬರರ[ಸ] ಪ್ರಥಮ ಶಿಷ್ಯರಲ್ಲಿ ಅತ್ಯಂತ ಶ್ರೇಷ್ಠ ಮಟ್ಟದ ದೇವ ಭಕ್ತಿ ಹೊಂದಿದವರಾದರು. ಅವರ ಉದಾಹರಣೆ ಸ್ಪಷ್ಟವಾಗಿ ತಿಳಿಸುವುದೇನೆಂದರೆ ಪ್ರವಾದಿಯ ನಿಷ್ಠಾವಂತ ಅನುಯಾಯಿಗಳನ್ನು ದೇವನು ಅಂಧಕಾರದಲ್ಲಿರಿಸುವುದಿಲ್ಲ. ಬಾಹ್ಯೇಂದ್ರಿಯಗಳಿಂದ ದೇವನು ಮರೆಯಾಗಿದ್ದರೂ ಅವನು ತನ್ನನ್ನು ನಂಬುವವರಿಗೆ ಆಧ್ಯಾತ್ಮಿಕವಾಗಿ ತನ್ನನ್ನು ಪ್ರಕಟಗೊಳಿಸುತ್ತಾನೆ. ನಮ್ಮ ಬಾಹ್ಯೇಂದ್ರಿಯಗಳನ್ನು ವಂಚಕರು ಮತ್ತು ಇಂದ್ರಜಾಲಗಾರರು ಮೋಸಗಳಿಸಬಹುದಾದರೂ ನಮ್ಮ ಆಧ್ಯಾತ್ಮಿಕ ಇಂದ್ರಿಯಗಳು ನಮ್ಮ ಜೀವಿತಾದ್ಯಂತ ಸುಪ್ತ ಸ್ಥಿತಿಯಲ್ಲಿರುತ್ತವೆ. ನಮ್ಮ ಆಧ್ಯಾತ್ಮಿಕ ಇಂದ್ರಿಯಗಳೆಂಬ ದೀಪದ ಬತ್ತಿಯನ್ನು ದೈವಿಕ ಜ್ವಾಲೆ ಹೊತ್ತಿಸುವಾಗ ಆಗ ಗಳಿಸುವ ಅನುಭವದ ವಾಸ್ತವಿಕತೆ ಬಗ್ಗೆ ತಪ್ಪು ಗ್ರಹಿಕೆ ಇರುವುದಿಲ್ಲ. ಅವೆಲ್ಲ ಸ್ಪಷ್ಟವಾಗಿರುತ್ತವೆ. ಪೂರ್ಣವಾಗಿ ದೇವನು ನಮ್ಮನ್ನು ಸಂಪರ್ಕಿಸುವ ಮಾರ್ಗ ಆಧ್ಯಾತ್ಮಿಕವಾಗಿರುತ್ತದೆ. ಬಾಹ್ಯ ವಿದ್ಯಮಾನಗಳು ಇಂದ್ರಜಾಲಗಳೆಂದೂ ಮನೋಭ್ರಾಂತಿ ಎಂದೂ ಪರಿಗಣಿಸಲು ಸಾಧ್ಯವಿದೆ. ಉದಾಹರಣೆಗೆ, ಒಬ್ಬ ವಿಶ್ವಾಸಿಗೆ ಸತ್ಯವಾದ ಸ್ವಪ್ನಗಳು, ದರ್ಶನಗಳು ಕಾಣಿಸುವುದಾದರೆ ಮತ್ತು ದೇವವಾಣಿ ಲಭಿಸುವುದಾದರೆ ಅವುಗಳು ಅಪ್ರತಿಮವಾಗಿದ್ದು ಅವುಗಳನ್ನು ಮನೋಭ್ರಾಂತಿ ಎಂದೆನ್ನಲಾಗದು. ಅಂತಹ ಜನರ ಪ್ರಾರ್ಥನೆಗಳು ಅಂಗೀಕರಿಸಲ್ಪಡುತ್ತವೆ. ಅವು ಕೇವಲ ಆಕಸ್ಮಿಕವಾಗಿರದೆ ವಾಸ್ತವಿಕವಾಗಿರುತ್ತವೆ.

ದೇವನ ಸಾಮೀಪ್ಯ ಗಳಿಸುವ ಪ್ರಕ್ರಿಯೆ ಕ್ರಮೇಣ ಸಂಭವಿಸುತ್ತದೆ ಮತ್ತು ನಮ್ಮ ಭಕ್ತಿ ವರ್ಧಿಸಿದ ಪ್ರಕಾರ ದೇವ ಸಾಮೀಪ್ಯವೂ ವರ್ಧಿಸುತ್ತದೆ. ಆದರೆ ಪ್ರವಾದಿಗಳ ಮಾರ್ಗವನ್ನು ಅನುಸರಿಸಿ ನಡೆದು ನಮ್ಮ ಪೈಕಿ ಪ್ರತಿಯೊಬ್ಬನು ವಿಶ್ವಾಸದ ಆರಂಭದ ಅಸ್ತಿಭಾರದಿಂದ ದೃಢವಿಶ್ವಾಸದ ವೇದಿಕೆ ತನಕ ತಲಪಬಹುದಾಗಿದೆ.

ಇಂತಹ ದೃಢತೆ ವೈಜ್ಞಾನಿಕ ಸಿದ್ಧಾಂತಗಳಿಗಿಂತ ಹೆಚ್ಚು ದೃಢವಾಗಿರುತ್ತದೆ. ಏಕೆಂದರೆ ನಾವು ಅನ್ವೇಷಿಸುವುದರೊಂದಿಗೆ ವೈಯಕ್ತಿಕ ಸಂಪರ್ಕ ಸಾಧ್ಯವಾಗುತ್ತದೆ. ಆಧ್ಯಾತ್ಮಿಕ ಅನ್ವೇಷಣೆ ವೈಜ್ಞಾನಿಕ ಅನ್ವೇಷಣೆಗಿಂತ ಅದರಿಂದ ದೊರಕುವ ಸಾಕ್ಷ್ಯದ ಯೋಗ್ಯತೆ ದೃಷ್ಟಿಯಿಂದ ಹೆಚ್ಚು ಮಹತ್ವಪೂರ್ಣವಾಗಿದೆ. ಆಧ್ಯಾತ್ಮಿಕ ಸಂಶೋಧನೆಯ ಮೂಲಕ ದೊರಕುವ ಪರಿಣಾಮಗಳು ಶಾಶ್ವತ ಆಧ್ಯಾತ್ಮಿಕ ನೆಮ್ಮದಿ ನೀಡುತ್ತದೆ – ಇಹಲೋಕದಲ್ಲೂ ಪರಲೋಕದಲ್ಲೂ.

ಇದರ ಬಗ್ಗೆ ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಹೀಗೆ ಹೇಳಿದ್ದಾರೆ: "ಅಲ್ಲಾಹನು ಹೀಗೆ ಹೇಳಿದ್ದಾನೆ: ನೀವು ವಿಶ್ವಾಸ ಹೊಂದಿರಿ – ನೀವು ಮೋಕ್ಷ ಗಳಿಸುವಿರಿ. ವಿಶ್ವಾಸವು, ಪವಿತ್ರ ಪ್ರವಾದಿ ಪ್ರತಿಪಾದಿಸಿದ ವಿಷಯಗಳ ಬಗ್ಗೆ ದಾರ್ಶನಿಕ ತರ್ಕಗಳನ್ನು ಮತ್ತು ಖಂಡಿತವಾದ ಪುರಾವೆಗಳನ್ನು ಆವಶ್ಯಪಟ್ಟು ಗಣಿತದ ಸಮೀಕರಣಗಳ ಹಾಗೆ ಸ್ಥಾಪಿಸುವುದನ್ನು ಆವಶ್ಯಪಡುವುದಿಲ್ಲ. ಹಝ್‌ರತ್ ಪೈಗಂಬರರ[ಸ] ಉಪದೇಶಗಳನ್ನು ಪ್ರಚಲಿತ ಜ್ಞಾನದ ಮೂಲಕ ಪರೀಕ್ಷಿಸಿ ಅಂಗೀಕರಿಸುವುದಾದರೆ ಅದು ವಿಶ್ವಾಸವೆಂದು ಗಣಿಸಲ್ಪಡದು. ಪ್ರತಿಯೊಂದು ಸತ್ಯ ಸ್ಪಷ್ಟವಾಗಿ ಸ್ಥಾಪಿಸಲ್ಪಟ್ಟರೆ ಅದನ್ನು ಅಂಗೀಕರಿಸುವುದು ಕಡ್ಡಾಯವಾಗಿದೆ. ಒಬ್ಬ ಕೆಟ್ಟ ಮನುಷ್ಯ ಅದನ್ನು ಪ್ರತಿಪಾದಿಸಿದರೂ ಅದನ್ನು ನಂಬಬೇಕಾಗುತ್ತದೆ. ಆದರೆ ನಾವು ಒಬ್ಬ ಪ್ರವಾದಿಯನ್ನು ನಂಬುವುದಾದರೆ ನಾವು ಆ ಪ್ರವಾದಿಯ ಸಾತ್ವಿಕತೆಯನ್ನು ಪರಿಗಣಿಸಿ ನಂಬುತ್ತೇವೆ. ಅದು ವೈಚಾರಿಕವಾಗಿ ಸತ್ಯವಾಗಿರುವ ಸಾಧ್ಯತೆ ಇದೆಯಾದರೂ ಅವಿವೇಕಿಯಾದ ಮನುಷ್ಯ ಅದನ್ನು ತಿರಸ್ಕರಿಸುವ ಸಾಧ್ಯತೆ ಇರುತ್ತದೆ. ಆದರೆ ನಾವು ಪ್ರವಾದಿಯ ಸಾತ್ವಿಕತೆಯ ಕಾರಣದಿಂದ ಅವರು ಪ್ರತಿಪಾದಿಸುವುದನ್ನು ಸತ್ಯವೆಂದು ನಂಬುವುದಾದರೆ ನಾವು ನಮ್ಮ ಉತ್ತಮ ಯೋಚನೆಗೋಸ್ಕರ, ನಮ್ಮ ವಿವೇಕದ ಬಳಕೆಗೋಸ್ಕರ, ಪ್ರವಾದಿಯನ್ನು ಗೌರವಿಸಿದಕ್ಕೋಸ್ಕರ ಮತ್ತು ವಿಶ್ವಾಸಕ್ಕೋಸ್ಕರ ಪ್ರತಿಫಲ ಗಳಿಸುವವರಾಗುವೆವು. ಪವಿತ್ರ ಖುರ್‌ಆನ್ ಇದನ್ನೇ ಉಪದೇಶಿಸುತ್ತಿದೆ. ಆದರೆ ಚಿಂತಕರು ಮತ್ತು ದಾರ್ಶನಿಕರು ಎಂದೂ ಈ ಮಾರ್ಗವನ್ನು ಅವಲಂಬಿಸಿಲ್ಲ. ಅವರು ವಿಶ್ವಾಸವನ್ನು ನಿರ್ಲಕ್ಷಿಸಿರುವರು. ಅವರು ನಿಖರವಾದ ಪ್ರತ್ಯಕ್ಷ ಸಾಕ್ಷ್ಯವನ್ನು ಆವಶ್ಯಪಡುವವರಾಗಿದ್ದಾರೆ.

ಸರ್ವಶಕ್ತನಾದ ಅಲ್ಲಾಹನು ಅದೃಶ್ಯ ವಿಚಾರಗಳಲ್ಲಿ ನಂಬಿಕೆಯುಳ್ಳವರಾಗಬೇಕೆಂದು ಆವಶ್ಯಪಡುತ್ತಾನಾದರೂ ದೈವಿಕ ವಿಚಾರಗಳ ಬಗ್ಗೆ ಖಂಡಿತವಾಗಿ ಮನವರಿಕೆ ಮಾಡಿಕೊಳ್ಳುವುದರಿಂದ ಜನರನ್ನು ವಂಚಿತರನ್ನಾಗಿ ಮಾಡುವುದಿಲ್ಲ. ವಾಸ್ತವಿಕವಾಗಿ

ವಿಶ್ವಾಸವೆಂಬುದು ದೃಢ ನಂಬಿಕೆಗೆ ತಲಪುವ ಏಣಿಯಾಗಿದೆ. ಆದರೆ ವಿಶ್ವಾಸ ಹೊಂದದೆ ದೃಢ ನಂಬಿಕೆಗಳಿಸಲು ಪ್ರಯತ್ನಿಸುವುದು ವ್ಯರ್ಥವಾಗಿದೆ. ಈ ಏಣಿಯನ್ನು ಏರುವವರು ಖಂಡಿತವಾಗಿಯೂ ದೈವಿಕ ಸತ್ಯಗಳನ್ನು ಅನುಭವ ಜ್ಞಾನದಿಂದ ಗಳಿಸುತ್ತಾರೆ. ಒಬ್ಬ ಪ್ರಾಮಾಣಿಕ ವಿಶ್ವಾಸಿ ಒಬ್ಬ ಸಾತ್ವಿಕ ಮಹಾಪುರುಷನ ಮೂಲಕ ದೊರೆತ ಆಜ್ಞೆಗಳನ್ನು ಅನುಸರಿಸುವನಾದರೆ ಅವನು ದೇವಾನುಗ್ರಹಗಳಿಗೆ ಪಾತ್ರನಾಗುತ್ತಾನೆ. ಇದೇ ಕಾರಣದಿಂದ ಅಲ್ಲಾಹನು ಅದೃಶ್ಯ ವಿಚಾರಗಳನ್ನು ನಂಬಲು ಆವಶ್ಯಪಟ್ಟಿದ್ದಾನೆ. ಆ ಮೂಲಕ ಅವರು ಎದುರಿಸುವ ಎಲ್ಲ ಸಮಸ್ಯೆಗಳಿಗೆ ಪರಿಹಾರ ದೊರಕುವುದು ಮತ್ತು ಅವನ ಅನುಗ್ರಹಗಳಿಗೆ ಪಾತ್ರರಾಗುವರು. ಆದರೆ ಆತುರಪಡುವವರು ಈ ಮಾರ್ಗವನ್ನು ಅನುಸರಿಸುವುದಿಲ್ಲ ಎನ್ನುವುದು ಖೇದಕರವಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ವಾಗ್ದಾನ ಮಾಡಿದ್ದಾನೆ: ಒಬ್ಬನು ಹಝ್ರತ್ ಪೈಗಂಬರರ(ಸ) ಕರೆಯನ್ನು ಅಂಗೀಕರಿಸಿ ಅವರನ್ನು ನಂಬಿ ಅದನ್ನು ಮನವರಿಕೆ ಮಾಡಿಕೊಳ್ಳಲು ಪರಿಶ್ರಮಿಸುವನಾದರೆ ಅವನಿಗೆ ಅಲ್ಲಾಹನು ದರ್ಶನಗಳ ಮತ್ತು ಸಂದೇಶವಾಣಿಗಳ ಮೂಲಕ ಸತ್ಯವನ್ನು ಮನವರಿಕೆ ಮಾಡಿಕೊಡುವನು ಮತ್ತು ಅವನು ಉನ್ನತ ಆಧ್ಯಾತ್ಮಿಕ ಸ್ಥಾನ ಗಳಿಸುವನು. (ದಿ ಎಸ್ಸೆನ್ಸ್ ಆಫ್ ಇಸ್ಲಾಮ್ ಸಂಪುಟ 2 ಪುಟ 48–50) ♦

**(Review of Religions – Feb 2018 ರ ಸಂಚಿಕೆಯಿಂದ– ಭಾಷಾಂತರ: ಯಮ್. ಉಬೈದುಲ್ಲಾ)**

**(8ನೇ ಪುಟದಿಂದ)**

ಪೈಗಂಬರ್(ಸ) ಮಕ್ಕವನ್ನು ಜಯಶಾಲಿಯಾಗಿ ಪ್ರವೇಶಿಸಿದಾಗ ಪ್ರತೀಕಾರ ಮಾಡಲಿಲ್ಲ ಮತ್ತು ಒಂದು ಹನಿ ರಕ್ತ ಕೂಡ ಚೆಲ್ಲಲಿಲ್ಲ. ಅಲ್ಲಾಹನ ಆಜ್ಞೆ ಪ್ರಕಾರ ಅವರು ಎಲ್ಲ ಹಿಂಸೆಗಾರರಿಗೂ ಇಸ್ಲಾಮನ್ನು ಹಿಂಸೆಯಿಂದ ವಿರೋಧಿಸಿದವರಿಗೂ ಕ್ಷಮೆಯನ್ನು ತಕ್ಷಣ ಘೋಷಿಸಿದರು. ಇಸ್ಲಾಮ್ ಧರ್ಮ ತತ್ವಗಳ ಪ್ರಕಾರ ಪ್ರತಿಯೊಬ್ಬನಿಗೆ ತಾನು ಇಷ್ಟಪಡುವ ಧರ್ಮವನ್ನು ನಿರ್ಭಯವಾಗಿ ಆಚರಿಸಬಹುದೆಂದು ಘೋಷಿಸಿದರು. ಅವರು ವಿಧಿಸಿದ ಶರ್ತ, ಪ್ರತಿಯೊಬ್ಬನು ಶಾಂತಿಗೆ ಬದ್ಧನಾಗಿರಬೇಕೆಂದಾಗಿತ್ತು.

ಎಲ್ಲ ಜನರು ಜಾತಿ, ಧರ್ಮ ಅಥವಾ ವರ್ಣದ ವ್ಯತ್ಯಾಸವಿಲ್ಲದೆ ಸಂರಕ್ಷಿಸಲ್ಪಡುವವರೆಂದು, ಅವರ ಸ್ವತ್ತು ಸಂರಕ್ಷಿಸಲ್ಪಡುವುದೆಂದು ಮತ್ತು ಅವರೊಂದಿಗೆ ಯಾವಾಗಲೂ ಗೌರವದಿಂದ ವರ್ತಿಸಲಾಗುವುದು ಎಂದು ಘೋಷಿಸಿದರು. ಇದು ಇಸ್ಲಾಮಿನ ಪ್ರವಾದಿಯ ಮಹತ್ವಪೂರ್ಣ ನಡೆವಳಿಕೆಯಾಗಿದ್ದು ಕಾಲಾತೀತವಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಅನುಕಂಪ ಮತ್ತು ಕಾರುಣ್ಯದ ನಡೆವಳಿಕೆಯನ್ನು ಮುಸ್ಲಿಮರೂ ಮುಸ್ಲಿಮೇತರರೂ ಇಂದಿನ ಲೋಕದಲ್ಲಿ ಅನುಸರಿಸಬೇಕಾಗಿದೆ. ಎಲ್ಲ ದೇಶಗಳು, ದೊಡ್ಡದು ಮತ್ತು ಚಿಕ್ಕದು, ಶ್ರೀಮಂತ ಮತ್ತು ಬಡ, ಕ್ಷಮೆ ಮತ್ತು ಹಿತೈಷಿ ಮನೋಭಾವವನ್ನು ಬೆಳಸಬೇಕಾದುದು ಆವಶ್ಯಕವಾಗಿವೆ. ಆಗ ಮಾತ್ರ ದೀರ್ಘ ಬಾಳುವ ಶಾಂತಿ ಲೋಕದಲ್ಲಿ ಸ್ಥಾಪಿತವಾಗುವುದು.

ಮಾನವರು ಪರಸ್ಪರ ಒಬ್ಬರಿನ್ನೊಬ್ಬರ ಬಗ್ಗೆ ಹೊಂದಿರುವ ಕರ್ತವ್ಯಗಳನ್ನು ಪರಿಗಣಿಸಿ ವರ್ತಿಸುವವರಾಗಲಿ ಎಂದು ನಾನು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇನೆ. ಆ ಮೂಲಕ ನಮ್ಮ ಮುಂದಿನ ತಲೆಮಾರು ನಮ್ಮನ್ನು ಅಭಿಮಾನದಿಂದಲೂ ಕೃತಜ್ಞತೆಯಿಂದಲೂ ನೆನಪಿಸುವಂತಾಗಲಿ.

ನಾವು ಕೇವಲ ಇಂದಿನ ದಿನದ ಬಗ್ಗೆ ಮಾತ್ರವಲ್ಲ ನಾಳೆಯ ಬಗ್ಗೆ ಸಹ ಯೋಚಿಸಬೇಕು. ನಾವು ನಮ್ಮ ಮುಂದಿನ ಪೀಳಿಗೆಯನ್ನು ರಕ್ಷಿಸುವವರಾಗೋಣ. ಅಲ್ಲಾಹನು ನಮಗೆ ವಿವೇಕ ದಯಪಾಲಿಸಲಿ.

ನೀವು ಇಲ್ಲಿಗೆ ಆಗಮಿಸಿ ನಮ್ಮೊಂದಿಗೆ ಸೇರಿದುದಕ್ಕೆ ನಾನು ನಿಮಗೆ ಇನ್ನೊಮ್ಮೆ ಕೃತಜ್ಞತೆ ಅರ್ಪಿಸುತ್ತೇನೆ, ನಿಮಗೆ ತುಂಬಾ ಧನ್ಯವಾದಗಳು. ♦

**(ಭಾಷಾಂತರ : ಯಮ್. ಉಬೈದುಲ್ಲಾ).**

# LOVE FOR ALL
# HATRED FOR NONE
# LET'S MAKE IT HEAVEN

# ಮದೀನದವರಿಂದ ಆಮಂತ್ರಣ

♦ ಸರ್ ಮುಹಮ್ಮದ್ ಝಫರುಲ್ಲಾ ಖಾನ್
ಅಂತರ್ರಾಷ್ಟ್ರೀಯ ನ್ಯಾಯಾಲಯದ ಮಾಜಿ ಅಧ್ಯಕ್ಷ

ಲೌಕಿಕರ ದೃಷ್ಟಿಯಲ್ಲಿ ಹಝ್‌ರತ್ ಪೈಗಂಬರರು(ಸ) ಜಯಶಾಲಿಯಾಗುವುದು ಮತ್ತು ಅವರ ಸಂದೇಶ ಜನರಿಂದ ಅಂಗೀಕರಿಸಲ್ಪಡುವುದು ಅಸಾಧ್ಯವಾಗಿ ತೋರುತ್ತಿತ್ತು. ಆದರೆ ದೇವನು ಜಯಗಳಿಸುವ ಮಾರ್ಗ ತೋರಿಸುವನು ಎಂದು ಹಝ್‌ರತ್ ಪೈಗಂಬರರು(ಸ) ದೃಢವಾಗಿ ನಂಬಿದ್ದರು. ಹಜ್ಜ್ ಕಾಲದಲ್ಲಿ ಮಕ್ಕ ನಗರಕ್ಕೆ ಹೊರಗಿನಿಂದ ಬರುವ ಯಾತ್ರಿಕರಿಗೆ ಇಸ್ಲಾಮಿನ ಸಂದೇಶವನ್ನು ಹಝ್‌ರತ್ ಪೈಗಂಬರರು(ಸ) ತಲಪಿಸುತ್ತಾ ಇದ್ದರು. ಒಮ್ಮೆ ಯತ್ರಿಬ್ ನಗರದಿಂದ ಬಂದ ಆರು ಮಂದಿ ಯಾತ್ರಿಕರನ್ನು ಭೇಟಿಯಾದರು. (ಇದೇ ಯತ್ರಿಬ್ ಅನಂತರ ಮದೀನ ಎಂಬ ಹೆಸರು ಪಡೆಯಿತು.). ಅವರು ಮಕ್ಕದ ಹೊರಗೆ ಒಂದು ಕಣಿವೆ ಪ್ರದೇಶದಲ್ಲಿ ತಂಗಿದ್ದರು. ಆ ಕಾಲಘಟ್ಟದಲ್ಲಿ ಮದೀನದಲ್ಲಿ ಎರಡು ಅರಬಿ ಗೋತ್ರಗಳೂ ಮೂರು ಯಹೂದಿ ಗೋತ್ರಗಳೂ ವಾಸಿಸುತ್ತಿದ್ದುವು. ಔಸ್ ಮತ್ತು ಖಝ್‌ರಜ್ ಬಹುದೇವಾರಾಧಕರಾದ ಅರಬಿ ಗೋತ್ರಗಳಾಗಿದ್ದು ಯಹೂದಿ ಸಂಪ್ರದಾಯಗಳ ಬಗ್ಗೆ ತಿಳಿವಳಿಕೆವುಳ್ಳವರಾಗಿದ್ದರು. ಅವರು ತಮ್ಮ ಯಹೂದಿ ನಗರವಾಸಿಗಳು ಒಬ್ಬ ಪ್ರವಾದಿಯ ಆಗಮನವನ್ನು ಭವಿಷ್ಯವಾಣಿ ಪ್ರಕಾರ ಪ್ರತೀಕ್ಷೆ ಮಾಡುತ್ತಿದ್ದುದಾಗಿ ತಿಳಿದಿದ್ದರು. (ಧರ್ಮೋಪದೇಶಕಾಂಡ 18:18 ಪ್ರಕಾರ ಭವಿಷ್ಯವಾಣಿ).

ಹಝ್‌ರತ್ ಪೈಗಂಬರರು(ಸ) ಭೇಟಿಯಾದ ಮದೀನದ ನಿವಾಸಿಗಳು ಖಝ್‌ರಜ್ ಗೋತ್ರಕ್ಕೆ ಸೇರಿದವರಾಗಿದ್ದರು. ಹಝ್‌ರತ್ ಪೈಗಂಬರರು(ಸ) ಯಾತ್ರಿಕರಾದ ಆ ಜನರೊಂದಿಗೆ ತಾನು ದೇವನಿಂದ ನೇಮಿಸಲ್ಪಟ್ಟ ಸಂದೇಶವಾಹನೆಂದೂ ಮಾನವರೆಲ್ಲರಿಗೂ ದೇವನ ಸಂದೇಶ ತಲಪಿಸಲು ತನ್ನನ್ನು ನೇಮಿಸಲಾಗಿದೆ ಎಂದೂ ಹೇಳಿದಾಗ ಆ ಯಾತ್ರಿಕರು ಆಸಕ್ತಿಯಿಂದ ಆಲಿಸಿದರು. ಅವರು ಹಝ್‌ರತ್ ಪೈಗಂಬರರು(ಸ) ಸತ್ಯವಂತರೆಂದು ಅಂಗೀಕರಿಸಿ ಅವರ ಸಂದೇಶವನ್ನು ಸ್ವೀಕರಿಸಿದರು. ಮದೀನಕ್ಕೆ ಮರಳಿದ ನಂತರ ಈ ಸಂದೇಶವನ್ನು ನಗರದ ನಿವಾಸಿಗಳಿಗೆ ತಲಪಿಸುವುದಾಗಿ ಹೇಳಿದರು.

ಮುಂದಿನ ವರ್ಷ ಔಸ್ ಮತ್ತು ಖಝ್‌ರಜ್ ಗೋತ್ರಗಳ ಹನ್ನೆರಡು ಮಂದಿ ಹಝ್‌ರತ್ ಪೈಗಂಬರರನ್ನು(ಸ) ನಂಬಿದವರಾಗಿ ಯಾತ್ರೆಗೆ ಆಗಮಿಸಿ ಹಝ್‌ರತ್ ಪೈಗಂಬರರನ್ನು(ಸ) ರಹಸ್ಯವಾಗಿ ಭೇಟಿಯಾಗಿ ತಮ್ಮ ನಿಷ್ಠೆಯ ಪ್ರತಿಜ್ಞೆ ಮಾಡಿದರು. ಇಸ್ಲಾಮ್ ಧರ್ಮವನ್ನು ಕಲಿಸಲು ಮತ್ತು ಇಸ್ಲಾಮಿನ ಸಂದೇಶವನ್ನು ಪ್ರಚಾರ ಮಾಡಲು ಸಹಾಯಕ್ಕೆ ಯಾರನ್ನಾದರೂ ಮದೀನಕ್ಕೆ ಕಳುಹಿಸಬೇಕೆಂದು ಅಪೇಕ್ಷಿಸಿದಾಗ ಹಝ್‌ರತ್ ಪೈಗಂಬರರು(ಸ) ಮುಸ್‌ಅಬ್ ಬಿನ್ ಉಮ್ಮೈರ್‌ರನ್ನು ಇದಕ್ಕೋಸ್ಕರ ಮದೀನಕ್ಕೆ ಕಳುಹಿಸಿದರು.

ಮುಂದಿನ ವರ್ಷ ಹಜ್ಜ್ ಕಾಲದಲ್ಲಿ ಎಪ್ಪತ್ತು ಮಂದಿ ಪುರುಷರು ಮತ್ತು ಇಬ್ಬರು ಮಹಿಳೆಯರು ಆಗಮಿಸಿ ಹಝ್‌ರತ್ ಪೈಗಂಬರರೊಡನೆ(ಸ), ತಾವು ಮಕ್ಕದ ನಮ್ಮ ಸಹೋದರರಿಗೆ ಆಶ್ರಯ ನೀಡಲು ಬಯಸುತ್ತೇವೆ; ಮಾತ್ರವಲ್ಲ ಹಝ್‌ರತ್ ಪೈಗಂಬರರು(ಸ) ಇಷ್ಟಪಟ್ಟರೆ ಹಝ್‌ರತ್ ಪೈಗಂಬರರನ್ನು(ಸ) ಸಹ ಸ್ವಾಗತಿಸುವ ಸಂದರ್ಭ ದೊರಕುವುದಾದರೆ ತಾವು ಬಹಳ ಗೌರವಿಸಲ್ಪಡುವುದಾಗಿ ವಿನಂತಿಸಿದರು. ಆ ಸಂದರ್ಭದಲ್ಲಿ ಹಝ್‌ರತ್ ಪೈಗಂಬರರ(ಸ) ಚಿಕ್ಕಪ್ಪ ಅಬ್ಬಾಸ್ ಅವರ ಜೊತೆಗಿದ್ದರು. ಅಬ್ಬಾಸ್ ಆಗ ಮುಸ್ಲಿಮರಾಗಿರಲಿಲ್ಲವಾದರೂ ಹಝ್‌ರತ್ ಪೈಗಂಬರರನ್ನು(ಸ) ಪ್ರೀತಿಸುತ್ತಿದ್ದು ಅವರ ಭದ್ರತೆ ಬಗ್ಗೆ ಕಾಳಜಿ ಹೊಂದಿದ್ದರು. ಮದೀನದ ನಿವಾಸಿಗಳು ಹಝ್‌ರತ್ ಪೈಗಂಬರರನ್ನು(ಸ) ಆಹ್ವಾನಿಸಿ ಬಹಳ ದೊಡ್ಡ ಹೊಣೆಗಾರಿಕೆಯನ್ನು ಹೊರುವುದಾಗಿ ಮುನ್ನೆಚ್ಚರಿಕೆಯನ್ನು ಅಬ್ಬಾಸ್ ನೀಡಿದರು. ಮದೀನದ ಪ್ರತಿನಿಧಿ ಸಂಘದ ನಾಯಕರು ಹೀಗೆ ಹೇಳಿದರು: "ನೀವು ನೀಡಿದ ಆಹ್ವಾನದ ಪರಿಣಾಮದ ಬಗ್ಗೆ ನಾವು ಪೂರ್ಣ ಪ್ರಜ್ಞೆವುಳ್ಳವರಾಗಿದ್ದೇವೆ. ನಾವು ಹಝ್‌ರತ್ ಪೈಗಂಬರರನ್ನು(ಸ) ರಕ್ಷಿಸಲು ತಮ್ಮ ಜೀವಗಳನ್ನೇ ಬಲಿಯರ್ಪಿಸಲು ಸಿದ್ಧರಾಗಿದ್ದೇವೆ." ಅನಂತರ ಹಝ್‌ರತ್ ಪೈಗಂಬರರು(ಸ) ಮಕ್ಕದ ಮುಸ್ಲಿಮರು ಮದೀನಕ್ಕೆ ವಲಸೆ ಹೋಗಲು ಅನುಮತಿ ನೀಡಿದರು. ತಮ್ಮ ಬಗ್ಗೆ ದೇವನ ಆಜ್ಞೆಯನ್ನು ಕಾಯುವುದಾಗಿ ನಿರ್ಧರಿಸಿದರು.

**ಮುಸ್ಲಿಮರ ವಲಸೆ**

ಹಝ್‌ರತ್ ಪೈಗಂಬರರ(ಸ) ನಿರ್ದೇಶ ಪ್ರಕಾರ ಮುಸ್ಲಿಮರು ಬಹಳ ನಿಶಬ್ದವಾಗಿ ಮಕ್ಕದಿಂದ ಮದೀನಕ್ಕೆ ವಲಸೆ ಹೋದರು. ಸ್ವಲ್ಪ ಸಮಯದ ನಂತರ ಮಕ್ಕದಲ್ಲಿ ಹಝ್‌ರತ್ ಪೈಗಂಬರರು, ಅಬೂಬಕರ್, ಅಲಿ ಮತ್ತು ಕೆಲವು ಗುಲಾಮರು ಮಾತ್ರ ಬಾಕಿಯಾಗಿ ಉಳಿದರು. ಹಝ್‌ರತ್ ಪೈಗಂಬರರು(ಸ) ತಮ್ಮ ಕೈಯಿಂದ ತಪ್ಪಿಸಿಕೊಂಡು ಹೋಗಬಹುದೆಂದು ಭಯಪಟ್ಟು ಒಂದು ರಾತ್ರಿ ಅವರನ್ನು ಕೊಲ್ಲಲು ಮಕ್ಕದವರು ನಿರ್ಧರಿಸಿದರು. ಆಗ ಮಕ್ಕವನ್ನು ಬಿಟ್ಟು ಹೋಗಲು ದೇವನ ಆಜ್ಞೆ ಲಭಿಸಿತು. ಹಝ್‌ರತ್ ಪೈಗಂಬರರು(ಸ) ಅಬೂಬಕರರೊಂದಿಗೆ ಮದೀನಕ್ಕೆ ಹೊರಟರು. ಹಝ್‌ರತ್ ಪೈಗಂಬರರು(ಸ) ಮಕ್ಕದಿಂದ ಹೊರಟುಹೋದ ಬಗ್ಗೆ ಮಕ್ಕದ ಖುರೈಶರಿಗೆ ತಿಳಿದಾಗ ಅವರು ಹಝ್‌ರತ್ ಪೈಗಂಬರರನ್ನು(ಸ) ಮತ್ತು ಅಬೂಬಕರರನ್ನು ಹುಡುಕಲು ಒಂದು ಸೇನಾದಳವನ್ನು ಒಬ್ಬ ಪತ್ತೇದಾರನ ಮಾರ್ಗದರ್ಶನದಲ್ಲಿ ಕಳುಹಿಸಿದರು. ಈ ಹುಡುಕುವವರ ಸಂಘವು ಹಝ್‌ರತ್ ಪೈಗಂಬರ್(ಸ) ಮತ್ತು ಅಬೂಬಕರ್ ಅಡಗಿಕೊಂಡಿದ್ದ ಗವಿಯ ಸಮೀಪಕ್ಕೆ ಬಂತು. "ಓಡಿ ಹೋದವರು ಇಲ್ಲಿಂದ ಮುಂದೆ ಸಾಗಿಲ್ಲ" ಎಂದು ಪತ್ತೇದಾರನು ಹೇಳಿದನು. ಅಲ್ಲಿಂದ ಗವಿಯೊಳಗೆ ಹೊರತು ಬೇರೆ ಎಲ್ಲಿಗೂ ಹೋಗಲು ಸಾಧ್ಯವಿರಲಿಲ್ಲ. ಆದರೆ ಗವಿಯೊಳಗೆ ಚೇಳುಗಳೂ ಹಾವುಗಳೂ ಇರುವಾಗ ಅದರೊಳಗೆ ಹೋಗಿ ಶರೀರಕ್ಕೆ ಅಪಾಯವನ್ನುಂಟುಮಾಡಲು ಯಾರಾದರೂ ಬಯಸುವರೇ ಎಂದು ಪತ್ತೇದಾರನನ್ನು ಇತರರು

ಪರಿಹಾಸ ಮಾಡಿದರು. ಅಬೂಬಕರ್(ರ) ಈ ಮಾತುಗಳನ್ನು ಆಲಿಸಿದಾಗ ತಮ್ಮ ಅಡಗುದಾಣ ಶತ್ರುಗಳಿಗೆ ತಿಳಿದರೆ ಹಝ್‌ರತ್ ಪೈಗಂಬರರಿಗೆ(ಸ) ಅಪಾಯ ಉಂಟಾಗಬಹುದೆಂದು ಹೆದರಿದರು. ಅಬೂಬಕರ್(ರ) ತನ್ನ ಭಯದ ಬಗ್ಗೆ ಹೇಳಿದಾಗ ಹಝ್‌ರತ್ ಪೈಗಂಬರ್(ಸ) ಹೇಳಿದರು: ನೀನು ವ್ಯಥೆಪಡಬೇಡ. ಖಂಡಿತವಾಗಿಯೂ ಅಲ್ಲಾಹನು ನಮ್ಮೊಂದಿಗಿದ್ದಾನೆ. (ಪವಿತ್ರ ಖುರ್‌ಆನ್ 9:40).

ಹಝ್‌ರತ್ ಪೈಗಂಬರರನ್ನು(ಸ) ಬೆನ್ನಟ್ಟಲು ಹೋದವರು ಮದೀನಕ್ಕೆ ನಿರಾಶೆಗೊಂಡು ಮರಳಿದರೂ ಅವರು ತಮ್ಮ ಉದ್ದೇಶಲಕ್ಷ್ಯ ಈಡೇರಿಸಲು ದೃಢ ನಿಶ್ಚಯ ಹೊಂದಿದ್ದರು. ಹಝ್‌ರತ್ ಪೈಗಂಬರರನ್ನು(ಸ) ಜೀವಂತವಾಗಿ ಅಥವಾ ಕೊಂದು ಮಕ್ಕಕ್ಕೆ ಮರಳಿ ತರುವವರಿಗೆ ಒಂದು ನೂರು ಒಂಟೆಗಳ ಪಾರಿತೋಷಕ ನೀಡುವುದಾಗಿ ಪ್ರಕಟಿಸಿದರು. ಇದು ಎಲ್ಲ ಕಡೆಗಳಲ್ಲೂ ಘೋಷಿಸಲ್ಪಟ್ಟಿತು.

ಹಝ್‌ರತ್ ಪೈಗಂಬರರು(ಸ) ಮತ್ತು ಅಬೂಬಕರ್(ರ) ಎರಡು ದಿವಸಗಳ ಕಾಲ ಗುಹೆಯಲ್ಲಿ ವಾಸಿಸಿ ಅಬೂಬಕರರ ಒಬ್ಬ ನಂಬಿಗೆಯ ದಾಸ, ಮತ್ತೊಬ್ಬ ದಾರಿತೋರಿಸುವವನ ಜೊತೆಯಲ್ಲಿ ಮದೀನಕ್ಕೆ ಪ್ರಯಾಣ ಹೊರಟರು. ಮಕ್ಕವನ್ನು ಬಿಟ್ಟುಹೋಗಿ ಹತ್ತು ದಿವಸಗಳ ನಂತರ ಹಝ್‌ರತ್ ಪೈಗಂಬರರು(ಸ) ಮದೀನಕ್ಕೆ ಸಮೀಪ ತಲಪಿದಾಗ ಅಲ್ಲಿದ್ದ ಮದೀನದ ಮುಸ್ಲಿಮರು ಮತ್ತು ಮಕ್ಕದಿಂದ ಮದೀನಕ್ಕೆ ವಲಸೆ ಹೋದ ಮುಸ್ಲಿಮರು ಸಂತೋಷಭರಿತರಾಗಿ ಸ್ವಾಗತಿಸಿದರು. ಹಝ್‌ರತ್ ಪೈಗಂಬರರು(ಸ) ಮದೀನದ ಬಡಾವಣೆಯಾದ ಖುಬಾದಲ್ಲಿ ಕೆಲವು ದಿವಸಗಳ ಕಾಲ ತಂಗಿ ಅನಂತರ ಮದೀನ ಪ್ರವೇಶಿಸುವುದಾಗಿ ನಿರ್ಧರಿಸಿದರು. ಮದೀನಕ್ಕೆ ಪ್ರವೇಶಿಸಿದ ನಂತರ ಅವರು ಮಾಡಿದ ಪ್ರಥಮ ಕೆಲಸವೇನೆಂದರೆ ಅವರ ಒಂಟೆ ನಿಂತ ಸ್ಥಳದಲ್ಲಿ ಮಸ್‌ಜಿದ್‌ಗೋಸ್ಕರ ಜಮೀನು ಖರೀದಿಸಿದರು. ಆ ಸ್ಥಳಕ್ಕೆ ಅತ್ಯಂತ ಸಮೀಪವಾದ ಮುಸ್ಲಿಮನೊಬ್ಬನ ಮನೆಯಲ್ಲಿ ವಾಸಿಸಿ ಮಸ್‌ಜಿದ್ ಮತ್ತು ತನ್ನ ವಾಸಕ್ಕೆ ಮನೆ ನಿರ್ಮಿಸುವ ತನಕ ಅಲ್ಲಿರಲು ನಿರ್ಧರಿಸಿದರು.

ಮದೀನಕ್ಕೆ ಹಝ್‌ರತ್ ಪೈಗಂಬರರು(ಸ) ಆಗಮಿಸಿದ ನಂತರ ಮದೀನದ ಎರಡು ಅರಬಿ ಗೋತ್ರಗಳಲ್ಲಿ ಇಸ್ಲಾಮ್ ವೇಗವಾಗಿ ಹರಡಲು ತೊಡಗಿತು. ಸಾಮೂಹಿಕ ಚಳುವಳಿಗಳ ಕಾಲದಲ್ಲಿ ಸಂಭವಿಸುವ ಹಾಗೆ, ಗುಂಪು ಗುಂಪಾಗಿ ಇಸ್ಲಾಮಿಗೆ ಪ್ರವೇಶಿಸಿದ ಎಲ್ಲರೂ ಪ್ರಾಮಾಣಿಕತೆಯಿಂದಲೂ ಉನ್ನತ ಆದರ್ಶಗಳಿಂದ ಪ್ರಭಾವಿತರಾಗಿಯೂ ಪ್ರವೇಶಿಸಿರಲಿಲ್ಲ. ಹೀಗಿದ್ದರೂ ಹಝ್‌ರತ್ ಪೈಗಂಬರರು(ಸ) ಮದೀನದ ಆಡಳಿತೆಯನ್ನು ನಡೆಸಲು ಅಂದಿನ ಪರಿಸ್ಥಿತಿಯಲ್ಲಿ ಅತ್ಯಂತ ಯೋಗ್ಯರೆಂದು ಸಾಮಾನ್ಯವಾಗಿ ಎಲ್ಲರೂ ಭಾವಿಸಿದರು. ಹಝ್‌ರತ್ ಪೈಗಂಬರರ(ಸ) ಮಾರ್ಗದರ್ಶನ ಪ್ರಕಾರ ಅರಬಿಗಳ ಮತ್ತು ಯಹೂದಿಯರ ಮಧ್ಯೆ ಒಪ್ಪಂದವನ್ನು ಮಾಡಿಕೊಳ್ಳಲಾಯಿತು. ಎಲ್ಲರಿಗೂ ಮದೀನದ ಪೌರಾಧಿಕಾರ ನೀಡಲಾಯಿತು. ಮದೀನದ ಆಂತರಿಕ ಆಡಳಿತೆ ನಡೆಸಲು ಮತ್ತು ಬಾಹ್ಯ ಭದ್ರತೆ ಏರ್ಪಡಿಸಲು ನಿಬಂಧನೆಗಳನ್ನು ರಚಿಸಲಾಯಿತು. ಪ್ರತಿಯೊಂದು ಜನಾಂಗದ ಆಂತರಿಕ ವ್ಯವಹಾರಗಳು ಅವರ ಸಂಪ್ರದಾಯಗಳ ಪ್ರಕಾರ ನಡೆಸಲಾಗುವುದೆಂದೂ ಬಾಹ್ಯ ಶತ್ರುಗಳ ಆಕ್ರಮಣದಿಂದ ರಕ್ಷಣೆಗೋಸ್ಕರ ಎಲ್ಲರೂ ಒಗ್ಗೂಡಬೇಕೆಂದೂ ವಿಧಿಸಲಾಗಿತ್ತು. ಮದೀನದ ಯಾವುದೇ ವಿಭಾಗ ಹೊರಗಿನ ಗೋತ್ರಗಳೊಂದಿಗೆ ಪ್ರತ್ಯೇಕ ಒಪ್ಪಂದ ಮಾಡಬಾರದೆಂದೂ ಮದೀನದ ಹೊರಗೆ ನಡೆಸುವ ಹೋರಾಟಕ್ಕೆ ಯಾವ ವಿಭಾಗವನ್ನೂ ನಿರ್ಬಂಧಿಸಬಾರದೆಂದೂ ನಿಶ್ಚಯಿಸಲಾಗಿತ್ತು. ವಿವಾದಗಳ ಬಗ್ಗೆ ಅಂತಿಮ ತೀರ್ಪು ನೀಡುವ ಅಧಿಕಾರ ಹಝ್‌ರತ್ ಪೈಗಂಬರರಿಗೆ(ಸ) ನೀಡಿ ಅವರ ತೀರ್ಪು ಎಲ್ಲರೂ ಅಂಗೀಕರಿಸಿ ಕಾರ್ಯಗತಗೊಳಿಸಬೇಕೆಂದು ನಿರ್ಧರಿಸಲಾಗಿತ್ತು.

ಹಝ್‌ರತ್ ಪೈಗಂಬರರಿಗೆ(ಸ) ಇಸ್ಲಾಮನ್ನು ಪ್ರಚಾರ ಮಾಡುವ ಭಾರವಾದ ಹೊಣೆಗಾರಿಕೆಯೊಂದಿಗೆ ಮದೀನದ ಆಡಳಿತೆ ನಡೆಸುವ ಜವಾಬ್ದಾರಿಕೆಯೂ ಹೊರಿಸಲ್ಪಟ್ಟಿತು. ಹಝ್‌ರತ್ ಪೈಗಂಬರರು(ಸ) ಮದೀನಕ್ಕೆ ಆಗಮಿಸುವ ಮೊದಲು ಖಝ್‌ರಜ್ ಗೋತ್ರದ ನಾಯಕನಾದ ಅಬ್ದುಲ್ಲಾ ಬಿನ್ ಉಬಯ್ಯ್‌ಗೆ ಮದೀನದ ಕಿರೀಟ ದೊರಕುವುದೆಂಬ ಪ್ರತೀಕ್ಷೆ ಇದ್ದದ್ದು ಈ ಘಟನೆಯಿಂದ ನಿರಾಶೆಯಾಯಿತು. ಅವನು ಮದೀನದ ಕಪಟ ವಿಶ್ವಾಸಿಗಳ ನಾಯಕನಾದನು. ಯಹೂದಿಯರು ಹಝ್‌ರತ್ ಪೈಗಂಬರರ(ಸ) ಬಗ್ಗೆ ಒಳ್ಳೆಯ ಮನೋಭಾವವನ್ನು ಹೊಂದಿರಲಿಲ್ಲ. ಧರ್ಮೋಪದೇಶಕಾಂಡದಲ್ಲಿ (18:18) ಭವಿಷ್ಯವಾಣಿ ನುಡಿಯಲ್ಪಟ್ಟ ಒಬ್ಬ ಪ್ರವಾದಿಯನ್ನು ಪ್ರತೀಕ್ಷಿಸುತ್ತಿದ್ದರೂ ಒಬ್ಬ ಅರಬಿ ಪ್ರವಾದಿ ಈ ಭವಿಷ್ಯವಾಣಿಯ ಈಡೇರಿಕೆಯಾಗಿ ಆಗಮಿಸಿದರೆಂದು ನಂಬಿದರೆ ಯಹೂದಿಯರಿಗಿಂತ ಅರಬಿಗಳ ಗೌರವ ಹೆಚ್ಚುವುದೆಂದೂ ಯಹೋವನಿಗೆ ಪ್ರಿಯರಾದ ತಮಗೆ ಇದು ಸಹಿಸಲಾಗದೆಂದೂ ಯಹೂದಿಯರು ಯೋಚಿಸುತ್ತಿದ್ದರು. ಹಝ್‌ರತ್ ಪೈಗಂಬರರನ್ನು(ಸ) ಬಹಿರಂಗವಾಗಿ ವಿರೋಧಿಸಲು ಯಹೂದಿಯರಿಗೆ ಧೈರ್ಯವಿರಲಿಲ್ಲವಾದರೂ ಮದೀನದೊಳಗೆ ಮತ್ತು ಹೊರಗೆ ಅವರು ರಹಸ್ಯವಾಗಿ ಅವರ ವಿರುದ್ಧ ಗೂಢಾಲೋಚನೆಗಳನ್ನು ನಡೆಸುತ್ತಿದ್ದರು. ಮದೀನದ ಆಂತರಿಕ ಸಮಸ್ಯೆಗಳು ಮತ್ತು ಮುಸ್ಲಿಮರಿಗಿರುವ ಅಪಾಯಕರ ಸ್ಥಿತಿಯೊಂದಿಗೆ ಹಝ್‌ರತ್ ಪೈಗಂಬರರಿಗೆ(ಸ) ಸಹ ಆಪತ್ತು ಇರುವಾಗ ಮಕ್ಕದ ಜನರಿಂದ ಒಂದು ಭಯಂಕರ ಬೆದರಿಕೆ ತಲೆದೋರಿತು.

ಹಝ್‌ರತ್ ಪೈಗಂಬರರು(ಸ) ಮದೀನಕ್ಕೆ ಸುರಕ್ಷಿತವಾಗಿ ತಲಪಿದರೆಂದು ತಿಳಿದಾಗ ಮದೀನದಿಂದ ಅವರನ್ನು ಹೊರಹಾಕಲು ಬಲವನ್ನು ಪ್ರಯೋಗಿಸಲು ಮಕ್ಕದವರು ನಿರ್ಧರಿಸಿದರು. ಮಕ್ಕದ ಜನರು ಅಬ್ದುಲ್ಲಾ ಬಿನ್ ಉಬಯ್ಯ್‌ಗೆ ಒಂದು ಪತ್ರ ಬರೆದು, ಮದೀನದ ಜನರು ಮುಹಮ್ಮದರನ್ನು ನಗರದಿಂದ ಹೊರಗೆ ತಳ್ಳದಿದ್ದರೆ ಅಥವಾ ಮುಹಮ್ಮದ್ ಮತ್ತು ಅನುಯಾಯಿಗಳ ವಿರುದ್ಧ ಹೋರಾಡಲು ಮಕ್ಕದವರ ಜೊತೆ ಸೇರದಿದ್ದರೆ ಮಕ್ಕದವರು ಮದೀನವನ್ನು ಆಕ್ರಮಿಸಿ ಎಲ್ಲ ಪುರುಷರನ್ನು ಕೊಂದುಹಾಕಿ ಮಹಿಳೆಯರನ್ನು ಸೆರೆ ಹಿಡಿಯುವುದಾಗಿ ಬೆದರಿಕೆ ಹಾಕಿದ್ದರು. ಈ ಕೊನೆಯ ಎಚ್ಚರಿಕೆ ತಲಪಿದಾಗ ಅಬ್ದುಲ್ಲಾ ತನ್ನ ಬೆಂಬಲಿಗರ ರಹಸ್ಯ ಸಭೆ ಕರೆದು ಮಕ್ಕದವರ ಬೆದರಿಕೆಯನ್ನು ನಿವಾರಿಸಲು ತಮಗಿರುವ ಏಕಮಾತ್ರ ಮಾರ್ಗ ಮುಹಮ್ಮದರನ್ನೂ ಶಿಷ್ಯರನ್ನೂ ಮದೀನದಿಂದ ಬಲಾತ್ಕಾರವಾಗಿ ಹೊರದಬ್ಬುವುದಾಗಿದೆ ಎಂದು ನಿರ್ಧರಿಸಿದರು. ಇದರ ಬಗ್ಗೆ ಸಮಾಚಾರ ದೊರೆತಾಗ ಹಝ್‌ರತ್ ಪೈಗಂಬರರು(ಸ) ಅಬ್ದುಲ್ಲಾನನ್ನು ಭೇಟಿಯಾಗಿ ಅವನು ತನ್ನ ನಿರ್ಧಾರ ಪ್ರಕಾರ

ನಡೆಯಲು ಯತ್ನಿಸಿದರೆ ಅವನೇ ಸ್ವತಃ ನಾಶವಾಗುವನು ಎಂದು ಹೇಳಿದರು. ಆಗ ಅಬ್ದುಲ್ಲಾ ತನ್ನ ಯೋಜನೆಯನ್ನು ಕಾರ್ಯಗತಗೊಳಿಸುವುದರಿಂದ ಹಿಂದೆ ಸರಿದನು. ಆದರೆ ಸಂದರ್ಭ ದೊರೆತರೆ ಹಝ್ರತ್ ಪೈಗಂಬರರನ್ನೂ(ಸ) ಮುಸ್ಲಿಮರನ್ನೂ ಮದೀನದಿಂದ ಹೊರಹಾಕುವ ಮತ್ತು ಮದೀನದ ಆಡಳಿತೆಗಾರನಾಗುವ ಆಶೆಯನ್ನು ಎಂದೂ ಕೈ ಬಿಟ್ಟಿರಲಿಲ್ಲ. ಮಕ್ಕದವರು ಮತ್ತು ಮದೀನದ ಮುಸ್ಲಿಮರ ಮಧ್ಯೆ ಹೋರಾಟ ಪ್ರಾರಂಭವಾಗಲು ಈ ರೀತಿ ಸಿದ್ಧತೆಗಳು ನಡೆದುವು.

ಹಝ್ರತ್ ಪೈಗಂಬರರ(ಸ) ಎಲ್ಲ ಮಹತ್ತರವಾದ ಗುಣಗಳಿಗೆ ಈಗ ಪಂಥಾಹ್ವಾನ ನೀಡಲಾಯಿತು. ಅವುಗಳು ಕಾರ್ಯನಿರತವಾದುವು. ಇಸ್ಲಾಮ್ ಧರ್ಮಕ್ಕೆ ಸಹಾಯ ನೀಡುವುದಾಗಿ ಮತ್ತು ಅದು ಅಂತಿಮವಾಗಿ ಜಯಶಾಲಿಯಾಗುವುದು ಎಂಬ ದೇವನ ವಾಗ್ದಾನ ಸತ್ಯವಾಗಿದ್ದರೂ ಅದರ ಬಗ್ಗೆ ಪೂರ್ಣ ಭರವಸೆ ಇಡಬಹುದಾದರೂ ದೇವನು ಬಯಸುವುದೇನೆಂದರೆ ಇದಕ್ಕೋಸ್ಕರ ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡಬೇಕು ಎಂದಾಗಿದೆ. ಇಸ್ಲಾಮಿನ ಶಕ್ತಿಯ ರಹಸ್ಯ ಇದರಲ್ಲಿ ಅಡಕವಾಗಿದೆ. ದೇವನ ಸಹಾಯದ ಬಗ್ಗೆ ಸಂಪೂರ್ಣ ವಿಶ್ವಾಸ ಮತ್ತು ಭರವಸೆ ಹೊಂದುವುದರ ಜೊತೆಗೆ ಮನುಷ್ಯನಿಗೆ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಮಾಡಬೇಕಾಗಿದೆ. ಇದು ದೇವನೇ ಕಲಿಸಿದ ತತ್ವವಾಗಿದೆ. ಇದರ ಮೂಲಕವೇ ಗುರಿಗೆ ತಲಪಲು ಸಾಧ್ಯವಿದೆ. ಎಲ್ಲ ಒಳ್ಳೆಯ ಕೆಲಸಗಳಿಗೆ ಜಯವನ್ನು ನೀಡುವವನು ದೇವನೇ ಆಗಿದ್ದಾನೆ. ಆದರೆ ಅದಕ್ಕೋಸ್ಕರ ಪ್ರಾಮಾಣಿಕವೂ ಸ್ಥಿರವೂ ಆದ ಪ್ರಯತ್ನಗಳೂ ದೇವನ ವಾಗ್ದಾನಗಳ ಬಗ್ಗೆ ಭರವಸೆಯೂ ಹೃತ್ಪೂರ್ವಕ ಪ್ರಾರ್ಥನೆಗಳೂ ಆವಶ್ಯಕವಾಗಿವೆ.

**ಬದ್ರ್ ಯುದ್ಧ**

ಮುಸ್ಲಿಮ್ ಸಮುದಾಯವನ್ನು ರೂಪಿಸಲು, ಮದೀನವನ್ನು ಸಂರಕ್ಷಿಸಲು ಮತ್ತು ಇಸ್ಲಾಮಿನ ಅಂತಿಮ ಜಯಕ್ಕೋಸ್ಕರ ಹಝ್ರತ್ ಪೈಗಂಬರರು(ಸ) ಕೈಗೊಂಡ ಕ್ರಮಗಳ ಬಗ್ಗೆ ಸಂಪೂರ್ಣ ವಿವರಣೆ ನೀಡಲು ಈ ಕಿರುಕೃತಿಯಲ್ಲಿ ಸಾಧ್ಯವಿಲ್ಲ. ಒಂದು ಉದಾಹರಣೆ ರೂಪದಲ್ಲಿ ಇಸ್ಲಾಮ್‌ಗೋಸ್ಕರ ನಡೆಸಲಾದ ಪ್ರಥಮ ಯುದ್ಧದ ಬಗ್ಗೆ ಸಂಕ್ಷಿಪ್ತ ವಿವರಣೆ ನೀಡುವೆನು. ಮದೀನಕ್ಕೆ ಹಝ್ರತ್ ಪೈಗಂಬರರು(ಸ) ವಲಸೆ ಬಂದ ನಂತರ ಒಂದು ವರ್ಷ ದಾಟಿ ಹೋದಾಗ ಮಕ್ಕದ ಜನರು ಮದೀನವನ್ನು ಆಕ್ರಮಿಸಲು ಬಲಿಷ್ಠವಾದ ಸೈನ್ಯವನ್ನು ಸಿದ್ಧಗೊಳಿಸುತ್ತಿರುವುದಾಗಿ ರಹಸ್ಯ ವರದಿಗಳು ಬರುತ್ತಿದ್ದುವು. ಮಕ್ಕದವರ ದೊಡ್ಡದಾದೊಂದು ವ್ಯಾಪಾರಿ ಸಂಘ ಸಿರಿಯಾದಿಂದ ಮರಳಿ ಬರುವಾಗ ಮದೀನದ ಮುಸ್ಲಿಮರು ಅದನ್ನು ಆಕ್ರಮಿಸುವರೆಂದೂ ಅದನ್ನು ತಡೆಯಲು ಸೇನಾ ದಳವನ್ನು ಸಿದ್ಧಪಡಿಸಲಾಗುತ್ತಿದೆ ಎಂದೂ ಮಕ್ಕದವರು ನೆವನ ಹೇಳುತ್ತಿದ್ದರು. ಮಕ್ಕದವರಿಗೆ ವಾಸ್ತವಿಕವಾಗಿಯೂ ತಮ್ಮ ವ್ಯಾಪಾರಿ ಸಂಘದ ರಕ್ಷಣೆ ಬಗ್ಗೆ ಕಾಳಜಿ ಇದ್ದಿರಬಹುದು. ಏಕೆಂದರೆ ಅವರು ಹಝ್ರತ್ ಪೈಗಂಬರರನ್ನೂ(ಸ) ಮುಸ್ಲಿಮರನ್ನೂ ಬಲಾತ್ಕಾರದಿಂದ ನಾಶಮಾಡಲು ಮೊದಲೇ ನಿರ್ಧರಿಸಿದ್ದರು. ಸಿರಿಯಾದಿಂದ ಹೊರಟ ಮಕ್ಕದವರ ವ್ಯಾಪಾರ ಸಂಘ ಬಹಳ ದೊಡ್ಡದೇ ಆಗಿತ್ತು. ಅದರಲ್ಲಿ ಬಹಳ ಬೆಲೆಬಾಳುವ ಸರಕುಗಳಿದ್ದುವು ಮತ್ತು ಅದರೊಂದಿಗೆ ಶಸ್ತ್ರ ಸಜ್ಜಿತ ರಕ್ಷಣಾ ಪಡೆಯೂ ಇದ್ದಿತು. ಮಕ್ಕದ ಸೈನ್ಯ ಉತ್ತರದ ಕಡೆಗೆ ದಂಡಯಾತ್ರೆಗೆ ಹೊರಟಾಗ ವ್ಯಾಪಾರಿ ಸಂಘ ಅಪಾಯದ ಕ್ಷೇತ್ರ ದಾಟಿದೆ ಎಂಬ ಸಮಾಚಾರ ತಿಳಿಯಿತು. ಹೀಗಿದ್ದರೂ ಮಕ್ಕದ ಸೈನ್ಯ ಮದೀನದ ಕಡೆಗೆ ಸಾಗಿತು.

ಆತ್ಮ ರಕ್ಷಣೆಗೆ ಪ್ರತಿರೋಧಕ ಯುದ್ಧ ಮಾಡಲು ಮುಸ್ಲಿಮರಿಗೆ ದೇವನಿಂದ ಅನುಮತಿ ದೊರೆತಿತ್ತು. (ಪವಿತ್ರ ಖುರ್‌ಆನ್ 22:40–41 ನೋಡಿರಿ). ಹಝ್ರತ್ ಪೈಗಂಬರರು(ಸ) ಮಕ್ಕ ಮತ್ತು ಮದೀನದ ಮೂನ್ನೂರಕ್ಕಿಂತ ಸ್ವಲ್ಪ ಹೆಚ್ಚು ಸಂಖ್ಯೆಯ ಮುಸ್ಲಿಮರನ್ನು ಜೊತೆಗೂಡಿಸಿ ಮಕ್ಕದ ಸೈನ್ಯವನ್ನು ಎದುರಿಸಲು ಹೊರಟರು. ಮುಸ್ಲಿಮರ ಈ ಗುಂಪನ್ನು 'ಸೈನ್ಯ'ವೆಂದು ಹೇಳಲು ಸಾಧ್ಯವಿರಲಿಲ್ಲ. ಅವರು ಧರ್ಮವಿಶ್ವಾಸದ ಕಾರಣದಿಂದ ಮಾತ್ರ ಒಗ್ಗೂಡಿ ಅದರ ರಕ್ಷಣೆಗೋಸ್ಕರ ಮಡಿಯಲು ಸಿದ್ಧರಾಗಿದ್ದರು. ಅವರಲ್ಲಿ ಕೆಲವರು ಮಕ್ಕದ ಹಿರಿಯ ಮುಸ್ಲಿಮ್ ಉತ್ತಮ ಹೋರಾಟಗಾರರಾಗಿದ್ದರು. ಉಳಿದವರು ಯುದ್ಧದ ಬಗ್ಗೆ ಯಾವ ಅನುಭವವೂ ಇಲ್ಲದ ತರುಣರಾಗಿದ್ದರು. ಧರ್ಮದ ಬಗ್ಗೆ ಪ್ರತಿಬದ್ಧತೆ ಮತ್ತು ಅದಕ್ಕೆ ಬೆಂಬಲ ನೀಡುವ ಉತ್ಕಟೇಚ್ಛೆ ಅವರ ಗುಣ ವಿಶೇಷಗಳಾಗಿದ್ದುವು. ಬಹಳ ಕಡಿಮೆ ಆಯುಧಗಳನ್ನು ಹೊಂದಿದ ಮುಸ್ಲಿಮರಲ್ಲಿ ಎರಡು ಕುದುರೆಗಳೂ ಕೆಲವು ಒಂಟೆಗಳೂ ಇದ್ದುವು. ಆದರೆ ಮಕ್ಕದ ಸೈನ್ಯದಲ್ಲಿ ಶಸ್ತ್ರ ಸಜ್ಜಿತ ಪಳಗಿದ ಸೈನಿಕರು ಒಂಟೆ, ಕುದುರೆಗಳಲ್ಲಿ ಸವಾರಿ ಮಾಡುತ್ತಿದ್ದರು.

ಮೂರು ದಿನಗಳ ತನಕ ಮುಂದೆ ಸಾಗಿ ಮುಸ್ಲಿಮರು ಬದ್ರ್ ಎಂಬ ಸ್ಥಳಕ್ಕೆ ತಲಪಿ ಒಂದು ಬಾವಿಯ ಸಮೀಪ ಠಾಣೆ ಹೂಡಿದರು. ನೆಲವು ಮರಳಿನಿಂದ ಕೂಡಿತ್ತು. ಮುಸ್ಲಿಮರ ಪೈಕಿ ಇದ್ದ ಕೆಲವು ಅನುಭವಶಾಲಿ ಯೋಧರು ಯುದ್ಧ ಕಾಲದಲ್ಲಿ ಇದು ಪ್ರತಿಕೂಲವಾಗುವುದೆಂದು ಭಯಪಟ್ಟರು. ಏಕೆಂದರೆ ಮರಳಿನ ಮೇಲೆ ವೇಗವಾಗಿ ಹೋರಾಡಲು ಸಾಧ್ಯವಿರಲಿಲ್ಲ. ಮಕ್ಕದ ಸೈನ್ಯ ಅಲ್ಲಿಗೆ ತಲಪಿ ಗಟ್ಟಿಯಾದ ಆವೆಮಣ್ಣಿನ ನೆಲದ ಮೇಲೆ ಶಿಬಿರ ಹೂಡಿತು.

ರಾತ್ರಿ ಅಂಧಕಾರ ಕವಿಯಿತು. ಹಝ್ರತ್ ಪೈಗಂಬರರು(ಸ) ರಾತ್ರಿ ಇಡೀ ಪ್ರಾರ್ಥಿಸುತ್ತಾ ಇದ್ದರು. ಅವರಿಗೆ ದೇವನ ಎಲ್ಲ ವಾಗ್ದಾನಗಳ ಬಗ್ಗೆ ಸಂಪೂರ್ಣ ಭರವಸೆ ಇತ್ತು. ಆದರೆ ದೇವನು ಸರ್ವಶಕ್ತನಾಗಿದ್ದು ಮನುಷ್ಯರು ಅನೇಕ ಬಲಹೀನತೆಗಳನ್ನು ಹೊಂದಿದವರಾಗಿದ್ದಾರೆ. ಹಝ್ರತ್ ಪೈಗಂಬರರು(ಸ) ಜಯಕ್ಕೋಸ್ಕರ ಪ್ರಾರ್ಥಿಸಿದರು; ಮುಸ್ಲಿಮರಿಗೆ ಶಕ್ತಿ ನೀಡಲು ಪ್ರಾರ್ಥಿಸಿದರು; ತನ್ನ ಸ್ಥಿರತೆಗೋಸ್ಕರ ಮತ್ತು ತನ್ನೊಂದಿಗಿರುವವರ ಸ್ಥಿರತೆಗೋಸ್ಕರ ಪ್ರಾರ್ಥಿಸಿದರು. ಆ ರಾತ್ರಿ ಅವರು ಪ್ರಾರ್ಥಿಸಿದ ಪ್ರಾರ್ಥನೆಯ ಒಂದು ಭಾಗ ನಮಗೆ ವರದಿಯಾಗಿ ಲಭಿಸಿದೆ. ಆ ಪ್ರಾರ್ಥನೆ ಅವರ ಆತಂಕದ ತೀವ್ರತೆಯನ್ನು ಸೂಚಿಸುತ್ತದೆ. ಅವರು ಹೀಗೆ ಪ್ರಾರ್ಥಿಸಿದರು:

"ಹೇ ಪ್ರಭೂ, ಭೂಲೋಕದಲ್ಲಿ ನಿನ್ನನ್ನು ಮಾತ್ರ ಆರಾಧಿಸುವವರು ಇವರು ಮಾತ್ರವಾಗಿದ್ದಾರೆ. ಈ ಜನರು ಈ ದಿನ ಯುದ್ಧದಲ್ಲಿ ಮೃತರಾದರೆ ನಿನ್ನ ಹೆಸರು ಹೇಳಿ ಕರೆಯುವವರು ಲೋಕದಲ್ಲಿ ಯಾರು ತಾನೆ ಬಾಕಿಯಾಗಿ ಉಳಿಯುವರು?"

ಬೆಳಗಾಯಿತು, ಮಳೆ ಸುರಿಯಿತು. ಮಳೆಯಿಂದ ಮುಸ್ಲಿಮರಿದ್ದ ಮರಳುಭೂಮಿ ಗಟ್ಟಿಯಾಯಿತು. ಆದರೆ ಶತ್ರು ಸೈನ್ಯವಿದ್ದ

ಆವೆಮಣ್ಣಿನ ನೆಲ ಮಳೆಯಿಂದ ನೆನೆದು ಜಾರುವಂತಾಯಿತು. ಮುಸ್ಲಿಮರಿಗೆ ಸಮಾಧಾನವೂ ಧೈರ್ಯವೂ ಉಂಟಾಯಿತು. ಮುಸ್ಲಿಮರು ಭರವಸೆ ಮತ್ತು ಭಯ ಹೊಂದಿದ್ದರು. ಸತ್ಯ ಮತ್ತು ಸಾತ್ವಿಕತೆಯ ಶಕ್ತಿಗಳು ಸುಳ್ಳು ಮತ್ತು ಅಜ್ಞಾನದ ಶಕ್ತಿಗಳ ವಿರುದ್ಧ ಮಾನವ ಚರಿತ್ರೆಯಲ್ಲಿ ಪ್ರಥಮ ಬಾರಿ ಹೋರಾಟ ನಡೆಸುವ ದಿನ ಅದಾಗಿತ್ತು. ಹಝ್ರತ್ ಪೈಗಂಬರರು[ಸ] ತನ್ನೊಂದಿಗೆ ಇದ್ದ ಜನರನ್ನು ಯುದ್ಧಕ್ಕೋಸ್ಕರ ಸಿದ್ಧಪಡಿಸಿ ಪುನಃ ದೇವನನ್ನು ಬೇಡಿಕೊಳ್ಳಲು ಹೋದರು. ಅವರು ದೇವನ ಮುಂದೆ ಸಾಷ್ಟಾಂಗ ಪ್ರಣಾಮ ಮಾಡುತ್ತಾ ನೋವಿನಿಂದ ಭರಿತರಾಗಿ ಪ್ರಾರ್ಥಿಸಲು ತೊಡಗಿದರು. ಆಗ ಅಬೂಬಕರ್[ರ] ಅಲ್ಲಿಗೆ ಬಂದು ಹೇಳಿದರು: "ಅಲ್ಲಾಹನ ಸಂದೇಶವಾಹಕರೇ, ತಾವು ಸಾಕಷ್ಟು ಪ್ರಾರ್ಥನೆ ಮಾಡಿರುವಿರಿ." ಆಗ ಹಝ್ರತ್ ಪೈಗಂಬರರು[ಸ] ಸಾಷ್ಟಾಂಗ ಪ್ರಣಾಮದಿಂದ ಎದ್ದು ಹೇಳಿದರು: ಮಕ್ಕದಲ್ಲಿ ನನಗೆ ದೇವನಿಂದ ಲಭಿಸಿದ ಭವಿಷ್ಯವಾಣಿ ಈಡೇರುವ ಕಾಲ ಇದಾಗಿದೆ ಎಂದು ದೇವನು ತಿಳಿಸಿರುವನು. ಆ ಭವಿಷ್ಯವಾಣಿ ಹೀಗೆ:

"ಆ ಪಂಗಡದವರು ಶೀಘ್ರದಲ್ಲೇ ಪರಾಜಯಗೊಳ್ಳುವರು; ಅವರು ಬೆನ್ನುಹಾಕಿ ಓಡುವರು. ಅದು ಅವರಿಗೆ ನಿರ್ದಿಷ್ಟಪಡಿಸಿದ ಸಮಯವಾಗಿದೆ. ಆ ಘಳಿಗೆ ಅತ್ಯಂತ ಆಪತ್ಕರ ಮತ್ತು ಅತಿ ಕಹಿಯಾಗಿ ಇರುವುದು." (ಪವಿತ್ರ ಖುರ್‌ಆನ್ 54:46,47).

ಉದಿಸುತ್ತಿರುವ ಸೂರ್ಯನಿಗೆ ಬೆನ್ನು ಹಾಕಿ ಮುಸ್ಲಿಮರು ನಿಂತಿದ್ದರು. ಸೂರ್ಯನು ಮಕ್ಕದ ಖುರೈಶರ ಮುಖದ ಮೇಲೆ ಬೆಳಕು ಬೀರುತ್ತಿದ್ದನು. ಖುರೈಶರ ಸೈನಿಕರು ಮತ್ತು ಆಯುಧ ಹೆಚ್ಚಿಗೆ ಇದ್ದುದರಿಂದ ಅವರು ಉತ್ತಮ ಸ್ಥಿತಿಯಲ್ಲಿರುವಂತೆ ಸ್ವಲ್ಪ ಸಮಯ ಕಾಣಿಸಿತು. ಹಝ್ರತ್ ಪೈಗಂಬರರು[ಸ] ಒಂದು ಮುಷ್ಟಿ ಚಿಕ್ಕ ಕಲ್ಲುಗಳನ್ನು ಮತ್ತು ಮರಳನ್ನು ಎತ್ತಿಕೊಂಡು ಶತ್ರು ಸೈನ್ಯದ ಕಡೆಗೆಸೆದರು. ಆಗ ಭಯಂಕರ ಬಿರುಗಾಳಿ ಬೀಸಿ ಕಲ್ಲು ಮತ್ತು ಮರಳು ಶತ್ರು ಸೈನಿಕರ ಮುಖಗಳಿಗೆ ಅಪ್ಪಳಿಸಿತು. ಅವರ ಸೈನಿಕರು ಕುರುಡರ ಹಾಗೆ ಆದುದರಿಂದ, ಅವರು ತಪ್ಪಾಗಿ ಚಲಿಸಿದುದರಿಂದ ಅದರ ಪರಿಣಾಮ ಅವರಿಗೆ ಹಿತಕರವಾಗಲಿಲ್ಲ. ಯುದ್ಧದ ಪರಿಣಾಮದ ಬಗ್ಗೆ ಸಂಶಯ ಉಂಟಾಗಲಿಲ್ಲ. ಖುರೈಶರ ಶೂರರಾದ ಯೋಧರು ಸತ್ತವರೂ ಸಾಯುತ್ತಿರುವವರೂ ಆಗಿ ಕಾಣಿಸಿದರು. ಅಬೂಜಹಲನ ಸಮೇತ ಎಪ್ಪತ್ತು ಪ್ರಮುಖ ಖುರೈಶಿಗಳು ಕೊಲ್ಲಲ್ಪಟ್ಟರು. ಅಷ್ಟೇ ಸಂಖ್ಯೆಯ ಜನರು ಸೆರೆಯಾಳುಗಳಾದರು. ಅವರಲ್ಲಿ ಹಝ್ರತ್ ಪೈಗಂಬರರ[ಸ] ಚಿಕ್ಕಪ್ಪ ಅಬ್ಬಾಸ್ ಮತ್ತು ಅವರ ಒಬ್ಬ ಪುತ್ರಿಯ ಪತಿಯೂ ಸೇರಿದ್ದರು. ಮುಸ್ಲಿಮರಲ್ಲಿ ಹದಿನಾಲ್ಕು ಜನರು ಹುತಾತ್ಮರಾದರು. ಆರು ಜನ ಮಕ್ಕದಿಂದ ವಲಸೆ ಬಂದ ಮುಹಾಜಿರ್‌ಗಳಾಗಿದ್ದರು. ಎಂಟು ಜನ ಮದೀನದ ಅನ್‌ಸಾರ್‌ಗಳಾಗಿದ್ದರು. ಮುಸ್ಲಿಮರಲ್ಲಿ ಯಾರನ್ನೂ ಶತ್ರುಗಳು ಸೆರೆಯಾಳಾಗಿ ಬಂಧಿಸಿರಲಿಲ್ಲ. ಹಝ್ರತ್ ಪೈಗಂಬರರು[ಸ] ಮುಸ್ಲಿಮರಿಗೆ ದೊರೆತ ಜಯಕ್ಕೋಸ್ಕರ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿದರು. ಆದರೆ ಅನೇಕ ಖುರೈಶರು ನಿರರ್ಥಕವಾಗಿ ಹೋರಾಡಿ ಕೊಲ್ಲಲ್ಪಟ್ಟುದರಿಂದ ಬಹಳ ವ್ಯಥೆಗೊಂಡರು.

ಸೆರೆಯಾಳುಗಳ ಬಗ್ಗೆ ಬಹಳ ಚರ್ಚೆ ನಡೆಯಿತು. ಅರಬಿ ಸಂಪ್ರದಾಯ ಪ್ರಕಾರ ಅವರನ್ನು ಕೂಡಲೆ ಕೊಲ್ಲಬಹುದಾಗಿತ್ತು. ಆದರೆ ಹಝ್ರತ್ ಪೈಗಂಬರರು[ಸ] ಹೀಗೆ ತೀರ್ಮಾನಿಸಿದರು: ಬಿಡುಗಡೆಗೆ ಪರಿಹಾರ ನೀಡುವವರನ್ನು ಬಿಡುಗಡೆ ಮಾಡಲಾಗುವುದು. ಪರಿಹಾರ ನೀಡಲು ಸಾಧ್ಯವಿರದ ಸೆರೆಯಾಳುಗಳನ್ನು ಕರುಣೆಯಿಂದ ಬಿಟ್ಟು ಬಿಡಲಾಗುವುದು. ಸೆರೆಯಾಳುಗಳಲ್ಲಿ ವಿದ್ಯಾವಂತರು ಮುಸ್ಲಿಮ್ ಮಕ್ಕಳಿಗೆ ವಿದ್ಯೆ ಕಲಿಸಿ ಪರಿಹಾರ ನೀಡಬಹುದೆಂದು ಸಹ ಅನುಮತಿಸಲಾಯಿತು.

ಬದ್ರ್ ಯುದ್ಧದ ಸೋಲಿನ ಬಗ್ಗೆ ಸಮಾಚಾರ ಮಕ್ಕಕ್ಕೆ ತಲಪಿದಾಗ ಮಕ್ಕದ ಎಲ್ಲ ಮನೆಗಳಲ್ಲೂ ದುಃಖಾಚರಣೆ ಜರಗಿತು. ಆದರೆ ಖುರೈಶ್ ಗೋತ್ರದ ಹಿರಿಯರು ಸಾಂಪ್ರದಾಯಿಕ ಗೋಳಾಟಗಳನ್ನು ನಿಷಿದ್ಧಗೊಳಿಸಿದರು. ಸೇಡು ತೀರಿಸಲು ಸೈನ್ಯವನ್ನು ಸಜ್ಜುಗೊಳಿಸಲು ಪ್ರಾರಂಭಿಸಿದರು. ವ್ಯಾಪಾರ ಸಂಘ ಗಳಿಸಿದ ಲಾಭವನ್ನು ಹಂಚದೆ ಇನ್ನೊಂದು ಸೈನ್ಯವನ್ನು ಸಿದ್ಧಗೊಳಿಸಲು ಕಾದಿರಿಸಿದರು.

ಬದ್ರ್ ಯುದ್ಧದ ಬಗ್ಗೆ ಹೇಳುವುದಾದರೆ, ಸತ್ಯಕ್ಕೆ ಬೆಂಬಲವಾಗಿಯೂ ಸುಳ್ಳಿಗೆ ವಿರುದ್ಧವಾಗಿಯೂ ದೇವನು ಸ್ಪಷ್ಟ ದೃಷ್ಟಾಂತ ತೋರಿಸಿದ ಇನ್ನೊಂದು ಘಟನೆ ಮಾನವ ಚರಿತ್ರೆಯಲ್ಲಿ ಕಂಡು ಬರುವುದಿಲ್ಲ. ವಿರುದ್ಧ ಪಕ್ಷಗಳ ಮಧ್ಯೆ ಶಕ್ತಿಗೆ ಸಂಬಂಧಿಸಿ ಇದ್ದ ದೊಡ್ಡ ವ್ಯತ್ಯಾಸ ಪ್ರಕಾರ ಬಲಹೀನ ಪಕ್ಷ ಸಂಪೂರ್ಣವಾಗಿ ನಾಶವಾಗಬೇಕಾಗಿತ್ತು. ಬಲಿಷ್ಠವಾದ ಖುರೈಶ್ ಸೈನ್ಯ ಸೋತು ಹೋಗಿ ಬಲಹೀನರಾದ ಮುಸ್ಲಿಮ್ ಸೈನ್ಯ ಜಯಶಾಲಿಯಾದುದಕ್ಕೆ ದೇವನ ಸಹಾಯ ಮತ್ತು ಕರುಣೆಯ ಬೆಂಬಲ ಮುಸ್ಲಿಮರಿಗಿತ್ತು ಎನ್ನುವುದಲ್ಲದೆ ಬೇರೆ ರೀತಿ ವಿವರಿಸಲು ಸಾಧ್ಯವಿಲ್ಲ. ಮುಂದೆ ನಾಲ್ಕು ವರ್ಷಗಳ ಕಾಲ ಹೋರಾಟ ಮುಂದುವರಿದರೂ ಖುರೈಶರು ಹೆಮ್ಮೆ ಪಡುತ್ತಿದ್ದ ಶಕ್ತಿಯ ಬೆನ್ನೆಲುಬು ಬದ್ರ್ ಯುದ್ಧ ಕ್ಷೇತ್ರದಲ್ಲಿ ಮುರಿದು ಹೋಯಿತೆನ್ನುವುದರಲ್ಲಿ ಸಂಶಯವಿಲ್ಲ. ♦

**LOVE FOR ALL - HATRED FOR NONE**

**ಎಲ್ಲರೊಂದಿಗೆ ಪ್ರೀತಿ – ಯಾರೊಂದಿಗೂ ದ್ವೇಷವಿಲ್ಲ**

# ಮಹಿಳೆಯರೊಂದಿಗೆ ವರ್ತಿಸುವ ಬಗ್ಗೆ ಇಸ್ಲಾಮ್ ನೀಡುವ ಉಪದೇಶಗಳು

**ಅಹ್ಮದಿಯಾ ಜಮಾಅತ್ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಅವರ ಉಪದೇಶಗಳ ಆಯ್ದ ಭಾಗಗಳು**

ಮಹಿಳೆಯರು ಮತ್ತು ಮಕ್ಕಳೊಂದಿಗೆ ಹೇಗೆ ವರ್ತಿಸಬೇಕೆಂಬುದರ ಬಗ್ಗೆ ಬಹಳ ತಪ್ಪು ಗ್ರಹಿಕೆಗಳನ್ನು ಬಹಳ ಜನರು ಹೊಂದಿದ್ದಾರೆ. ಅವರು ನೇರವಾದ ಮಾರ್ಗವನ್ನು ಬಿಟ್ಟಿದ್ದಾರೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ:

**ವ ಆಶಿರೂ ಹುನ್ನ ಬಿಲ್ ಮಅ್‌ರೂಫಿ** – "ನೀವು ಅವರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಿರಿ." (4:20). ಆದರೆ ಇಂದಿನ ಜನರ ನಡೆವಳಿಕೆ ಇದಕ್ಕೆ ವಿರುದ್ಧವಾಗಿದೆ.

**ವಿರುದ್ಧ ಮನೋಭಾವ:** ಇದಕ್ಕೆ ಸಂಬಂಧಿಸಿ ಹೇಳುವುದಾದರೆ, ಪುರುಷರು ಎರಡು ಗುಂಪುಗಳಿಗೆ ಸೇರಿದ್ದಾರೆ. ಒಂದು ಗುಂಪಿನ ಪುರುಷರು ಮಹಿಳೆಯರಿಗೆ ಅವರಿಚ್ಛಿಸುವ ರೀತಿಯಲ್ಲಿ ವರ್ತಿಸಲು ಅನುಮತಿ ನೀಡಿದ್ದಾರೆ. ಅಂತಹ ಮಹಿಳೆಯರು ಧರ್ಮದ ಬಗ್ಗೆ ಯಾವ ಶ್ರದ್ಧೆಯೂ ಇಲ್ಲದವರಾಗಿದ್ದಾರೆ ಮತ್ತು ಇಸ್ಲಾಮೇತರ ಸ್ವಭಾವ ಗುಣಗಳನ್ನು ಹೊಂದಿರುತ್ತಾರೆ. ಅವರನ್ನು ಅದರ ಬಗ್ಗೆ ಪ್ರಶ್ನಿಸುವವರು ಯಾರೂ ಇರುವುದಿಲ್ಲ. ಇನ್ನೊಂದು ಗುಂಪಿನ ಪುರುಷರು ತಮ್ಮ ಮಹಿಳೆಯರೊಂದಿಗೆ ಕ್ರೂರವಾಗಿಯೂ ಒರಟಾಗಿಯೂ ವರ್ತಿಸುತ್ತಾರೆ. ಅಂತಹ ಜನರು ಮಹಿಳೆಯರನ್ನು ಮೃಗಗಳಿಗಿಂತ ಕೀಳಾಗಿ ಗಣಿಸುತ್ತಾರೆ. ಗುಲಾಮರಿಗಿಂತಲೂ ಮೃಗಗಳಿಗಿಂತಲೂ ಕೆಟ್ಟದಾಗಿ ಅವರೊಂದಿಗೆ ವರ್ತಿಸಲಾಗುತ್ತಿದೆ. ಅವರನ್ನು ಎಷ್ಟು ಕ್ರೂರವಾಗಿ ಹೊಡೆಯುತ್ತಾರೆಂದರೆ ಅವರು ನಿರ್ಜೀವ ವಸ್ತುಗಳೋ ಎಂಬಂತೆ. ಮಹಿಳೆಯರೊಂದಿಗೆ ಎಷ್ಟು ಕ್ರೂರವಾಗಿ ವರ್ತಿಸುತ್ತಾರೆಂದರೆ ಪಂಜಾಬಿನಲ್ಲಿ ಒಂದು ನಾಣ್ಣುಡಿ ಹೀಗಿದೆ: ಪತ್ನಿ ಒಂದು ಜೋಡಿ ಪಾದರಕ್ಷೆಯ ಹಾಗೆ; ಯಾವಾಗ ಬೇಕಾದರೂ ಎಸೆದು ಇನ್ನೊಂದು ಇಷ್ಟವಿರುವಾಗ ಬದಲಾಯಿಸಬಹುದಾಗಿದೆ. ಇಂತಹ ಮನೋಭಾವ ಅಪಾಯಕರವೂ ಇಸ್ಲಾಮಿಗೆ ವಿರುದ್ಧವೂ ಆಗಿದೆ.

**ಮಹಿಳೆಯರೊಂದಿಗೆ ಸಹಾನುಭೂತಿ:** ಹಝ್ರತ್ ಮುಹಮ್ಮದ್ ಪೈಗಂಬರ್(ಸ) ನಮಗೆ ಪರಿಪೂರ್ಣ ಜೀವಿತ ಮಾದರಿಯಾಗಿದ್ದಾರೆ. ಅವರು ಮಹಿಳೆಯರೊಂದಿಗೆ ಹೇಗೆ ವರ್ತಿಸಿದರೆಂದು ಅಧ್ಯಯನ ಮಾಡಿರಿ. ನನ್ನ ಅಭಿಪ್ರಾಯದಲ್ಲಿ ಓರ್ವ ಮಹಿಳೆಗೆ ವಿರುದ್ಧವಾಗಿ ವರ್ತಿಸುವವನು ಹೇಡಿಯಾಗಿದ್ದಾನೆ. ಅವನು ಪುರುಷನಲ್ಲ. ನೀವು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವಿತವನ್ನು ಅಧ್ಯಯನ ಮಾಡಿದರೆ, ಅವರು ಉನ್ನತ ಪದವಿ ಪಡೆದವರಾಗಿದ್ದರೂ ಅವರು ಒಬ್ಬ ವೃದ್ಧೆಯನ್ನು ಕಂಡರೂ ಸಹ ಆಕೆಯೊಂದಿಗೆ ಮಾತನಾಡಲು ನಿಲ್ಲುತ್ತಿದ್ದರಲ್ಲದೆ ಆಕೆ ಅನುಮತಿಸುವ ತನಕ ಅಲ್ಲಿಂದ ಮುಂದೆ ಹೋಗುತ್ತಿರಲಿಲ್ಲ. (ಮಲ್‌ಫೂಝಾತ್ ಭಾಗ 4 ಪುಟ 44).

ನೀವು ಮಹಿಳೆಯರನ್ನು ತಿರಸ್ಕಾರಾರ್ಹರೆಂದೂ ಮಹತ್ವಹೀನರೆಂದೂ ಭಾವಿಸಬೇಡಿರಿ. ನಮ್ಮ ಪರಿಪೂರ್ಣ ಮಾರ್ಗದರ್ಶಕ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳಿದರು: **ಖೈರುಕುಮ್ ಖೈರುಕುಮ್ ಲಿ ಅಹ್‌ಲಿಹೀ** – "ತನ್ನ ಪತ್ನಿಯೊಂದಿಗೆ ಉತ್ತಮವಾಗಿ ವರ್ತಿಸುವವನು ನಿಮ್ಮ ಪೈಕಿ ಉತ್ತಮನು."

ಒಬ್ಬನು ತನ್ನ ಪತ್ನಿಯೊಂದಿಗೆ ಉತ್ತಮವಾಗಿ ವರ್ತಿಸುವುದಿಲ್ಲವಾದರೆ ಅವನನ್ನು ಮುತ್ತಖೀ (ದೇವಭಯವುಳ್ಳವ) ಎಂದು ಹೇಳಲು ಹೇಗೆ ತಾನೆ ಸಾಧ್ಯ..... ಚಿಕ್ಕಪುಟ್ಟ ಕಾರಣಗಳಿಂದ ಪತ್ನಿಯ ಮೇಲೆ ಸಿಟ್ಟಾಗುವುದು ಮತ್ತು ಹೊಡೆಯುವುದು ಅಂಗೀಕಾರಾರ್ಹವಲ್ಲ. ಕೆಲವು ಸಾರಿ ಯಾವುದಾದರೂ ಚಿಕ್ಕಪುಟ್ಟ ವಿಷಯದ ಕಾರಣ ಕೋಪದಿಂದ ಪತ್ನಿಗೆ ಹೊಡೆದು ಆಕೆಯನ್ನು ಕೊಂದ ಘಟನೆಗಳು ಸಂಭವಿಸಿವೆ. ಇದೇ ಕಾರಣದಿಂದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದ್ದಾನೆ: **ವ ಆಶಿರೂ ಹುನ್ನ ಬಿಲ್ ಮಅ್‌ರೂಫಿ** – "ನೀವು ಅವರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಿರಿ. (4:20).

ಆದರೆ ಒಬ್ಬ ಮಹಿಳೆ ತಪ್ಪಾದ ರೀತಿಯಲ್ಲಿ ವರ್ತಿಸುವಾಗ ಎಚ್ಚರಿಕೆ ನೀಡುವುದು ನಿಸ್ಸಂಶಯವಾಗಿಯೂ ಆವಶ್ಯಕವಾಗಿದೆ. ಒಬ್ಬ ಪತಿ ತನ್ನ ಪತ್ನಿಗೆ ಮನವರಿಕೆ ಮಾಡಿಕೊಡಬೇಕು – ಇಸ್ಲಾಮ್ ಧರ್ಮದ ವಿಶ್ವಾಸಗಳಿಗೆ ವಿರುದ್ಧವಾದ ವರ್ತನೆಯನ್ನು ಸಹಿಸಲಾರೆನೆಂದು. ಆದರೆ ತನ್ನ ಪತ್ನಿಯಿಂದ ಯಾವುದಾದರೂ ತಪ್ಪು ಸಂಭವಿಸಿದರೆ ಅದನ್ನು ಕ್ಷಮಿಸಿಕೊಡದ ನಿರಂಕುಶ ಪ್ರಭು ಪತಿಯಾಗಬಾರದು.

ಒಂದು ಹದೀಸು ಹೀಗಿದೆ: ಅಲ್ಲಾಹನು ತನ್ನ ಹೊರತು ಬೇರೆ ಯಾರಿಗಾದರೂ ಸಾಷ್ಟಾಂಗ ಪ್ರಣಾಮ ಮಾಡುವುದಕ್ಕೆ ಅನುಮತಿ ನೀಡುತ್ತಿದ್ದರೆ ಅವನು ಪತ್ನಿಯೊಂದಿಗೆ ತನ್ನ ಪತಿಗೆ ಸಾಷ್ಟಾಂಗ ಪ್ರಣಾಮ ಮಾಡಲು ಆಜ್ಞಾಪಿಸುತ್ತಿದ್ದನು. ಆದುದರಿಂದ ಪತಿಯು ಸಂದರ್ಭಕ್ಕೆ ಅನುಸಾರವಾಗಿ ಪತ್ನಿಯೊಂದಿಗೆ ಬಿಗುವಾಗಿಯೂ ಮೃದುವಾಗಿಯೂ ವರ್ತಿಸಬೇಕು.

(ಮಲ್‌ಫೂಝಾತ್ ಭಾಗ 3 ಪುಟ 147).

ಅಶ್ಲೀಲ ಕೃತ್ಯಗಳ ಹೊರತು ಪತ್ನಿಯ ಇತರ ಬಲಹೀನತೆಗಳನ್ನೂ ಸ್ತ್ರೀ ಸಹಜವಾದ ಸಿಡಿಮಿಡಿಗೊಳ್ಳುವ ಸ್ವಭಾವಗಳನ್ನೂ ಸಹಿಸಬೇಕು. ಪತ್ನಿಯೊಂದಿಗೆ ಜಗಳ ಮಾಡುವುದು ನಾಚಿಕೆಗೇಡಾಗಿದೆ. ಅಲ್ಲಾಹನು ಪುರುಷರಾದ ನಮ್ಮನ್ನು ಪರಿಪೂರ್ಣವಾಗಿ ಅನುಗ್ರಹಿಸಿದ್ದಾನೆ. ನಾವು ಮಹಿಳೆಯರೊಂದಿಗೆ ಅನುಕಂಪದಿಂದಲೂ ಕಾರುಣ್ಯದಿಂದಲೂ ವರ್ತಿಸಿ ಅಲ್ಲಾಹನ ಅನುಗ್ರಹಗಳಿಗೆ ಕೃತಜ್ಞರಾಗಬೇಕು.

(ಮಲ್‌ಫೂಝಾತ್ ಭಾಗ 1 ಪುಟ 307).

ಒಮ್ಮೆ ನಾನು ನನ್ನ ಪತ್ನಿಯೊಂದಿಗೆ ಉಚ್ಚಧ್ವನಿಯಲ್ಲಿ ಮಾತನಾಡಿದಾಗ ನಾನು ಯಾವುದೇ ಕಟುಶಬ್ದ ಬಳಸದಿದ್ದರೂ ನಾನು ನನ್ನ ಅತೃಪ್ತಿ ಆ ಮೂಲಕ ಪ್ರಕಟಿಸಿದೆ ಎಂದು ನನಗೆ ಭಾಸವಾಯಿತು. ಆ ಬಗ್ಗೆ ನಾನು ಅಲ್ಲಾಹನೊಂದಿಗೆ ಕ್ಷಮೆಯಾಚಿಸಿದೆ. ನಾನು ನಫ್ಲ್ ನಮಾಝ್‌ಗಳನ್ನು ವಿನಯಾನ್ವಿತನಾಗಿ ನಿರ್ವಹಿಸಿದೆ ಮತ್ತು ದಾನಧರ್ಮ ನೀಡಿದೆ. ನನ್ನ ಪತ್ನಿಯೊಂದಿಗೆ ನನ್ನ ಒರಟು ವರ್ತನೆ ನಾನು ತಿಳಿಯದೆ ಮಾಡಿದ ಯಾವುದೋ ಅನುಸರಣೆಗೇಡಿನ ಕಾರಣದಿಂದ ಎಂದು ನಾನು ಭಾವಿಸಿದೆ. (ಮಲ್‌ಫೂಝಾತ್ ಭಾಗ 2 ಪುಟ 2).

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಮೌಲವಿ ಅಬ್ದುಲ್ ಕರೀಮ್ ಸಾಹಿಬ್ ತನ್ನ ಪತ್ನಿಯೊಂದಿಗೆ ಕಟುವಾಗಿ ವರ್ತಿಸಿದುದಕ್ಕೆ ಸಂಬಂಧಿಸಿ ಅಲ್ಲಾಹನಿಂದ ದೊರೆತ ಇಲ್‌ಹಾಮ್ (ದಿವ್ಯಸಂದೇಶ): "ಅಂತಹ ವರ್ತನೆ ಅನುಚಿತವಾಗಿದೆ. ಮುಸ್ಲಿಮರ ನಾಯಕ ಅಬ್ದುಲ್ ಕರೀಮ್‌ನನ್ನು ಅದರಿಂದ ವಿಮುಖನನ್ನಾಗಿ ಮಾಡಬೇಕು." ಈ ಇಲ್‌ಹಾಮ್ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಬರೆದರು: ಈ ಇಲ್‌ಹಾಮ್‌ನಲ್ಲಿ ನಮ್ಮ ಜಮಾಅತಿನ ಎಲ್ಲರಿಗೂ ಮಾರ್ಗದರ್ಶನವಿದೆ. ಎಲ್ಲರೂ ತಮ್ಮ ಪತ್ನಿಯರನ್ನು ಕರುಣೆಯಿಂದಲೂ ಗೌರವದಿಂದಲೂ ಕಾಣಬೇಕು. ನಿಮ್ಮ ಪತ್ನಿಯರು ನಿಮ್ಮ ಗುಲಾಮರಲ್ಲ. ಮದುವೆ ಪತಿ ಪತ್ನಿಯರ ಮಧ್ಯೆ ಮಾಡಲಾಗುವ ಒಂದು ಒಪ್ಪಂದವಾಗಿದೆ. ಆದುದರಿಂದ ಈ ಒಪ್ಪಂದವನ್ನು ಮುರಿಯಬೇಡಿರಿ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿರುವನು: **ವ ಆಶಿರೂ ಹುನ್ನ ಬಿಲ್ ಮಅ್‌ರೂಫಿ** – ನೀವು ಅವರೊಂದಿಗೆ ಉತ್ತಮವಾಗಿ ವರ್ತಿಸಿರಿ. (4:20).

ಆದುದರಿಂದ ಪತ್ನಿಯರೊಂದಿಗೆ ನ್ಯಾಯಬದ್ಧವಾಗಿಯೂ ಕರುಣೆಯಿಂದಲೂ ವರ್ತಿಸಬೇಕು. ಒಂದು ಹದೀಸಿನಲ್ಲಿ ಹೀಗೆ ಹೇಳಲಾಗಿದೆ: **ಖೈರುಕುಮ್ ಖೈರುಕುಮ್ ಲಿಅಹ್‌ಲಿಹೀ** – ತನ್ನ ಪತ್ನಿಯೊಂದಿಗೆ ಉತ್ತಮವಾಗಿ ವರ್ತಿಸುವವನು ನಿಮ್ಮ ಪೈಕಿ ಉತ್ತಮನು.

ಆದುದರಿಂದ ನೀವು ಆಧ್ಯಾತ್ಮಿಕವಾಗಿಯೂ ಶಾರೀರಿಕವಾಗಿಯೂ ನಿಮ್ಮ ಪತ್ನಿಯರೊಂದಿಗೆ ಉತ್ತಮವಾಗಿ ವರ್ತಿಸಿರಿ. ಅವರಿಗೋಸ್ಕರ ಪ್ರಾರ್ಥಿಸಿರಿ ಮತ್ತು ವಿವಾಹ ವಿಚ್ಛೇದನೆಯನ್ನು ಮಾಡಬೇಡಿರಿ. ವಿವಾಹ ವಿಚ್ಛೇದನೆ ಮಾಡಲು ತ್ವರಿತವಾಗಿ ಪ್ರಯತ್ನಿಸುವವನು ಅಲ್ಲಾಹನ ದೃಷ್ಟಿಯಲ್ಲಿ ಪಾಪಿಯಾಗಿದ್ದಾನೆ. ಅಲ್ಲಾಹನು ಒಟ್ಟಿಗೆ ಸೇರಿಸಿದುದನ್ನು ಒಂದು ಕೊಳಕು ಮಡಿಕೆಯ ಹಾಗೆ ಒಡೆದು ಹಾಕಬೇಡಿರಿ.
(ತುಹ್‌ಫಯೆ ಗೋಲ್ಡವಿಯ – ರೂಹಾನೀ ಖಝಾಇನ್ ಸಂಪುಟ 17 ಪುಟ 75).

**ವಿವಾಹ ವಿಚ್ಛೇದನೆ ಮಾಡಲು ಪುರುಷನಿಗಿರುವ ಹಕ್ಕು**

ಒಬ್ಬರು ಹೀಗೆ ಆಕ್ಷೇಪಿಸಿದ್ದಾರೆ. ವಿವಾಹ ವಿಚ್ಛೇದನೆ ಮಾಡುವುದನ್ನು ಪವಿತ್ರ ಖುರ್‌ಆನ್ ಪುರುಷನ ಇಚ್ಛೆಗೆ ಬಿಟ್ಟದ್ದು ಏಕೆ? ಅವರು ಹೀಗೆ ಹೇಳಲು ಇಚ್ಛಿಸುತ್ತಾರೆಂದು ತೋರುತ್ತದೆ: ಪುರುಷರು ಮತ್ತು ಸ್ತ್ರೀಯರು ಸಮಾನವಾಗಿರುವ ಕಾರಣ ವಿವಾಹ ವಿಚ್ಛೇದನೆ ಮಾಡುವ ಹಕ್ಕನ್ನು ಪುರುಷನಿಗೆ ಮಾತ್ರ ನೀಡಿದುದು ಸರಿಯಲ್ಲ. ಇದಕ್ಕೆ ಉತ್ತರವೇನೆಂದರೆ ಪುರುಷರು ಮತ್ತು ಸ್ತ್ರೀಯರು ಸಮಾನರಲ್ಲ. ಪುರುಷನು ಸ್ತ್ರೀಗಿಂತ ಶಾರೀರಿಕವಾಗಿಯೂ ಬುದ್ಧಿಗೆ ಸಂಬಂಧಿಸಿಯೂ ಶ್ರೇಷ್ಠತೆ ಹೊಂದಿದ್ದಾನೆ ಎಂಬುದು ಸಾರ್ವತ್ರಿಕವಾದ ಅನುಭವವಾಗಿದೆ. ಕೆಲವು ಅಪವಾದವಿರಬಹುದಾದರೂ ಅಪವಾದಗಳು ನಿಯಮವಾಗಲಾರವು. ನ್ಯಾಯ ಆವಶ್ಯಪಡುವುದೇನೆಂದರೆ, ಪತಿ ಮತ್ತು ಪತ್ನಿ ಬೇರ್ಪಡಲು ಇಚ್ಛಿಸುವರಾದರೆ ಅದನ್ನು ತೀರ್ಮಾನಿಸಬೇಕಾದುದು ಪತಿ. ಆದರೆ ನನ್ನನ್ನು ಆಶ್ಚರ್ಯಭರಿತನನ್ನಾಗಿ ಮಾಡಿದುದು ಈ ಆಕ್ಷೇಪ ಮಾಡಿದುದು ಒಬ್ಬ ಆರ್ಯಾ ಸಮಾಜದವನು ಎಂಬುದಾಗಿದೆ. ಆರ್ಯಾಸಮಾಜದವರ ನಂಬಿಕೆ ಪ್ರಕಾರ ಪುರುಷನ ಸ್ಥಾನ ಸ್ತ್ರೀಯ ಸ್ಥಾನಕ್ಕಿಂತ ಎಷ್ಟೋ ಮೇಲಿದೆ. ಒಬ್ಬನಿಗೆ ಪುರುಷ ಸಂತಾನವಿಲ್ಲದಿದ್ದರೆ ಮೋಕ್ಷ ದೊರಕಲಾರದು ಎಂದು ಸಹ ಅವರ ನಂಬಿಕೆಯಾಗಿದೆ. ಆರ್ಯಾಸಮಾಜದ ಒಬ್ಬನಿಗೆ ನಲ್ವತ್ತು ಅಥವಾ ನೂರು ಹೆಣ್ಣು ಮಕ್ಕಳಿದ್ದರೂ ಅವನು ತನಗೆ ಮೋಕ್ಷ ಸಿಗಲಿಕ್ಕೋಸ್ಕರ ಒಬ್ಬ ಪುತ್ರನನ್ನು ಆಶಿಸುತ್ತಾನೆ. ಅವನ ಧರ್ಮದ ಪ್ರಕಾರ ನೂರು ಹೆಣ್ಣು ಮಕ್ಕಳು ಒಬ್ಬ ಪುತ್ರನಿಗೆ ಸಮಾನವಾಗಲಾರರು..... ಮನು ಧರ್ಮಶಾಸ್ತ್ರದಲ್ಲಿ ಹೀಗೆ ಬರೆದಿದೆ: ಒಬ್ಬ ಪತ್ನಿ ತನ್ನ ಪತಿಗೆ ವಿಷ ನೀಡಲು ಪ್ರಯತ್ನಿಸಿದರೆ ಅಥವಾ ಬೇರೆ ನ್ಯಾಯವಾದ ಕಾರಣದಿಂದ ಪತಿಗೆ ತನ್ನ ಪತ್ನಿಯನ್ನು ವಿಚ್ಛೇದಿಸುವ ಅಧಿಕಾರವಿದೆ. ಸಭ್ಯ ಹಿಂದುಗಳು ಹೀಗೆಯೇ ಮಾಡುತ್ತಾರೆ. ತಮ್ಮ ಪತ್ನಿ ಚಾರಿತ್ರ್ಯ ಹೀನಳಾದರೆ ಅಥವಾ ವ್ಯಭಿಚಾರಿಣಿಯಾದರೆ ಪತ್ನಿಯರನ್ನು ವಿಚ್ಛೇದಿಸುತ್ತಾರೆ. ನ್ಯಾಯವಾದ ಕಾರಣವಿದ್ದರೆ ಪತಿ ಪತ್ನಿಗೆ ವಿವಾಹ ವಿಚ್ಛೇದನೆ ಮಾಡಬಹುದೆಂದು ಮಾನವ ಪ್ರಕೃತಿ ಲೋಕದಲ್ಲೆಲ್ಲ ಅಂಗೀಕರಿಸುತ್ತದೆ. ತನ್ನ ಪತ್ನಿಗೆ ಎಲ್ಲ ವಿಧ ಅನುಕೂಲತೆಗಳನ್ನು ಒದಗಿಸಿ ಕೊಡುವುದು ಪತಿಯ ಹೊಣೆಗಾರಿಕೆ ಎಂದು ಇಸ್ಲಾಮ್ ಉಪದೇಶಿಸಿದೆ. ಪವಿತ್ರ ಖುರ್‌ಆನ್‌ನಲ್ಲಿ ಸರ್ವಶಕ್ತನಾದ ಅಲ್ಲಾಹನು ಹೇಳಿದ್ದಾನೆ: **ವ ಅಲಲ್ ಮೌಲೂದಿ ಲಹೂ ರಿಝ್‌ಖುಹುನ್ನ ವ ಕಿಸ್‌ವತುಹುನ್ನ** – "ಅವರಿಗೆ (ಮೊಲೆಯುಣ್ಣಿಸುವ ತಾಯಂದಿರಿಗೆ) ಆಹಾರ ಮತ್ತು ಉಡುಗೆ ತೊಡುಗೆ ನೀಡಬೇಕಾದುದು ಆ ಮಗುವಿನ ತಂದೆಯ ಹೊಣೆಯಾಗಿದೆ." (2:234).

ಇದು ಸ್ಪಷ್ಟಪಡಿಸುವುದೇನೆಂದರೆ, ಪುರುಷನು ತನ್ನ ಪತ್ನಿಯ ರಕ್ಷಕನೆಂದು ಮತ್ತು ಆಕೆಯ ಕ್ಷೇಮದ ಹೊಣೆಗಾರಿಕೆಯುಳ್ಳವನೆಂದು. ಪತ್ನಿಗೆ ಪತಿ ಯಜಮಾನನೂ ಅನುಕೂಲತೆಗಳನ್ನು ಒದಗಿಸುವವನೂ ಆಗಿದ್ದಾನೆ. ಪುರುಷನು ಸ್ತ್ರೀಗಿಂತ ಬಲಿಷ್ಠವಾದ ಶಕ್ತಿಗಳಿಂದ ಅನುಗ್ರಹೀತನಾಗಿದ್ದಾನೆ. ಆದುದರಿಂದ ಅವನು ಭೂಮಿಯ ಸೃಷ್ಟಿಯ ಮೊದಲುಗೊಂಡು ಸ್ತ್ರೀಯ ಮೇಲೆ ಅಧಿಕಾರ ಚಲಾಯಿಸುತ್ತಿದ್ದಾನೆ. ಪುರುಷನಿಗೆ ನೀಡಲಾದ ಶ್ರೇಷ್ಠ ಶಕ್ತಿಸಾಮರ್ಥ್ಯಗಳು ಅದೇ ಪ್ರಮಾಣದಲ್ಲಿ ಸ್ತ್ರೀಗೆ ನೀಡಲಾಗಿಲ್ಲ. ಪವಿತ್ರ ಖುರ್‌ಆನ್ ಉಪದೇಶಿಸಿರುವುದೇನೆಂದರೆ, ಒಬ್ಬನು ತನ್ನ ಪತ್ನಿಗೆ ತನ್ನ ಪ್ರೀತಿಯನ್ನೂ ಕಾರುಣ್ಯವನ್ನೂ ಪ್ರಕಟಿಸಲು ಬಂಗಾರದ ಪರ್ವತವನ್ನೇ ನೀಡಿದರೂ ವಿವಾಹ ವಿಚ್ಛೇದನೆ ಸಂಭವಿಸಿದರೆ ಅದನ್ನು ಮರಳಿ ಪಡೆಯಬಾರದು. ಇದು ಇಸ್ಲಾಮ್ ಸ್ತ್ರೀಗೆ ನೀಡುವ ಗೌರವವನ್ನು ಸೂಚಿಸುತ್ತದೆ. ಪತಿ ಕೆಲವು ಸಂದರ್ಭಗಳಲ್ಲಿ ಪತ್ನಿಯರ ಸೇವಕರಂತೆ ವರ್ತಿಸುತ್ತಾರೆ. ಪವಿತ್ರ ಖುರ್‌ಆನ್ ಪುರುಷರೊಂದಿಗೆ ಹೀಗೆ ಹೇಳಿದೆ: **ವ ಆಶಿರೂಹುನ್ನ ಬಿಲ್ ಮಅ್‌ರೂಫಿ** – ನೀವು ನಿಮ್ಮ ಪತ್ನಿಯರೊಂದಿಗೆ ಹೇಗೆ ವರ್ತಿಸಬೇಕೆಂದರೆ ನೀವು ಅವರೊಂದಿಗೆ ಎಷ್ಟು ಮೃದುವಾಗಿಯೂ ಕಾರುಣ್ಯದಿಂದಲೂ ವರ್ತಿಸುತ್ತಾರೆಂದು ಪ್ರತಿಯೊಬ್ಬ ಬುದ್ಧಿಶಾಲಿ ತಿಳಿದುಕೊಳ್ಳುವ ರೀತಿಯಲ್ಲಿರಬೇಕು.

**ಮಹಿಳೆಯರಿಗೂ ವಿವಾಹ ವಿಚ್ಛೇದನೆಯ ಹಕ್ಕಿದೆ**

ಇಸ್ಲಾಮ್ ಧರ್ಮ ವಿವಾಹ ವಿಚ್ಛೇದನೆಯ ಹಕ್ಕನ್ನು ಸಂಪೂರ್ಣವಾಗಿ ಪುರುಷನ ಕೈಗೆ ನೀಡಿಲ್ಲ. ಸ್ತ್ರೀಯರೂ ವಿವಾಹ ವಿಚ್ಛೇದನೆಗೆ ಅದಕ್ಕೆ ಸಂಬಂಧಿತ ಅಧಿಕಾರಿಗಳ ಮೂಲಕ

ಆವಶ್ಯಪಡಬಹುದು. ಅಂತಹ ವಿವಾಹ ವಿಚ್ಛೇದನೆಯನ್ನು ಇಸ್ಲಾಮೀ ಶರೀಅತ್‌ನಲ್ಲಿ **"ಖುಲಾ"** ಎನ್ನುತ್ತಾರೆ. ಒಬ್ಬ ಪತಿ ಪತ್ನಿಯೊಂದಿಗೆ ಅನುಚಿತವಾಗಿ ವರ್ತಿಸುವನಾದರೆ, ಆಕೆಯನ್ನು ಅನ್ಯಾಯದಿಂದ ಹೊಡೆಯುವನಾದರೆ, ಅಥವಾ ಬೇರೆ ಕಾರಣದಿಂದ ಪತ್ನಿಗೆ ಅವನು ತಿರಸ್ಕಾರಾರ್ಹನಾಗಿದ್ದರೆ, ಅವನು ತನ್ನ ಪತ್ನಿಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸುವುದಿಲ್ಲವಾದರೆ, ತನ್ನ ಧರ್ಮ ಬದಲಾಯಿಸುವನಾದರೆ, ಅವನೊಂದಿಗೆ ಜೀವಿಸಲು ಅವನ ಅಯೋಗ್ಯತೆಯ ಕಾರಣದಿಂದ ಅಸಾಧ್ಯವಾಗುವುದಾದರೆ– ಇಂತಹ ಸನ್ನಿವೇಶದಲ್ಲಿ ಪತ್ನಿ ಅಥವಾ ಅವಳ ರಕ್ಷಕ ನ್ಯಾಯಾಧೀಶರ ಸಮ್ಮುಖದಲ್ಲಿ ದೂರು ನೀಡಬೇಕು. ನ್ಯಾಯಾಧೀಶ ದೂರನ್ನು ನ್ಯಾಯ ಸಮ್ಮತವೆಂದು ತೀರ್ಮಾನಿಸಿದರೆ ವಿವಾಹ ವಿಚ್ಛೇದನೆಯ ತೀರ್ಪು ನೀಡಬಹುದು. ನ್ಯಾಯಾಧೀಶ ಪತಿಯನ್ನು ಕರೆದು ಅವನ ಪತ್ನಿಯನ್ನು ಏಕೆ ಬೇರ್ಪಡಿಸಬಾರದು ಎಂದು ವಿಚಾರಿಸಬೇಕು.

ಸ್ತ್ರೀ ತನ್ನ ರಕ್ಷಕನಾದ ಪಿತ, ಸಹೋದರ ಅಥವಾ ಬೇರೆ ಪುರುಷ ಸಂಬಂಧಿಯ ಸಮ್ಮತಿಯಿಲ್ಲದೆ ವಿವಾಹವಾಗಲು ಇಸ್ಲಾಮ್ ಅನುಮತಿಸುವುದಿಲ್ಲ. ಅದೇ ರೀತಿ ಸ್ತ್ರೀ ತನ್ನ ಸ್ವಂತ ಇಚ್ಛೆ ಪ್ರಕಾರ ಏಕಪಕ್ಷೀಯವಾಗಿ ಪತಿಯಿಂದ ಬೇರೆಯಾಗಲು ಇಸ್ಲಾಮ್ ಅನುಮತಿಸುವುದಿಲ್ಲ. ಸ್ತ್ರೀಗೆ ಸಂಬಂಧಿಸಿ ಇಸ್ಲಾಮ್ ಹೆಚ್ಚು ಜಾಗರೂಕತೆ ವಹಿಸಿದೆ. ಆಕೆ ತನ್ನ ತಿಳಿಗೇಡಿತನದಿಂದ ತನಗೆ ಹಾನಿಯುಂಟುಮಾಡದ ಹಾಗೆ ಮಾಡಲು ಆಕೆ ನ್ಯಾಯಾಧೀಶನಿಗೆ ದೂರು ನೀಡಲು ಆಜ್ಞಾಪಿಸಿದೆ.
(ಚಶ್ಮಯೆ ಮಅ್‌ರಿಫತ್ – ರೂಹಾನೀ ಖಝಾಇನ್ ಸಂಪುಟ 23 ಪುಟ 286–289).

**ವಿವಾಹ ಮೂಲಕ ವಂಶವೃದ್ಧಿ**

ಆಕ್ಷೇಪಿಸುವವ ಹೀಗೆ ಹೇಳುತ್ತಾನೆ: ಪವಿತ್ರ ಖುರ್‌ಆನ್ ಪ್ರಕಾರ ಸ್ತ್ರೀಯರು ಭೋಗ ವಸ್ತುವಾಗಿದ್ದಾರೆ. ಅವರು ಹೂಳುವ ಹೊಲಗಳ ಹಾಗಿದ್ದಾರೆ.

ಆದರೆ ಈ ತಪ್ಪಾಗಿ ಯೋಚಿಸುವ ಆರ್ಯಾಸಮಾಜದವ ಸ್ವತಃ ಸುಳ್ಳು ಸೃಜಿಸಿ ಅದನ್ನು ಪವಿತ್ರ ಖುರ್‌ಆನ್‌ಗೆ ಅನ್ವಯಿಸಿ ಹೇಳುತ್ತಾನೆ. ಪವಿತ್ರ ಖುರ್‌ಆನ್ ಹೇಳುವುದು ಹೀಗೆ: **ನಿಸಾಉಕುಮ್ ಹರ್‌ಸುನ್ ಲ್ಲಕುಮ್ ಫಅ್‌ತೂ ಹರ್‌ಸಕುಮ್ ಅನ್ನಾ ಶಿಅ್‌ತುಮ್** – "ನಿಮ್ಮ ಪತ್ನಿಯಂದಿರು ನಿಮಗೆ (ಒಂದು ರೀತಿಯ) ಕೃಷಿ ಸ್ಥಳವಾಗಿದ್ದಾರೆ. ಆದ್ದರಿಂದ ನೀವು ಇಚ್ಛಿಸಿದಂತೆ ನಿಮ್ಮ ಕೃಷಿ ಸ್ಥಳದೆಡೆಗೆ ಹೋಗಿರಿ. (2:224).

ಕೃಷಿ ಸ್ಥಳ ಎಂದರೆ ಬೆಳೆ ಬೆಳೆಯುವ ಸ್ಥಳ. ಆದುದರಿಂದ ವಂಶ ವೃದ್ಧಿಯೇ ಅದರ ಉದ್ದೇಶವಾಗಿದೆ. ಆದುದರಿಂದ ಕೃಷಿ ಸ್ಥಳದ ಪರಿಪಾಲನೆ ಆವಶ್ಯಕವಾಗಿದೆ. ಮಕ್ಕಳ ಜನನವನ್ನು ತಡೆಗಟ್ಟುವ ಕ್ರಮಗಳನ್ನು ಕೈಗೊಳ್ಳಬಾರದು.....

ಪತ್ನಿ ರೋಗಿಯಾಗಿದ್ದರೆ ಅಥವಾ ಗರ್ಭವತಿಯಾಗುವುದು ಪ್ರಾಣಕ್ಕೆ ಅಪಾಯಕರವಾಗಿದ್ದರೆ ಅಥವಾ ಬೇರೆ ಯಾವುದಾದರೂ ಯೋಗ್ಯ ಕಾರಣಗಳಿದ್ದರೆ ಗರ್ಭಧಾರಣೆ ತಡೆಯಬಹುದು. ಅನ್ಯಥಾ ಮಕ್ಕಳ ಜನನವನ್ನು ತಡೆಯುವುದು ಶರೀಅತ್ ನಿಷಿದ್ಧ ಗೊಳಿಸಿದೆ.

ಸ್ತ್ರೀಯನ್ನು ಕೃಷಿ ಸ್ಥಳ ಎಂದು ಹೇಳಿರುವುದನ್ನು ಪ್ರತಿಯೊಬ್ಬ ವಿವೇಕಿಯಾದವನು ಅಂಗೀಕರಿಸುವನು. ಏಕೆಂದರೆ ಮಾತೆಯಂದಿರಿಂದಲೇ ಮಕ್ಕಳು ಜನಿಸುತ್ತಾರೆ. ವಿವಾಹದ ಒಂದು ಉದ್ದೇಶ ಸಾತ್ವಿಕರಾದ ಮಕ್ಕಳು ಜನಿಸಿ ದೇವನ ಸ್ಮರಣೆ ಮಾಡಲಿ ಎಂದಾಗಿದೆ. ಇನ್ನೊಂದು ಉದ್ದೇಶ ಪತಿ ಮತ್ತು ಪತ್ನಿ ತಮ್ಮನ್ನು ದುರ್ನೋಟಗಳಿಂದ ರಕ್ಷಿಸಿಕೊಳ್ಳಲಿ ಎಂದಾಗಿದೆ. ಮೂರನೆಯ ಉದ್ದೇಶ ಅವರು ಪರಸ್ಪರ ಹೊಂದಿಕೊಂಡು ಜೀವಿಸಿ ಏಕಾಂತ ವಾಸದ ದುಃಖದಿಂದ ಮುಕ್ತರಾಗಲಿ ಎಂದು. ಇವೆಲ್ಲ ಪವಿತ್ರ ಖುರ್‌ಆನ್‌ನಲ್ಲಿ ವಿಶದೀಕರಿಸಲ್ಪಟ್ಟಿವೆ. ನಾವು ಹೆಚ್ಚು ವಿವರಣೆ ನೀಡಬೇಕಾಗಿಲ್ಲ.
(ಚಶ್ಮಯೆ ಮಅ್‌ರಿಫತ್ – ರೂಹಾನೀ ಖಝಾಇನ್ ಸಂಪುಟ 23 ಪುಟ 292–293). ♦


# READ AHMADIYYA PERIODICALS

**THE REVIEW OF RELIGIONS**
English Monthly
Annual Subcription : Rs. 550/-
Contact : The Editor
The Review of Religions
Mohalla Ahmadiyya
QADIAN - 143516 (Punjab)
Telephone : +91 1872 500970

**BADAR** - Urdu Weekly
Annual Subcription : Rs. 550/-
Contact : The Manager
The Badar Weekly
Mohalla Ahmadiyya.
QADIAN - 143516 (Punjab)
Telephone : (0091) 94170 20616

# ಶಿಲುಬೆಗೇರಿಸಿದ ಘಟನೆಯ ವಾಸ್ತವಿಕ ನಿರೂಪಣೆ

♦ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಎಂ.ಎ.

ಹಝ್ರತ್ ಈಸಾ ಮಸೀಹರನ್ನು(ಅ) ಶಿಲುಬೆಗೇರಿಸಲಾಗಿತ್ತೆಂದೂ ಆದರೆ ಅವರು ಶಿಲುಬೆಯಲ್ಲಿ ಮೃತರಾಗಲಿಲ್ಲ ಎಂದೂ ನಾವು ಇದರ ಮೊದಲು ಬರೆದಿದ್ದೇವೆ. ಆದರೆ ನಮ್ಮನ್ನು ವಿರೋಧಿಸುವ ಮತಪಂಡಿತರ ನಂಬಿಕೆ ಹೀಗಿದೆ: ಹಝ್ರತ್ ಈಸಾ ಮಸೀಹರನ್ನು(ಅ) ಶಿಲುಬೆಗೇರಿಸಲೇ ಇಲ್ಲ. ಅವರ ಬದಲಿಗೆ ಬೇರೆ ಒಬ್ಬನನ್ನು ಶಿಲುಬೆಗೇರಿಸಲಾಗಿತ್ತು. ಆ ವ್ಯಕ್ತಿ ಹಝ್ರತ್ ಈಸಾ ಮಸೀಹರನ್ನು(ಅ) ಸಂಪೂರ್ಣವಾಗಿ ಹೋಲುತ್ತಿದ್ದನು. ಹಝ್ರತ್ ಈಸಾ ಮಸೀಹರನ್ನು(ಅ) ಅಲ್ಲಾಹನು ಆಕಾಶಕ್ಕೆ ಎತ್ತಿದನು.

ಹಝ್ರತ್ ಈಸಾ ಮಸೀಹರ(ಅ) ಜೀವಿತ ಮತ್ತು ಮರಣಕ್ಕೆ ಈ ವಿಷಯದೊಂದಿಗೆ ಸಂಬಂಧವಿಲ್ಲ. ಹಝ್ರತ್ ಈಸಾ ಮಸೀಹ್(ಅ) ಶಿಲುಬೇರಿಸಲ್ಪಟ್ಟರೋ ಇಲ್ಲವೋ ಎಂಬುದರ ಬಗ್ಗೆ ನಮಗೇನೂ ಕೆಲಸವಿಲ್ಲ. ನಮ್ಮ ಮುಖ್ಯ ಚರ್ಚೆಯ ವಿಷಯ ಹಝ್ರತ್ ಈಸಾ ಮಸೀಹ್(ಅ) ಆಕಾಶಕ್ಕೇರಿಸಲ್ಪಟ್ಟರೋ ಇಲ್ಲವೋ ಎಂದು ಮಾತ್ರವಾಗಿದೆ. ಆದರೆ, ಕೆಲವು ಮತಪಂಡಿತರು ಈ ವಿಷಯವನ್ನು ಅನಾವಶ್ಯಕವಾಗಿ ಎತ್ತುತ್ತಿರುವುದರಿಂದ ಇದರ ಬಗ್ಗೆ ಸ್ವಲ್ಪ ವಿಶದೀಕರಿಸುವುದು ಉಪಕಾರಪ್ರದವಾಗದೆ ಇರಲಾರದು.

ವಾಸ್ತವಿಕ ವಿಷಯವೇನೆಂದರೆ, ಸಲೀಬ್ ಪದದ ಅರ್ಥವನ್ನು ಗ್ರಹಿಸುವುದರಲ್ಲಿ ಕೆಲವು ಮತಪಂಡಿತರು ಬಹಳ ತಪ್ಪು ಮಾಡಿದ್ದಾರೆ. ಸಲೀಬ್ ಎಂದರೆ ಶಿಲುಬೇರಿಸುವುದು ಎಂದು ಮಾತ್ರ ಅವರು ಗ್ರಹಿಸಿದ್ದಾರೆ. ಈ ಅರ್ಥ ಸರಿಯಲ್ಲ. ಅರಬಿ ನಿಘಂಟುಗಳಲ್ಲಿ ಹೀಗೆ ಬರೆದಿದೆ – **ಅಸ್ಸಲೀಬು : ಅಲ್ ಖಿತ್‌ಲತುಲ್ ಮಅ್‌ರೂಫತು** (ಲಿಸಾನುಲ್ ಅರಬ್ ಮತ್ತು ತಾಜುಲ್ ಉರೂಸ್ ನೋಡಿರಿ). ಸಲೀಬ್ ಎಂದರೆ ಶಿಲುಬೇರಿಸಿ ಕೊಲ್ಲುವುದು ಎಂದು ಅರ್ಥ. ಕೊಲ್ಲುವಿಕೆಯ ಒಂದು ವಿಶಿಷ್ಟ ವಿಧಾನ ಎಂದು ಅದರ ಅರ್ಥ. ಸಲೀಬ್ ಎಂಬ ಪದದ ಮೂಲದಲ್ಲಿ ಕೊಲ್ಲುವುದು ಎಂಬ ಅರ್ಥವಿದೆ. ಸಲ್‌ಬ್ ಮತ್ತು ಸಲೀಬ್ ಎಂಬ ಪದಗಳ ಮೂಲ ಅರ್ಥ ಎಲುಬಿನ ಮಜ್ಜೆ ಎಂದಾಗಿದೆ. (ತಾಜುಲ್ ಉರೂಸ್, ಲಿಸಾನುಲ್ ಅರಬ್ ಮತ್ತು ಅಖ್‌ರಬುಲ್ ಮವಾರಿದ್ ನೋಡಿರಿ). ಆದುದರಿಂದ ಸಲೀಬ್ ಎಂದರೆ ಎಲುಬನ್ನು ಮುರಿದು ಅದರೊಳಗಿನ ಮಜ್ಜೆ ಹೊರಗೆ ಹರಿಸಿ ಕೊಲ್ಲುವುದು. ಶಿಲುಬೆಗೇರಿಸಲ್ಪಟ್ಟವರ ಮರಣ ಹೀಗೆಯೇ ಸಂಭವಿಸುತ್ತದೆ. ಶಿಲುಬೆಗೇರಿಸಲ್ಪಟ್ಟವನ ಶರೀರವನ್ನು ಮೊಳೆಗಳ ಮೂಲಕ ಮರದ ಶಿಲುಬೆಗೆ ಜಡಿಯಲಾಗುತ್ತದೆ. ಅವನು ಹಸಿವೆ, ದಾಹ, ಬಳಲಿಕೆಗಳಿಗೆ ಈಡಾಗಿ ಮೃತನಾಗುತ್ತಾನೆ. ಅವನ ದೇಹ ಕೊಳೆತು ಹೋಗುತ್ತದೆ.

ಆದುದರಿಂದ ಮಾ ಸಲಬುಹೂ (ಅವನನ್ನು ಶಿಲುಬೆಗೇರಿಸಿ ಕೊಲ್ಲಲಿಲ್ಲ) ಎಂಬ ಪದಕ್ಕೆ ಶಿಲುಬೆಗೆ ಏರಿಸಿಯೇ ಇಲ್ಲ ಎಂದು ಹೇಳುವುದು ಸಂಪೂರ್ಣವಾಗಿ ತಪ್ಪಾಗಿದೆ. ಅದರ ಅರ್ಥ ಶಿಲುಬೆಗೇರಿಸಿ ಕೊಲ್ಲಲಿಲ್ಲ ಎಂದಾಗಿದೆ. ನಮ್ಮ ವಿರೋಧಿಗಳು ಹೀಗೆ ಕೇಳುತ್ತಾರೆ: ನೀವು ಹೇಳುವ ಅರ್ಥ ಸರಿಯಾಗಿದ್ದರೆ ಈ ವಚನದಲ್ಲಿ **ವಮಾ ಖತಲೂಹು** (ಅವರನ್ನು ಕೊಲ್ಲಲಿಲ್ಲ) ಎಂದು ಸಹ ಹೇಳಿದುದು ಏಕೆ? **ಮಾ ಸಲಬೂಹು** (ಅವರನ್ನು ಶಿಲುಬೆಗೇರಿಸಿ ಕೊಲ್ಲಲಿಲ್ಲ) ಎಂದು ಹೇಳಿದರೆ ಸಾಕಾಗಿರಲಿಲ್ಲವೇ?

ಆದರೆ ಅವರ ಈ ಪ್ರಶ್ನೆ ಚರಿತ್ರೆಯ ಬಗ್ಗೆ ಅಜ್ಞಾನದಿಂದ ಉದಿಸಿದುದಾಗಿದೆ. ಯಹೂದಿಯರು "ತಾವು ಹಝ್ರತ್ ಈಸಾ ಮಸೀಹರನ್ನು(ಅ) ಶಿಲುಬೆಗೇರಿಸಿ ಕೊಂದೆವು" ಎಂದು ಮಾತ್ರ ವಾದಿಸುತ್ತಾರೆಂದು ನಮ್ಮ ವಿರೋಧಿಗಳು ಭಾವಿಸುತ್ತಾರೆ. ಅದಕ್ಕೆ ಉತ್ತರವಾಗಿ ಅಲ್ಲಾಹನು, "ಯಹೂದಿಯರು ಈಸಾ ಮಸೀಹರನ್ನು ಖಂಡಿತವಾಗಿಯೂ ಕೊಂದಿಲ್ಲ. ಶಿಲುಬೆಗೆ ಸಹ ಏರಿಸಲಿಲ್ಲ" ಎಂದು ಹೇಳಿದನೆಂದೂ ನಮ್ಮ ವಿರೋಧಿಗಳು ಭಾವಿಸುತ್ತಾರೆ. ಆದರೆ ನಮ್ಮ ವಿರೋಧಿಗಳ ಈ ಭಾವನೆ ತಪ್ಪಾಗಿದೆ. ಯಹೂದಿಯರಲ್ಲಿ ಎರಡು ಗುಂಪುಗಳಿವೆ. ಒಂದು ಗುಂಪಿನ ಯಹೂದಿಯರು ವಾದಿಸುವುದು – ನಾವು ಈಸಾ ಮಸೀಹರನ್ನು ಕೊಂದು ಅನಂತರ ಅವರನ್ನು ಅಪಮಾನಿಸಲು ಶಿಲುಬೆಗೇರಿಸಿದೆವು ಎಂದಾಗಿದೆ. ಏಕೆಂದರೆ ಅವರ ಮಧ್ಯೆ ಎಂತಹ ರೂಢಿ ಇತ್ತೆಂದರೆ ಅಪರಾಧಿಯನ್ನು ಕೊಂದು ಅವನ ದೇಹವನ್ನು ಅನ್ಯರಿಗೆ ನೀತಿಪಾಠವಾಗಲಿಕ್ಕೋಸ್ಕರ ಎತ್ತರ ಸ್ಥಳದಲ್ಲಿ ನೇತಾಡಿಸಲಾಗುತ್ತಿತ್ತು. ಯಹೂದಿಯರ ಇನ್ನೊಂದು ಗುಂಪಿನ ಅಭಿಪ್ರಾಯ ಪ್ರಕಾರ ಹಝ್ರತ್ ಯೇಸು ಮಸೀಹರನ್ನು(ಅ) ಶಿಲುಬೆಗೇರಿಸಿ ಕೊಲ್ಲಲಾಯಿತು. ಶಿಲುಬೆಯಲ್ಲಿಯೇ ಅವರು ಮೃತರಾದರು ಎಂದಾಗಿದೆ. ಈ ಎರಡು ಅಭಿಪ್ರಾಯಗಳನ್ನು ರದ್ದುಗೊಳಿಸಿ ಅಲ್ಲಾಹನು ಹೇಳಿದನು: ಈಸಾ ಮಸೀಹರನ್ನು ಯಹೂದಿಗಳು ಕೊಲ್ಲಲೂ ಇಲ್ಲ; ಶಿಲುಬೆಗೇರಿಸಿ ಸಹ ಕೊಲ್ಲಲಿಲ್ಲ.

ಪವಿತ್ರ ಖುರ್‌ಆನ್‌ನಲ್ಲಿ ಯಹೂದಿಯರ ಎರಡು ಗುಂಪುಗಳ ಅಭಿಪ್ರಾಯವನ್ನು ಒಟ್ಟಿಗೆ ಹೇಳುವಾಗ ಅಲ್ಲಿ ಖತ್‌ಲ್ (ಕೊಲೆ) ಎಂಬ ಶಬ್ದ ಮಾತ್ರ ಉಪಯೋಗಿಸಲಾಗಿದೆ. ಏಕೆಂದರೆ ಖತ್‌ಲ್ ಎಂದರೆ ಯಾವುದಾದರೂ ರೀತಿಯಲ್ಲಿ ಕೊಲ್ಲುವುದು ಎಂದು ಅರ್ಥ. ಖಡ್ಗ ಮೊದಲಾದುವುಗಳ ಮೂಲಕ ಕೊಲ್ಲುವುದನ್ನು ಇದು ಸೂಚಿಸುತ್ತದೆ. (ತಾಜುಲ್ ಉರೂಸ್ ಮತ್ತು ಲಿಸಾನುಲ್ ಅರಬ್ ನೋಡಿರಿ). ಯಹೂದಿಯರ ವಾದವನ್ನು ಹೇಳುವಾಗ ಖತ್‌ಲ್ ಎಂಬ ಪದವನ್ನು ಸಾಮಾನ್ಯವಾಗಿ ಎಲ್ಲ ರೀತಿಗಳಲ್ಲಿ ಕೊಲ್ಲುವುದನ್ನು ಸೂಚಿಸಲು ಬಳಸಲಾಗಿದೆ. ಆದರೆ ಯಹೂದಿಯರ ಆಕ್ಷೇಪಕ್ಕೆ ಉತ್ತರ ನೀಡುವಾಗ ವಿಶದೀಕರಣದ ಆವಶ್ಯಕತೆ ಇರುವುದರಿಂದ ಖತ್‌ಲ್ (ಕೊಲೆ) ಜೊತೆಗೆ ಸಲಬ್ ಶಬ್ದ ಇರಿಸಿ ಖತ್‌ಲ್ ಶಬ್ದವನ್ನು ಅದರ ವಿಶಿಷ್ಟ ಅರ್ಥಗಳಲ್ಲಿ ಸೀಮಿತಗೊಳಿಸಿ ಯಹೂದಿಯರ ಎರಡು ರೀತಿಯ ವಾದಗಳನ್ನೂ ರದ್ದುಗೊಳಿಸಲಾಗಿದೆ.

ಪವಿತ್ರ ಖುರ್‌ಆನಿನ ವಚನ – **ಕಫಫ್‌ತು ಬನೀ ಇಸ್ರಾಈಲ ಅನ್‌ಕ** "ನಿನ್ನಿಂದ ಬನೀ ಇಸ್ರಾಈಲರನ್ನು ನಾನು ತಡೆದೆನು." (5:111) ಎಂದು ಪವಿತ್ರ ಖುರ್‌ಆನ್ ಹೇಳಿರುವುದರಿಂದ

ಯಹೂದಿಯರು ಹಝ್ರತ್ ಯೇಸು ಮಸೀಹರನ್ನು ಶಿಲುಬೆಗೇರಿಸಲು ಸಾಧ್ಯವಾಗಲಿಲ್ಲ ಎಂದು ಹೇಳುವುದು ಅತ್ಯಂತ ಬಲಹೀನವಾದ ಆಕ್ಷೇಪವಾಗಿದೆ. ಹೆಚ್ಚು ಯೋಚಿಸದ ಕಾರಣ ಹೀಗೆ ಆಕ್ಷೇಪಿಸಲಾಗುತ್ತಿದೆ.

ಈ ವಚನದ ಅರ್ಥ, ಅಲ್ಲಾಹನು ಯಹೂದಿಯರು ಹಝ್ರತ್ ಈಸಾ ಮಸೀಹರಿಗೆ(ಅ) ಕೆಡುಕನ್ನು ಉಂಟು ಮಾಡುವುದರಿಂದ ತಡೆದನು ಎಂದಾಗಿದೆ. ಯಹೂದಿಯರು ಹಝ್ರತ್ ಈಸಾ ಮಸೀಹರನ್ನು(ಅ) ಶಿಲುಬೆಗೇರಿಸಿ ಕೊಲ್ಲಲು ಉದ್ದೇಶಿಸಿದ್ದರು. ಅವರು ಹಾಗೆ ಮಾಡುವುದರಲ್ಲಿ ಪರಾಜಿತರಾದರು. ಆದರೆ ಯಹೂದಿಯರು ಹಝ್ರತ್ ಈಸಾ ಮಸೀಹರಿಗೆ(ಅ) ಯಾವುದೇ ಕಷ್ಟಕೊಡಲಿಲ್ಲ; ಅವರಿಗೆ ಹಾಗೆ ಮಾಡಲು ಸಾಧ್ಯವಾಗಲಿಲ್ಲ ಎಂದು ಅರ್ಥ ಹೇಳುವುದು ಅವಿವೇಕದ ಮಾತಾಗಿದೆ. ಇದಕ್ಕೆ ಬಳಸಿದ ಪದವಾಗಲಿ, ಚರಿತ್ರೆಯಾಗಲಿ ಸಾಕ್ಷ್ಯ ನೀಡುವುದಿಲ್ಲ. ಉದಾಹರಣೆಗೆ, ನಮ್ಮ ಪ್ರವಾದಿ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಸಹ ಅಲ್ಲಾಹನು ಹೇಳಿದ್ದನು : **ವಲ್ಲಾಹು ಯಅ್‌ಸಿಮುಕ ಮಿನನ್ನಾಸ್** – "ಅಲ್ಲಾಹನು ನಿನ್ನನ್ನು ಜನರಿಂದ ರಕ್ಷಿಸುವನು." (ಪವಿತ್ರ ಖುರ್‌ಆನ್ 5:68).

ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಶತ್ರುಗಳ ಕೆಡುಕುಗಳಿಂದ ರಕ್ಷಿಸುವುದಾಗಿ ಈ ವಚನದಲ್ಲಿ ಅಲ್ಲಾಹನು ವಾಗ್ದಾನ ನೀಡಿದ್ದನು. ಹೀಗಿದ್ದರೂ ಹಝ್ರತ್ ಪೈಗಂಬರರಿಗೆ(ಸ) ಎಷ್ಟು ಕಷ್ಟ ಶತ್ರುಗಳು ನೀಡಿದರೆಂದರೆ ಸ್ವತಃ ಹಝ್ರತ್ ಪೈಗಂಬರರು(ಸ) ಹೀಗೆ ಹೇಳಿದ್ದರು: "ಇಷ್ಟು ಹೆಚ್ಚು ಕಷ್ಟ ಬೇರೆ ಯಾವ ಪ್ರವಾದಿಗೂ ಶತ್ರುಗಳಿಂದ ತಲಪಿರಲಿಲ್ಲ."

ಹಝ್ರತ್ ಪೈಗಂಬರರ(ಸ) ಎರಡು ಹಲ್ಲುಗಳು ಒಂದು ಯುದ್ಧದ ಸಂದರ್ಭದಲ್ಲಿ ಮುರಿದು ಹೋಗಿದ್ದುವು. ತಾಯಿಫ್ ನಗರದಲ್ಲಿ ಮತ್ತು ಉಹುದ್ ಯುದ್ಧದ ಸಂದರ್ಭದಲ್ಲಿ ಅವರು ಗಾಯಗೊಂಡಿದ್ದರು. ಬೇರೆ ಅನೇಕ ರೀತಿಗಳಲ್ಲಿ ಅವರು ಕಷ್ಟಕ್ಕೀಡಾಗಿದ್ದರು. ಈ ಕಾರಣಗಳಿಂದ ಅಲ್ಲಾಹನ ವಾಗ್ದಾನ ಈಡೇರಲಿಲ್ಲ ಎಂದು ಹೇಳುವುದು ಸರಿಯೇ? ಖಂಡಿತವಾಗಿ ಸರಿಯಲ್ಲ. ಇದೇ ರೀತಿ ಹಝ್ರತ್ ಈಸಾ ಮಸೀಹ್(ಅ) ಬಗ್ಗೆ ಅಲ್ಲಾಹನು, "ಬನೀ ಇಸ್ರಾಈಲರನ್ನು ನಿನ್ನಿಂದ ತಡೆದೆನು ಎಂದು ಹೇಳಿದುದರ ಅರ್ಥ – ಯಹೂದಿಯರು ಹಝ್ರತ್ ಈಸಾ ಮಸೀಹರನ್ನು ಕೊಲ್ಲಲು ಉದ್ದೇಶಿಸಿದ್ದರು. ಆದರೆ ಅಲ್ಲಾಹನು ಅವರನ್ನು ಯಹೂದಿಯರ ಕೆಡುಕುಗಳಿಂದ ತಡೆದನು. ಯಹೂದಿಯರು ಹಝ್ರತ್ ಈಸಾ ಮಸೀಹರನ್ನು ಕೊಂದು ಅವರು ಶಾಪಗ್ರಸ್ತ ಮರಣಕ್ಕೆ ತುತ್ತಾಗಬೇಕೆಂದು ನಿರ್ಧರಿಸಿದ್ದರು. ಆ ನಿರ್ಧಾರ ಈಡೇರಲು ಸಾಧ್ಯವಾಗದಂತೆ ಅಲ್ಲಾಹನು ಮಾಡಿದನು. ಏಕೆಂದರೆ ಬೈಬಲ್ ಹಳೆ ಒಡಂಬಡಿಕೆಯಲ್ಲಿ ಸುಳ್ಳು ಪ್ರವಾದಿ ಕೊಲ್ಲಲ್ಪಡುವವನೆಂದೂ ಶಿಲುಬೆಗೇರಿಸಲ್ಪಟ್ಟು ಕೊಲ್ಲಲ್ಪಡುವವನು ಶಾಪಗ್ರಸ್ತನಾಗುವನು ಎಂದೂ ಬರೆಯಲಾಗಿದೆ.

ಹಝ್ರತ್ ಈಸಾ ಮಸೀಹರನ್ನು(ಅ) ನಿಶ್ಚಯವಾಗಿಯೂ ಶಿಲುಬೆಗೇರಿಸಲಾಗಿತ್ತು ಎಂದು ಯಹೂದಿಯರೂ ಕ್ರೈಸ್ತರೂ ಒಮ್ಮತದ ಸಾಕ್ಷ್ಯ ನೀಡುತ್ತಿದ್ದಾರೆ. ಇವೆರಡು ಜನಾಂಗಗಳು ಇದರ ಬಗ್ಗೆ ಮೂಲ ಸಾಕ್ಷ್ಯ ನೀಡಬಲ್ಲವರಾಗಿದ್ದಾರೆ. ಹಝ್ರತ್ ಈಸಾ ಮಸೀಹ್(ಅ) ಶಿಲುಬೆಯಲ್ಲಿ ಮೃತರಾಗಲಿಲ್ಲ ಎಂದು ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಸಾಕ್ಷ್ಯ ನೀಡುತ್ತದೆ. ಬೈಬಲಿನ ಸುವಾರ್ತೆಗಳನ್ನು ಗಾಢವಾಗಿ ಅಧ್ಯಯನ ಮಾಡಿದರೆ ಹಝ್ರತ್ ಈಸಾ ಮಸೀಹ್(ಅ) ಶಿಲುಬೆಯಲ್ಲಿ ಮೃತರಾಗಿಲ್ಲವೆಂದು ಸಾಬೀತಾಗುತ್ತದೆ. ಅದರ ಬಗ್ಗೆ ವಿಸ್ತಾರವಾದ ಮಾಹಿತಿ ನೀಡಲು ಈ ಚಿಕ್ಕ ಪುಸ್ತಕದಲ್ಲಿ ಸಾಧ್ಯವಿಲ್ಲ. ಸಂಕ್ಷಿಪ್ತವಾಗಿ ಇದರ ಬಗ್ಗೆ ಹೀಗೆ ಹೇಳಬಹುದು:

1. ಹಝ್ರತ್ ಈಸಾ ಮಸೀಹ್(ಅ) ಶಿಲುಬೆಯಲ್ಲಿ ಮೂರು-ನಾಲ್ಕು ಗಂಟೆಗಳ ಕಾಲ ಮಾತ್ರ ಇದ್ದರು. ಒಬ್ಬ ಆರೋಗ್ಯವಂತ ತರುಣನು ಇಷ್ಟು ಅಲ್ಪ ಕಾಲಾವಧಿಯೊಳಗೆ ಸಾಮಾನ್ಯ ಪರಿಸ್ಥಿತಿಗಳಲ್ಲಿ ಮೃತನಾಗಲು ಸಾಧ್ಯವಿಲ್ಲ.

2. ಶಿಲುಬೆಯಿಂದ ಇಳಿಸಿದಾಗ ಹಝ್ರತ್ ಈಸಾ ಮಸೀಹರ(ಅ) ಕಾಲುಗಳ ಎಲುಬುಗಳನ್ನು ಸಂಪ್ರದಾಯದ ಪ್ರಕಾರ ಮುರಿಯಬೇಕಾಗಿದ್ದರೂ ಮುರಿದು ಹಾಕಲಿಲ್ಲ. ಅದೇ ಸಂದರ್ಭದಲ್ಲಿ ಶಿಲುಬೆಗೇರಿಸಲ್ಪಟ್ಟ ಇಬ್ಬರು ಅಪರಾಧಿಗಳನ್ನು ಶಿಲುಬೆಯಿಂದ ಇಳಿಸಿದಾಗ ಅವರ ಕಾಲುಗಳ ಎಲುಬುಗಳನ್ನು ಮುರಿದು ಹಾಕಲಾಯಿತು.

3. ಆ ಸಮಯದಲ್ಲಿ ಅಂಧಕಾರ ಕವಿಯಿತು ಮತ್ತು ಭಯಾನಕ ಭೂಕಂಪ ಸಂಭವಿಸಿತು.

4. ರೋಮನ್ ನ್ಯಾಯಾಧೀಶ ಪಿಲಾತನ ಪತ್ನಿ ಕಂಡ ಸ್ವಪ್ನದಲ್ಲಿ ಈಸಾ ಮಸೀಹ್ ನಿರಪರಾಧಿ ಎಂದೂ ಅವರನ್ನು ಬಿಟ್ಟುಬಿಡಬೇಕೆಂದೂ ಸೂಚಿಸಲಾಗಿತ್ತು.

5. ಮುಂದಿನ ದಿನ ಸಬ್ಬತ್ ದಿನವಾದುದರಿಂದ ಸೂರ್ಯಾಸ್ತ ನಂತರ ಪ್ರಾರಂಭವಾಗುವ ದಿನದಲ್ಲಿ ಅಪರಾಧಿಗಳು ಶಿಲುಬೆಯಲ್ಲಿರುವುದು ಯಹೂದಿ ಧರ್ಮಶಾಸ್ತ್ರ ಪ್ರಕಾರ ನಿಷಿದ್ಧವಾಗಿತ್ತು.

6. ಹಝ್ರತ್ ಈಸಾ ಮಸೀಹರನ್ನು(ಅ) ಶಿಕ್ಷಿಸದೆ ಬಿಟ್ಟುಬಿಡಬೇಕೆಂದು ಪಿಲಾತನು ಇಚ್ಛಿಸಿದ್ದನು.

7. ಹಝ್ರತ್ ಈಸಾ ಮಸೀಹ್(ಅ) ದೈನ್ಯತೆಯಿಂದಲೂ ದುಃಖದಿಂದಲೂ "ಈ ಪಾತ್ರೆಯನ್ನು ನನ್ನಿಂದ ತೊಲಗಿಸು" ಎಂದು ದೇವನೊಂದಿಗೆ ಪ್ರಾರ್ಥಿಸಿದ್ದರು.

8. ಹಝ್ರತ್ ಈಸಾ ಮಸೀಹ್(ಅ) ಮೃತರಾದರೆಂಬ ಸಮಾಚಾರವನ್ನು ಆಲಿಸಿದಾಗ ಪಿಲಾತನು ಶಂಕಿಸಿದನು.

9. ಹಝ್ರತ್ ಈಸಾ ಮಸೀಹ್(ಅ) ತನ್ನನ್ನು ಯೋನಾ ಪ್ರವಾದಿಯೊಂದಿಗೆ ಹೋಲಿಸಿ ಹೇಳಿದುದು- ಯೋನಾ ಪ್ರವಾದಿ ಮೂರು ದಿನ ಮೀನಿನ ಹೊಟ್ಟೆಯಲ್ಲಿ ಜೀವಂತವಾಗಿಯೇ ಇದ್ದುಕೊಂಡು ಹೊರಗೆ ಬಂದುದಕ್ಕೆ ಹೋಲಿಕೆ ನೀಡಿದುದು.

10. ಹಝ್ರತ್ ಈಸಾ ಮಸೀಹರ(ಅ) ಸ್ನೇಹಿತರು ಅವರನ್ನು ರಕ್ಷಿಸಲು ಪ್ರಯತ್ನ ಮಾಡಿದುದು.

11. ಹಝ್ರತ್ ಈಸಾ ಮಸೀಹರನ್ನು(ಅ) ಶಿಲುಬೆಯಿಂದ ಇಳಿಸಿದಾಗ ಅವರ ದೇಹವನ್ನು ತಮ್ಮ ವಶಕ್ಕೆ ನೀಡಬೇಕೆಂದು ಸರಕಾರದೊಂದಿಗೆ ಅಪೇಕ್ಷಿಸಿ ಅದನ್ನು ಪಡೆದು ಗಾಳಿ ಸಂಚಾರ

ಇರುವ ಕೋಣೆಯ ಹಾಗಿರುವ ಶವ ಕುಠೀರದಲ್ಲಿ ಸ್ನೇಹಿತರು ಇರಿಸಿದುದು.

12. ಈಟಿಯಿಂದ ತಿವಿದಾಗ ಅವರ ಶರೀರದಿಂದ ರಕ್ತ ಹರಿದು ಬಂದದ್ದು.

13. ಹಝ್ರತ್ ಈಸಾ ಮಸೀಹರ(ಅ) ಬಗ್ಗೆ ರಹಸ್ಯ ಕಾಪಾಡಲು ಕಾವಲುಗಾರರಿಗೆ ಲಂಚ ನೀಡಿದುದು.

14. ಅವರು ಶವ ಕುಠೀರದಿಂದ ರಹಸ್ಯವಾಗಿ ಹೊರಗೆ ಹೋಗಿ ತನ್ನ ಶಿಷ್ಯರಲ್ಲಿ ಕೆಲವರನ್ನು ಭೇಟಿಯಾಗಿ ಅವರಿಗೆ ಗಾಯಗಳನ್ನು ತೋರಿಸಿದುದು ಮತ್ತು ಅತ್ತಿತ್ತ ನಡೆದಾಡಿದುದು.

15. ಹಝ್ರತ್ ಈಸಾ ಮಸೀಹರ(ಅ) ಗಾಯುಗಳಿಗೆ ಲೇಪಿಸಲಾದುದೆಂದು ಅನೇಕ ವೈದ್ಯ ಗ್ರಂಥಗಳಲ್ಲಿ ಪ್ರಸ್ತಾಪಿಸಲಾದ ಲೇಪನದ ವಿವರಣೆ.

16. ಹಝ್ರತ್ ಈಸಾ ಮಸೀಹರು(ಅ) "ನಾನು ಇಸ್ರಾಈಲ್ ಮನೆತನದ ಕಳೆದು ಹೋದ ಕುರಿಗಳಿಗೋಸ್ಕರ ಕಳುಹಿಸಲ್ಪಟ್ಟಿರುವೆನು" ಎಂದು ಹೇಳಿದುದು. ಆದುದರಿಂದ ಇಸ್ರಾಈಲ್ ಜನಾಂಗದ ಅನೇಕ ಗೋತ್ರಗಳು ವಾಸಿಸುತ್ತಿದ್ದ ಕಾಶ್ಮೀರ್ ಮತ್ತು ಅಫ್‌ಘಾನಿಸ್ತಾನಕ್ಕೆ ಅವರು ಹೋಗುವುದು ಆವಶ್ಯಕವಾಗಿತ್ತು.

ಮೇಲಿನ ವಿವರಣೆಗಳಿಂದ ಸಹ ತಿಳಿಯುವುದೇನೆಂದರೆ, ಹಝ್ರತ್ ಈಸಾ ಮಸೀಹರು(ಅ) ಶಿಲುಬೆಯಲ್ಲಿ ಮೃತರಾದರೆಂದು ಬೈಬಲಿನ ಸುವಾರ್ತೆಗಳ ಮೂಲಕ ಸಹ ಸಾಬೀತಾಗುವುದಿಲ್ಲ.

ವಾಸ್ತವಿಕ ವಿಷಯವೇನೆಂದರೆ, ಹಝ್ರತ್ ಈಸಾ ಮಸೀಹರನ್ನು(ಅ) ಶಿಲುಬೆಗೇರಿಸಿದಾಗ ಗಾಯಗಳ ಕಠಿಣ ನೋವಿನಿಂದಾಗಿ ಅವರು ಗಾಢವಾದ ಪ್ರಜ್ಞಾ ಶೂನ್ಯತೆಗೆ ಗುರಿಯಾಗಿದ್ದರು. ಅವರನ್ನು ಶಿಲುಬೆಯಿಂದ ಇಳಿಸಿದ ನಂತರ ಚೆನ್ನಾಗಿ ಶುಶ್ರೂಷೆ ನಡೆಸಿದಾಗ ಅವರು ಪುನಶ್ಚೇತನಗೊಂಡರು. ಅವರು ರಹಸ್ಯವಾಗಿ ತನ್ನ ದೇಶಬಿಟ್ಟು ಇಸ್ರಾಈಲ್ ಮನೆತನದ ಕಾಣದೆ ಹೋದ ಕುರಿಗಳನ್ನು ಹುಡುಕುತ್ತಾ ವಿದೇಶಗಳಿಗೆ ಸಂಚಾರ ಹೊರಟರು.

ಚರ್ಚಿಸುತ್ತಿರುವ ಪವಿತ್ರ ಖುರ್‌ಆನ್ ವಚನದಲ್ಲಿ **ಶುಬ್ಬಿಹಲಹುಮ್*** ಎಂಬ ಪದಗಳಿಗೆ ಅರ್ಥ ಹೇಳುತ್ತಾ ಬೇರೊಬ್ಬ ವ್ಯಕ್ತಿಗೆ ಹಝ್ರತ್ ಈಸಾ ಮಸೀಹರ(ಅ) ರೂಪ ನೀಡಲಾಯಿತೆಂದು ಹೇಳುವುದು ಸಂಪೂರ್ಣ ತಪ್ಪು ಮತ್ತು ಹಾಸ್ಯಾಸ್ಪದವಾದುದಾಗಿದೆ. ಒಂದನೆಯದಾಗಿ, ಒಬ್ಬನ ಬದಲಾಗಿ ಇನ್ನೊಬ್ಬ ನಿರಪರಾಧಿಯನ್ನು ಶಿಲುಬೆಗೇರಿಸುವುದು ಬಹಳ ದೊಡ್ಡ ದೌರ್ಜನ್ಯವಾಗಿದೆ. ಎರಡನೆಯದಾಗಿ, ಈ ಶಬ್ದಗಳಿಗೆ ಯಾವುದೇ ವ್ಯಾಕರಣ ನಿಯಮಗಳ ಪ್ರಕಾರ ಈ ರೀತಿ ಅರ್ಥ ಹೇಳಲಾಗದು. ಬೇರೊಬ್ಬನನ್ನು ಹಝ್ರತ್ ಈಸಾ ಮಸೀಹರ ಹಾಗೆ ಮಾಡಲಾಯಿತು ಎಂದು ಅರ್ಥ ಹೇಳಲು ಸಾಧ್ಯವಿಲ್ಲ. ಏಕೆಂದರೆ **'ಶುಬ್ಬಿಹ'** ಪದ ಭೂತಕಾಲವನ್ನು ಸೂಚಿಸುತ್ತದೆ. ಅದರ ಅರ್ಥ ಅವನನ್ನು ಆ ರೀತಿ ಮಾಡಲಾಯಿತು ಎಂದಾಗಿದೆ. ಈ ಅರ್ಥವನ್ನು ನಮ್ಮ ವಿರೋಧಿಗಳೂ ಅಂಗೀಕರಿಸುತ್ತಾರೆ. ಇಲ್ಲಿ ಪ್ರಶ್ನೆ ಉದಿಸುವುದು ಯಾರನ್ನು ಆ ರೀತಿ ಮಾಡಲಾಯಿತು? ಯಾರಿಗೆ ಸಮವಾಗಿ ಮಾಡಲಾಯಿತು? ಎಂದಾಗಿದೆ. ನಮ್ಮ ವಿರೋಧಿ ಮತ ಪಂಡಿತರು ಹೊರಗಿನ ಒಬ್ಬನನ್ನು ಅನಾವಶ್ಯಕವಾಗಿ ಮಧ್ಯಕ್ಕೆ ತರುತ್ತಾರೆ – ಅವನನ್ನು ಹಝ್ರತ್ ಈಸಾ ಮಸೀಹರ ಹಾಗೆ ಮಾಡಲಾಯಿತು ಎಂದು. ಆದರೆ ಯಾವುದೇ ಹೊರಗಿನ ವ್ಯಕ್ತಿಯ ಬಗ್ಗೆ ಈ ವಚನದಲ್ಲಿ ಅಥವಾ ಅವನ ಬಗ್ಗೆ ಅಲ್ಪಸ್ವಲ್ಪ ಪ್ರಸ್ತಾಪವೂ ಇಲ್ಲ. ಯಾರನ್ನು ಹೋಲಿಕೆ ಉಳ್ಳವನಾಗಿ ಮಾಡಲಾಯಿತು. ಯಾರ ಹೋಲಿಕೆಯನ್ನು ಮಾಡಲಾಯಿತು. ಇವೆರಡರ ಬಗ್ಗೆ ಈ ವಚನದಲ್ಲಿ ಅಥವಾ ಅದಕ್ಕೆ ಸಮೀಪ ಪ್ರಸ್ತಾಪವು ಇರಬೇಕಾಗಿತ್ತು. ಆದರೆ ಸ್ವತಃ ಏನನ್ನಾದರೂ ತನ್ನ ಕಡೆಯಿಂದ ಪವಿತ್ರ ಖುರ್‌ಆನಿನ ಒಳಗೆ ಸೇರಿಸಲು ಯಾರಿಗೂ ಅಧಿಕಾರವಿರುವುದಿಲ್ಲ. ಹೀಗೆ ಮಾಡುವುದು ಯಹೂದಿಯರು ಮಾಡಿದಂತಹ ಪ್ರಕ್ಷೇಪವಾಗುವುದು. ಈ ವಚನದಲ್ಲಿ ಹಝ್ರತ್ ಈಸಾ ಮಸೀಹರ(ಅ) ಬಗ್ಗೆ ಪ್ರಸ್ತಾಪಿಸಲಾಗಿದೆ. ಯಹೂದಿಯರು ಈಸಾ ಮಸೀಹರ ಬಗ್ಗೆ ಅವರು ಶಿಲುಬೆಗೇರಿಸಲ್ಪಟ್ಟು ಕೊಲ್ಲಲ್ಪಟ್ಟರೆಂದು ವಾದಿಸಿದ ಬಗ್ಗೆ ಪ್ರಸ್ತಾಪಿಸಲಾಗಿದೆ. ಈ ವಚನದಲ್ಲಿ ಕೇವಲ ಈಸಾ ಮಸೀಹರ ಬಗ್ಗೆ ಪ್ರಸ್ತಾಪಿಸಲಾಗಿದೆ. ಯಹೂದಿಯರು ವಾದಿಸಿದರು– ಹಝ್ರತ್ ಈಸಾ ಮಸೀಹ್ ಶಿಲುಬೆಗೇರಿಸಲ್ಪಟ್ಟು ಕೊಲ್ಲಲ್ಪಟ್ಟರೆಂದು. ಇವರಲ್ಲಿ ಎಂದರೆ ಹಝ್ರತ್ ಈಸಾ ಮಸೀಹ್ ಮತ್ತು ಯಹೂದಿಯರಲ್ಲಿ ಯಾರನ್ನಾದರೂ ಹೋಲಿಕೆ ಹೊಂದಿದವರನ್ನಾಗಿ ಮಾಡಲಾಯಿತು. ಅವರಲ್ಲಿ ಯಾರ ಹೋಲಿಕೆ ಯಾರು ಹೊಂದಿದರು? **ವಮಾ ಖತಲೂಹು ವಮಾ ಸಲಬೂಹು ವಲಾಕಿನ್ ಶುಬ್ಬಿಹಲಹುಮ್** ಎಂಬ ವಚನದ ಅರ್ಥ ಈಗ ಸುಲಭವಾಗಿ ತಿಳಿಯುತ್ತದೆ. ಯಹೂದಿಯರು ಹಝ್ರತ್ ಈಸಾ ಮಸೀಹರನ್ನು(ಅ) ಕೊಲ್ಲಲೂ ಇಲ್ಲ; ಶಿಲುಬೆಗೇರಿಸಿ ಹತ್ಯೆ ಮಾಡಲೂ ಇಲ್ಲ. ಆದರೆ ಹಝ್ರತ್ ಈಸಾ ಮಸೀಹ್ ಅವರ ದೃಷ್ಟಿಯಲ್ಲಿ ಕೊಲ್ಲಲ್ಪಟ್ಟವರಾಗಿ ಮತ್ತು ಶಿಲುಬೆಗೇರಿಸಿ ಹತ್ಯೆಗೊಳಪಟ್ಟವರಾಗಿ ಕಾಣಿಸಿದರು. ಇದೇ ವಿಷಯವನ್ನು ನಾವು ಇದರ ಮೊದಲು ವಿವರಿಸಿದ್ದೇವೆ. ಯಹೂದಿಯರಿಗೆ ಹಝ್ರತ್ ಈಸಾ ಮಸೀಹರಿಗೆ(ಅ) ಸಂಬಂಧಿಸಿ ತಪ್ಪು ಗ್ರಹಿಕೆ ಆಗಿದೆ. ಹಝ್ರತ್ ಈಸಾ ಮಸೀಹ್(ಅ) ಶಿಲುಬೆಯಲ್ಲಿ ಮೃತರಾದರೆಂದು ಯಹೂದಿಯರು ಭಾವಿಸಿದರು. ಆದರೆ ವಾಸ್ತವಿಕವಾಗಿ ಹಝ್ರತ್ ಈಸಾ ಮಸೀಹ್(ಅ) ಪ್ರಜ್ಞಾಶೂನ್ಯರಾಗಿದ್ದರು. ಅನಂತರ ಅವರು ಪ್ರಜ್ಞೆಗಳಿಸಿದರು. ಅವರಿಗೆ ಶುಶ್ರೂಷೆ ನಡೆಸಿದ ಕಾರಣ ಅವರು ಆರೋಗ್ಯವಂತರಾದರು. ಅಲ್ಲಾಹನು ಹಝ್ರತ್ ಈಸಾ ಮಸೀಹರನ್ನು(ಅ) ಯಹೂದಿಯರ ಕೆಡುಕುಗಳಿಂದ ರಕ್ಷಿಸಲು ಅವರನ್ನು ಶಿಲುಬೆಯಲ್ಲಿ ಮೃತರಾದ ಸ್ಥಿತಿಯಲ್ಲಿ ಕಾಣುವಂತೆ ಉಪಾಯ ಮಾಡಿದನು. ಅಲ್ಲಾಹನು ಹೀಗೆ ಸಹ ಹೇಳಿದ್ದಾನೆ: ಯಹೂದಿಯರು ಯೋಚಿಸುತ್ತಿದ್ದರೆ ಮತ್ತು ಅವರು ಕೇವಲ ಶಂಕೆಯನ್ನು ಮಾತ್ರ ಅವಲಂಬಿಸದೆ ಇರುತ್ತಿದ್ದರೆ ಮತ್ತು ಪೂರ್ಣ ತಪಾಸಣೆ ನಡೆಸುತ್ತಿದ್ದರೆ ಅವರಿಗೆ ತಿಳಿಯುತ್ತಿತ್ತು – ತಾವು ಹಝ್ರತ್ ಈಸಾ ಮಸೀಹರನ್ನು ಕೊಲ್ಲಲು ಸಮರ್ಥರಾಗಿಲ್ಲ ಎಂದು. ಈ ರೀತಿ ಅಲ್ಲಾಹನು ಹೇಳಿದ "ನಾನು ಈಸಾ ಮಸೀಹರನ್ನು ಯಹೂದಿಯರ ಕೆಡುಕುಗಳಿಂದ ತಡೆದು ರಕ್ಷಿಸಿದೆನು" ಎಂಬ ಮಾತು ಈಡೇರಿತು.

*ಅರಬಿ ಭಾಷೆಯ ನುಡಿಗಟ್ಟು ಪ್ರಕಾರ ಈ ವಚನಕ್ಕೆ ಹೀಗೆ ಸಹ ಅರ್ಥ ಹೇಳಬಹುದು: ಈ ಘಟನೆ ಯಹೂದಿಯರಿಗೆ ಸಂಶಯಾಸ್ಪದವಾಯಿತು. ಅರಬಿ ವ್ಯಾಕರಣ ಪ್ರಕಾರ ಈ ಅರ್ಥ ಸರಿಯಾಗಿದೆ.

ಹಝ್ರತ್ ಯೇಸು ಮಸೀಹರನ್ನು ಶಿಲುಬೆಗೇರಿಸಲಾಗಿದ್ದರೂ ಅವರು ಶಿಲುಬೆಯಲ್ಲಿ ಮೃತರಾಗಲಿಲ್ಲ. ಅಲ್ಲಾಹನು ಯಹೂದಿಯರ ಕೆಟ್ಟ ನಿರ್ಧಾರಗಳು ಈಡೇರದಂತೆ ಮಾಡಿ ರಕ್ಷಿಸಿದನು ಎಂದು ಮೇಲಿನ ವಿವರಣೆಗಳಿಂದ ಸಾಬೀತುಗೊಳಿಸಲಾಗಿದೆ. ಹೀಗಿದ್ದರೂ ಒಂದು ಸಂಶಯ ತಲೆದೋರಬಹುದಾಗಿದೆ. ಹಝ್ರತ್ ಈಸಾ ಮಸೀಹ್(ಅ) ಶಿಲುಬೆಯ ಘಟನೆಯ ನಂತರ ಎಲ್ಲಿಗೆ ಹೋದರು? ಪ್ರಾಯಶಃ ಈ ವಿಷಯದ ಬಗ್ಗೆ ಪವಿತ್ರ ಖುರ್‌ಆನ್ ಮೌನವಾಗಿದೆ ಎಂದು ಚಿಂತಿಸಬೇಡಿರಿ. ಪವಿತ್ರ ಖುರ್‌ಆನ್ ಯಾವುದಾದರೂ ವಿಷಯವನ್ನು ಪ್ರಸ್ತಾಪಿಸುವಾಗ ಅದರ ಎಲ್ಲ ಪಾರ್ಶ್ವಗಳ ಮೇಲೆ ಬೆಳಕು ಬೀರುತ್ತದೆ. ಈ ವಿಷಯಕ್ಕೆ ಸಂಬಂಧಿಸಿ ಸಹ ಪವಿತ್ರ ಖುರ್‌ಆನ್ ಬೆಳಕು ಬೀರಿದೆ. ನೀವು ಪವಿತ್ರ ಖುರ್‌ಆನಿನ ಈ ಕೆಳಗಿನ ವಚನವನ್ನು ನೋಡಿರಿ.

"ನಾವು ಮರ್ಯಮರ ಪುತ್ರನನ್ನೂ ಅವರ ಮಾತೆಯನ್ನೂ ಒಂದು ದೃಷ್ಟಾಂತವನ್ನಾಗಿ ಮಾಡಿದೆವು. ವಿಶ್ರಾಂತಿಗೆ ಯೋಗ್ಯವೂ ನೀರಿನ ಒರತೆಗಳೂ ಇರುವ ಒಂದು ಉನ್ನತ ಪ್ರದೇಶದೆಡೆಗೆ ತಲಪುವಂತೆ ಮಾಡಿ ನಾವು ಅವರಿಗೆ ಆಶ್ರಯ ನೀಡಿದೆವು. (23:51).

ಈ ವಚನದಲ್ಲಿ **"ಆವಾ"** ಎಂಬ ಅರಬಿ ಪದ ಬಳಸಲಾಗಿದೆ. ಆಶ್ರಯ ನೀಡಲಾಯಿತು ಎಂದು ಇದರ ಅರ್ಥವಾಗಿದೆ. ಇದು ಶಿಲುಬೆಯ ಘಟನೆಯ ನಂತರದ ಸಂದರ್ಭವೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಆಗ ಹಝ್ರತ್ ಈಸಾ ಮಸೀಹರು(ಅ) ಯಹೂದಿಗಳ ಕೆಡುಕುಗಳಿಂದ ಅದ್ಭುತಕರವಾಗಿ ರಕ್ಷಣೆ ಪಡೆದರು. ನೀರಿನ ಒರತೆಗಳು ಹರಿಯುತ್ತಿರುವ ಉನ್ನತ ಸ್ಥಳದಲ್ಲಿ ಹಝ್ರತ್ ಈಸಾ ಮಸೀಹರಿಗೆ(ಅ) ಆಶ್ರಯ ನೀಡಲಾಯಿತು ಎಂದು ಈ ವಚನದಿಂದ ತಿಳಿಯುತ್ತದೆ. ಕಾಶ್ಮೀರ್ ಪ್ರದೇಶವು ಈ ವಿವರಣೆಗೆ ಚೆನ್ನಾಗಿ ಅನ್ವಯಿಸುತ್ತದೆ. ಇದೇ ಕಾರಣದಿಂದ ಅಹ್ಮದಿಯಾ ಜಮಾಅತಿನ ಸ್ಥಾಪಕರು ಈ ವಿಷಯದ ಕಡೆಗೆ ಗಮನಿಸಿ ಸಂಶೋಧನೆ ನಡೆಸಿದಾಗ ಹೀಗೆ ತಿಳಿಯಿತು: ಹಝ್ರತ್ ಈಸಾ ಮಸೀಹ್ ಶಿಲುಬೆಯ ಮರಣದಿಂದ ರಕ್ಷಿಸಲ್ಪಟ್ಟ ನಂತರ ಅಫಘಾನಿಸ್ತಾನ ಮತ್ತು ಕಾಶ್ಮೀರದ ಕಡೆಗೆ ವಲಸೆ ಹೋದರು. ಇದಕ್ಕೆ ಕಾರಣವೇನೆಂದರೆ ಹಝ್ರತ್ ಈಸಾ ಮಸೀಹರನ್ನು(ಅ) ಇಸ್ರಾಈಲ್ ಮನೆತನದ ಕಳೆದುಹೋದ ಕುರಿಗಳಿಗೋಸ್ಕರ ಕಳುಹಿಸಲಾಗಿತ್ತು. ಹಝ್ರತ್ ಈಸಾ ಮಸೀಹ್ ಸ್ವತಃ ಹೇಳಿರುವರು: ನಾನು ಇಸ್ರಾಈಲ್ ಮನೆತನದ ಕಳೆದುಹೋದ ಕುರಿಗಳಿಗೋಸ್ಕರ ಕಳುಹಿಸಲ್ಪಟ್ಟಿರುವೆನು. ಚರಿತ್ರೆಯಿಂದ ನಮಗೆ ತಿಳಿಯುವುದೇನೆಂದರೆ ಇಸ್ರಾಈಲ್ ಮನೆತನದ ಕೆಲವು ಗೋತ್ರಗಳು ಹಝ್ರತ್ ಈಸಾ ಮಸೀಹ್(ಅ) ಜನಿಸುವ ಮೊದಲೇ ಅಫ್‌ಘಾನಿಸ್ತಾನ ಮತ್ತು ಕಾಶ್ಮೀರದಲ್ಲಿ ವಾಸಿಸುತ್ತಿದ್ದವು. ನೀವು ನೋಡಿ, ಕಾಶ್ಮೀರ್ ಎಂಬ ಶಬ್ದವೇ ಇದಕ್ಕೆ ಸಾಕ್ಷಿಯಾಗಿದೆ. ಈ ಶಬ್ದ ಕ ಮತ್ತು ಶಮೀರ್ ಶಬ್ದಗಳ ಸಂಧಿಯಿಂದ ಹುಟ್ಟಿದುದಾಗಿದೆ. ಶಮೀರ್ ಶಬ್ದದ ಮೂಲ ಪದ ಅಶೀರ್ ಆಗಿದೆ. ಅದರ ಉಚ್ಚಾರ ಬಿಗಡಾಯಿಸಿ ಅದು ಶಮೀರ್ ಆಯಿತು. ಕಾಶ್ಮೀರ್ ಶಬ್ದದ ಮೂಲರೂಪ ಕಅಶೀರ್ ಎಂದಾಗಿತ್ತು. ಅದರ ಅರ್ಥ ಅಶೀರ್ ಹಾಗೆ ಎಂದು. ಅಶೀರ್ ಎಂದರೆ ಹೀಬ್ರೂ ಭಾಷೆಯಲ್ಲಿ ಅಸೀರ್ ಅಥವಾ ಶಾಮ್ ದೇಶವಾಗಿದೆ. ಕಾಶ್ಮೀರಕ್ಕೆ ಈ ಹೆಸರನ್ನು ಇಸ್ರಾಈಲ್ ಸಂತತಿಗಳೇ ಇರಿಸಿದವು. ವಲಸೆ ಬಂದ ಜನರು ತಮ್ಮ ಮೂಲ ದೇಶಗಳ ಹೆಸರುಗಳನ್ನು ಹೊಸ ದೇಶಕ್ಕೆ ಇರಿಸುವುದು ವಾಡಿಕೆಯಾಗಿದೆ.

ಮೇಲೆ ವಿವರಿಸಿದ ವಿಷಯಗಳು ತಿಳಿದ ನಂತರ ಹೆಚ್ಚಿನ ಸಂಶೋಧನೆಯನ್ನು ಕಾಶ್ಮೀರಿನ ಚರಿತ್ರೆಗೆ ಸಂಬಂಧಿಸಿ ನಡೆಸಿದಾಗ ಹೀಗೆ ತಿಳಿಯಿತು: ಅಂದಾಜು ಹತ್ತೊಂಬತ್ತು ನೂರು ವರ್ಷಗಳ ಹಿಂದೆ ಒಬ್ಬ ರಾಜಕುಮಾರನಾದ ಪ್ರವಾದಿ ಕಾಶ್ಮೀರಕ್ಕೆ ಆಗಮಿಸಿದ್ದರು. ಅವರ ಹೆಸರು ಯೂಝ್ ಆಸಫ್ ಎಂದಾಗಿತ್ತು. ಯೇಸು ಮಸೀಹರ ಬಿಗಡಾಯಿಸಲ್ಪಟ್ಟ ಹೆಸರೇ ಯೂಝ್ ಆಸಫ್ ಎಂದು ಮನವರಿಕೆಯಾಗುತ್ತದೆ. ಕೊನೆಗೆ ಹಝ್ರತ್ ಈಸಾ ಮಸೀಹರ(ಅ) ಸಮಾಧಿ ಶ್ರೀನಗರದ ಖಾನ್‌ಯಾರ್ ಬಡಾವಣೆಯಲ್ಲಿರುವುದಾಗಿ ತಿಳಿಯಿತು. ಈ ಸಮಾಧಿಯ ಬಗ್ಗೆ ಅಲ್ಲಿ ದೊರೆತ ಸಾಕ್ಷ್ಯಗಳು ಮತ್ತು ಚರಿತ್ರೆಯಿಂದ ಕಾಶ್ಮೀರಕ್ಕೆ ಹತ್ತೊಂಬತ್ತು ನೂರು ವರ್ಷಗಳ ಹಿಂದೆ ಆಗಮಿಸಿದ ಪ್ರವಾದಿ ಯೂಝ್ ಆಸಫರ ಗೋರಿ ಎಂದು ತಿಳಿಯಿತು. ಹೆಚ್ಚುವರಿಯಾದ ಇನ್ನೊಂದು ಸಾಕ್ಷ್ಯ ಏನೆಂದರೆ ಯೂಝ್ ಆಸಫರ ಗೋರಿ ಮತ್ತು ಅವರ ಹತ್ತಿರ ಇರುವ ಅವರ ತಾಯಿಯ ಗೋರಿ ಬನೀ ಇಸ್ರಾಈಲ್ ಜನಾಂಗದವರ ಗೋರಿಯು ಹಾಗೆಯೇ ನಿರ್ಮಿಸಲ್ಪಟ್ಟುದಾಗಿ ಕಾಣಿಸಿದವು. ಇನ್ನೊಂದು ಸಾಕ್ಷ್ಯ ಏನೆಂದರೆ ಹಝ್ರತ್ ಈಸಾ ಅಲೈಹಿಸ್ಸಲಾಮರ ಹೆಸರಿನೊಂದಿಗಿರುವ ಮಸೀಹ್ ಎಂಬ ಪದದ ಅರ್ಥ ದೀರ್ಘದೂರ ಪ್ರಯಾಣ ಮಾಡುವವ ಎಂದಾಗಿದೆ. ಹಝ್ರತ್ ಈಸಾ ಅಲೈಹಿಸ್ಸಲಾಮರ ಹೊರತು ಬೇರೆ ಯಾವ ಪ್ರವಾದಿಯೂ ಇಷ್ಟು ದೀರ್ಘ ಯಾತ್ರೆ ಮಾಡಿರಲಿಲ್ಲ. ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ: **ಔ ಹಲ್ಲಾಹು ತಆಲಾ ಇಲಾ ಈಸಾ ಅನ್ ಯಾ ಈಸಾ ಇನ್‌ತಖಿಲ್ ಮಿನ್ ಮಕಾನಿನ್ ಇಲಾ ಮಕಾನಿನ್ ಲಿಅಲ್ಲಾ ತುಅ್‌ರಫ ಫತುಅ್‌ದಾ.** – ಅರ್ಥ: ಅಲ್ಲಾಹನು ಹಝ್ರತ್ ಈಸಾ ಅಲೈಹಿಸ್ಸಲಾಮರಿಗೆ ಸಂದೇಶವಾಣಿ ಅವತೀರ್ಣಗೊಳಿಸಿದನು: ಹೇ ಈಸಾ, ನೀನು ಗುರುತಿಸಲ್ಪಡುವದಿರಲಿಕ್ಕಾಗಿ ಮತ್ತು ನಿನ್ನನ್ನು ಕಷ್ಟಕ್ಕೆ ಗುರಿಪಡಿಸದಿರಲಿಕ್ಕಾಗಿ ನೀನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುತ್ತಾ ಇರಬೇಕು.

(ಕನ್‌ಝುಲ್ ಉಮ್ಮಾಲ್ ಸಂಪುಟ 2 ಪುಟ 34).

ಈ ಹದೀಸು ಸ್ಪಷ್ಟವಾಗಿ ಶಿಲುಬೆಯ ನಂತರದ ಘಟನೆಗಳ ಕಡೆಗೆ ಸೂಚಿಸುತ್ತದೆ. ಏಕೆಂದರೆ ಯಹೂದಿಯರು ಅವರನ್ನು ಗುರುತಿಸುತ್ತಿದ್ದರೆ ಅವರನ್ನು ಇನ್ನೊಮ್ಮೆ ಕಷ್ಟಕ್ಕೀಡಾಗಿಸುತ್ತಿದ್ದರು.

### ಹಝ್ರತ್ ಈಸಾ ಅಲೈಹಿಸ್ಸಲಾಮ್ ನುಝೂಲ್ ಆಗುವರು (ಇಳಿದು ಬರುವರು) ಎಂದು ಹೇಳಿದುದರ ಅರ್ಥವೇನು ?

ಅಹ್ಮದಿಯಾ ಜಮಾಅತಿನ ವಿರೋಧಿಗಳಾದ ಮತಪಂಡಿತರು ಹಝ್ರತ್ ಈಸಾ ಮಸೀಹ್(ಅ) ಆಕಾಶದಲ್ಲಿದ್ದಾರೆ ಎಂಬುದಕ್ಕೆ ಸಾಕ್ಷ್ಯಧಾರವಾಗಿ ಹೀಗೆ ಹೇಳುತ್ತಾರೆ: ಹದೀಸುಗಳಲ್ಲಿ ಹಝ್ರತ್ ಈಸಾ ಮಸೀಹ್(ಅ) ನುಝೂಲ್ ಆಗುವರು (ಇಳಿದು ಬರುವರು) ಎಂಬ ಪದವನ್ನು ಬಳಸಲಾಗಿದೆ. ಆದುದರಿಂದ ಅವರು ಆಕಾಶದಿಂದ ಇಳಿದು ಬರುವರು ಎಂದು ಸಾಬೀತಾಗುತ್ತದೆ. ಅವರು ಆಕಾಶಕ್ಕೆ ಎತ್ತಲ್ಪಟ್ಟಿದ್ದುದರಿಂದಲೇ ಅವರು ಆಕಾಶದಿಂದ ಇಳಿದು ಬರುವರು ಎಂದು ಅವರು ವಾದಿಸುತ್ತಾರೆ. ಇದಕ್ಕೆ

ಉತ್ತರವಾಗಿ ಹೀಗೆ ಹೇಳಲು ಬಯಸುತ್ತೇವೆ: ಯಾವುದೇ ಸಹೀಹ್ (ಸರಿ ಎಂದು ಅಂಗೀಕರಿಸಲ್ಪಟ್ಟ) ಹದೀಸುಗಳಲ್ಲಿ ಹಝ್‌ರತ್ ಈಸಾ ಮಸೀಹ್[ಅ] ನುಝೂಲ್ ಆಗುವರು ಎಂದು ಉಲ್ಲೇಖಿಸಲಾದ ಸ್ಥಳದಲ್ಲಿ ಸಮಾಅ್ (ಆಕಾಶ) ಎಂಬ ಪದ ಬಳಸಲಾಗಿಲ್ಲ. ಆದುದರಿಂದ ಆಕಾಶದಿಂದ ಇಳಿದು ಬರುವರೆಂದು ಹೇಳಲಾಗದು. ಅಹ್ಮದಿಯಾ ಜಮಾಅತಿನ ಸ್ಥಾಪಕರು ಹಲವು ಸಾವಿರ ರೂಪಾಯಿಗಳ ಬಹುಮಾನ ಘೋಷಿಸಿ ಪಂಥಾಹ್ವಾನ ನೀಡಿರುವರು – ಹಝ್‌ರತ್ ಈಸಾ ಮಸೀಹ್[ಅ] ಆಕಾಶಕ್ಕೆ ಹೋಗಿರುವರೆಂದೂ ಅವರು ಆಕಾಶದಿಂದ ಇಳಿದು ಬರುವರೆಂದೂ ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿರುವಂತಹ ಯಾವುದಾದರೂ ಮರ್‌ಫೂಅ್ ಮುತ್ತಸಿಲ್ ಹದೀಸ್ (ಎಲ್ಲ ವರದಿಗಾರರು ಸತ್ಯವಂತರಾಗಿದ್ದು ವರದಿಗಾರರ ಕೊಂಡಿ ನೇರವಾಗಿ ಹಝ್‌ರತ್ ಪೈಗಂಬರರಿಗೆ[ಸ] ನೇರವಾಗಿ ತಲಪುವಂತೆ ವರದಿಯಾದ ಹದೀಸು) ಸಾಕ್ಷ್ಯಾಧಾರವಾಗಿ ನೀಡಿದರೆ ಬಹುಮಾನ ನೀಡುವುದಾಗಿ. ಆದರೆ ಈ ಪಂಥಾಹ್ವಾನವನ್ನು ಅಂಗೀಕರಿಸಿ ಅಂತಹ ಹದೀಸನ್ನು ಮುಂದಿಡಲು ಯಾರಿಗೂ ಸಾಧ್ಯವಾಗಿಲ್ಲ. ಆದುದರಿಂದ ಅಂತಹ ಯಾವುದೇ ಹದೀಸು ಇಲ್ಲವೆಂದು ಓದುಗರು ತಿಳಿಯಬಹುದಾಗಿದೆ.

ಇದಲ್ಲದೆ, ನುಝೂಲ್ ಶಬ್ದದ ಅರ್ಥವೇನೆಂಬುದರ ಬಗ್ಗೆ ಸರಿಯಾಗಿ ಅಧ್ಯಯನ ನಡೆಸಲಾಗಿಲ್ಲ. ಅರಬಿ ಭಾಷೆಯಲ್ಲಿ ನುಝೂಲ್ ಪದವನ್ನು ಪ್ರಕಟಗೊಳ್ಳುವಿಕೆ ಮತ್ತು ಆಗಮನದ ಅರ್ಥದಲ್ಲಿ ಸಹ ಬಳಸಲಾಗುತ್ತಿದೆ. ಅರಬಿ ನಿಘಂಟುಗಳಿಂದ ಇದನ್ನು ತಿಳಿಯಬಹುದು. ಪವಿತ್ರ ಖುರ್‌ಆನ್‌ನಲ್ಲಿ ಸಹ ಇದೇ ಅರ್ಥದಲ್ಲಿ ಈ ಪದ ಬಳಸಲ್ಪಟ್ಟಿದೆ. ಅಲ್ಲಾಹನು ಹೀಗೆ ಹೇಳಿದ್ದಾನೆ: **ಖದ್ ಅನ್‌ಝಲಲ್ಲಾಹು ಇಲೈಕುಮ್ ಧಿಕ್‌ರನ್ ರ್ರಸೂಲ ಯತ್‌ಲೂ ಅಲೈಕುಮ್ ಆಯಾತಿಲ್ಲಾಹಿ** – "ಅಲ್ಲಾಹನು ನಿಮ್ಮ ಬಳಿಗೆ ಉಪದೇಶಕನಾದ ಸಂದೇಶವಾಹಕನನ್ನು ಇಳಿಸಿದ್ದಾನೆ. ಅವರು ನಿಮಗೆ ಅಲ್ಲಾಹನ ದೃಷ್ಟಾಂತಗಳನ್ನು ವಿವರಿಸಿ ಕೊಡುತ್ತಾರೆ." (65: 11,12).

ಮೇಲಿನ ವಚನದಲ್ಲಿ ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕುರಿತು ನುಝೂಲ್ ಪದ ಬಳಸಲಾಗಿದೆ. ಆದರೆ ಹಝ್‌ರತ್ ಪೈಗಂಬರರು[ಸ] ಆಕಾಶದಿಂದ ಇಳಿದು ಬರಲಿಲ್ಲ ಎಂದು ಎಲ್ಲರಿಗೂ ತಿಳಿದಿದೆ. ಅವರು ಅರಬಿಗಳಲ್ಲಿ ಹುಟ್ಟಿ ಅವರಿಗೋಸ್ಕರ ಪ್ರವಾದಿಯಾಗಿ ನೇಮಿಸಲ್ಪಟ್ಟರು. ಪವಿತ್ರ ಖುರ್‌ಆನ್ ಇದರ ಬಗ್ಗೆ ಹೀಗೆ ಹೇಳಿದೆ: **ಲಖದ್ ಜಾಅಕುಮ್ ರಸೂಲುನ್ ಮಿನ್ ಅನ್‌ಫುಸಿಕುಮ್** – "ನಿಜವಾಗಿಯೂ ನಿಮ್ಮ ಬಳಿಗೆ ನಿಮ್ಮಿಂದಲೇ ಇರುವ ಒಬ್ಬ ಸಂದೇಶವಾಹಕನ ಆಗಮನವಾಗಿದೆ." (9:129).

ಪವಿತ್ರ ಖುರ್‌ಆನ್ ಹೀಗೆ ಸಹ ಹೇಳಿದೆ: **ವ ಅನ್‌ಝಲ್‌ನಲ್ ಹದೀದ ಫೀಹಿ ಬಅ್‌ಸುನ್ ಶದೀದುನ್ ವ ಮನಾಫಿಉ ಲಿನ್ನಾಸಿ** – "ನಾವು ಕಬ್ಬಿಣವನ್ನೂ ಇಳಿಸಿದ್ದೇವೆ. ಅದರಲ್ಲಿ ತೀವ್ರವಾದ ಮಾರಕ ಶಕ್ತಿಯೂ ಮನುಷ್ಯರಿಗೆ ಹಲವಿಧ ಪ್ರಯೋಜನಗಳೂ ಇವೆ." (57: 26).

ನೋಡಿರಿ, ಕಬ್ಬಿಣವನ್ನು ಆಕಾಶದಿಂದ ಇಳಿಸಿದುದಾಗಿ ಹೇಳಲಾಗಿದೆ. ಆದರೆ ಅದು ಭೂಮಿಯಿಂದ ಅಗೆದು ತೆಗೆದು ಕೊಳ್ಳಲ್ಪಡುವುದನ್ನು ಎಲ್ಲರೂ ಕಾಣುತ್ತಾರೆ.

ಪವಿತ್ರ ಖುರ್‌ಆನಿನ ಇನ್ನೊಂದು ವಚನ ಹೀಗಿದೆ: **ಯಾ ಬನೀ ಆದಮ ಖದ್ ಅನ್‌ಝಲ್‌ನಾ ಅಲೈಕುಮ್ ಲಿಬಾಸನ್ ಯುವಾರೀ ಸವ್‌ಆತಿಕುಮ್** – "ಎಲೈ ಆದಮ್ ಸಂತತಿಗಳೇ, ನಾವು ನಿಮಗೆ ನಿಮ್ಮ ನಗ್ನತೆಯನ್ನು ಮುಚ್ಚಲಿಕ್ಕೆ ಮತ್ತು ವೇಷಭೂಷಣಕ್ಕಾಗಿ ಉಡುಪನ್ನು ಇಳಿಸಿಕೊಟ್ಟಿದ್ದೇವೆ." (7:27).

ಈ ವಚನದಲ್ಲಿ ಉಡುಗೆ ತೊಡುಗೆಗಳನ್ನು ಇಳಿಸಿ ಕೊಟ್ಟದ್ದಾಗಿ ಹೇಳಲಾಗಿದೆ. ಆದರೆ ಬಟ್ಟೆ ಭೂಮಿಯಲ್ಲಿಯೇ ಹತ್ತಿ ಮೊದಲಾದುವುಗಳಿಂದ ನಿರ್ಮಿಸಲ್ಪಡುತ್ತದೆ.

ಪವಿತ್ರ ಖುರ್‌ಆನಿನ ಇನ್ನೊಂದು ವಚನ ಹೀಗಿದೆ: **ವ ಅನ್‌ಝಲ ಲಕುಮ್ ಮಿನಲ್ ಅನ್‌ಆಮ್** – "ಅವನು ನಿಮಗೆ ಜಾನುವಾರುಗಳನ್ನು ಇಳಿಸಿಕೊಟ್ಟನು. (39:7). ಆದರೆ ಜಾನುವಾರುಗಳಾದ ಕುದುರೆಗಳು, ಕತ್ತೆಗಳು, ಪಶುಗಳೆಲ್ಲವೂ ಭೂಮಿಯಲ್ಲಿಯೇ ಹುಟ್ಟುತ್ತವೆ.

ಮೇಲಿನ ಪವಿತ್ರ ಖುರ್‌ಆನ್ ವಚನಗಳಲ್ಲಿ ನುಝೂಲ್ (ಇಳಿಸುವಿಕೆ) ಎಂಬ ಪದದ ಅರ್ಥ ಇಳಿದು ಬರುವಿಕೆ ಎಂಬ ಅರ್ಥದಲ್ಲಿ ಯಾವಾಗಲೂ ಬಳಸಲ್ಪಡುವುದಿಲ್ಲ ಎಂದು ಸ್ಪಷ್ಟವಾಗುತ್ತದೆ. ಬಹುತೇಕ ಸಂದರ್ಭಗಳಲ್ಲಿ ನುಝೂಲ್ ಪದವನ್ನು ಅಲ್ಲಾಹನು ಬಳಸಿರುವುದು ಮಾನವರೆಲ್ಲರಿಗೂ ಉಪಯೋಗಕರವಾದ ವರದಾನ ಎಂಬ ಅರ್ಥದಲ್ಲಿಯಾಗಿದೆ. ಈ ವರದಾನ ಅಥವಾ ಅನುಗ್ರಹ ಅಲ್ಲಾಹನಿಂದ ದೊರಕುವ ಕಾರಣ ಅದರ ಬಗ್ಗೆ ನುಝೂಲ್ ಪದ ಬಳಸಲಾಗುತ್ತಿದೆ. ಅರಬಿ ಭಾಷೆಯಲ್ಲಿ ನುಝೂಲ್ ಪದವನ್ನು ಕೆಲವು ಸಾರಿ 'ಪ್ರಕಟಗೊಳ್ಳು' ಎಂಬ ಅರ್ಥದಲ್ಲಿ ಬಳಸಲಾಗುತ್ತಿದೆ. ಪ್ರಯಾಣಿಕನನ್ನು 'ನಝೀಲ್' ಎಂದು ಅರಬಿ ಭಾಷೆಯಲ್ಲಿ ಕರೆಯಲಾಗುತ್ತಿದೆ. ಪ್ರಯಾಣ ಮುಗಿಸಿ ಎಲ್ಲಿ ತಂಗಲಾಗುತ್ತಿದೆಯೋ ಆ ಸ್ಥಳವನ್ನು ಮನ್‌ಝಿಲ್ ಎಂದು ಕರೆಯುತ್ತಾರೆ. ಹದೀಸುಗಳಲ್ಲಿ ಹಝ್‌ರತ್ ಈಸಾ ಮಸೀಹರ[ಅ] ಕುರಿತು ಬಅಸ್ ಮತ್ತು ಖುರೂಜ್ ಪದಗಳನ್ನು ಬಳಸಲಾಗಿದೆ. (ಕನ್‌ಝುಲ್ ಉಮ್ಮಾಲ್ ನೋಡಿರಿ). ಈ ಪದಗಳು ನುಝೂಲ್ ಪದವನ್ನು ವಿಶದೀಕರಿಸುತ್ತವೆ. ಬಅಸ್, ಖುರೂಜ್ ಮತ್ತು ನುಝೂಲ್ ಈ ಮೂರು ಪದಗಳು ನೀಡುವ ಸಮಾನ ಅರ್ಥ ಪ್ರಕಟಗೊಳ್ಳುವಿಕೆ ಎಂದಾಗಿದೆ. ಇದೇ ಅರ್ಥ ಸರಿಯಾದುದೂ ಆಗಿದೆ. ನುಝೂಲ್ ಪದ ಬಳಸಲಾದ ಕಾರಣ ಹಝ್‌ರತ್ ಈಸಾ ಮಸೀಹ್[ಅ] ಆಕಾಶದಿಂದ ಇಳಿದು ಬರುವರು ಎಂದು ಹೇಳುವುದು ಬಹಳ ದೊಡ್ಡ ತಪ್ಪಾಗಿದೆ. ಪ್ರತಿಯೊಬ್ಬ ಬುದ್ಧಿಶಾಲಿ ಈ ನಂಬಿಕೆಯಿಂದ ದೂರವಿರುವುದು ಆವಶ್ಯಕವಾಗಿದೆ. ಒಬ್ಬ ಮನುಷ್ಯನು ಜೀವಂತವಾಗಿರುವಾಗ ದೇಹ ಸಮೇತ ಆಕಾಶವನ್ನೇರಿ ಹೋಗುವುದನ್ನು ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಅಲ್ಲಗಳೆದಿದೆ. ಹದೀಸುಗಳು ಸಹ ಹಝ್‌ರತ್ ಈಸಾ ಮಸೀಹ್[ಅ] ಆಕಾಶವನ್ನೇರಿ ಹೋಗಿ ಅಲ್ಲಿ ಕುಳಿತುಕೊಂಡ ಬಗ್ಗೆ ಯಾವುದೇ ಸಾಕ್ಷ್ಯ ನೀಡುವುದಿಲ್ಲ. ಬದಲು, ವಿರುದ್ಧವಾಗಿವೆ. ಮನುಷ್ಯನ ಬುದ್ಧಿ ಈ ವಿಶ್ವಾಸವನ್ನು ದೂರದಿಂದಲೇ ಒದ್ದು ಹಾಕುತ್ತದೆ. ಆದುದರಿಂದ ಹಝ್‌ರತ್ ಈಸಾ ಮಸೀಹ್[ಅ] ಆಕಾಶದಲ್ಲಿ ಕುಳಿತಿರುವರೆಂದು ಅನಾವಶ್ಯಕವಾಗಿ ಯೋಚಿಸುವುದೇಕೆ? ♦




ಇಸ್ಲಾಮ್ ಶಾಂತಿ ಮತ್ತು ಸಹಾನುಭೂತಿಯ ಧರ್ಮವಾಗಿದೆ. ದುರದೃಷ್ಟವಶಾತ್ ಕೆಲವು ಉಗ್ರಗಾಮಿ ಗುಂಪುಗಳ ಭಯೋತ್ಪಾದಕ ಚಟುವಟಿಕೆಗಳಿಂದಾಗಿ ಇಸ್ಲಾಮ್ ಧರ್ಮ ತಪ್ಪಾಗಿ ಗ್ರಹಿಸಲ್ಪಟ್ಟಿದೆ. ಇಂದು ನಾಮಧಾರಿ ಮುಸ್ಲಿಮ್ ಗುಂಪುಗಳು ಮುಂದಿರಿಸುವ ಇಸ್ಲಾಮ್, ಯಾವುದೇ ರೀತಿಯಲ್ಲಿ ಯಥಾರ್ಥ ಇಸ್ಲಾಮನ್ನು ಬಿಂಬಿಸುವುದಿಲ್ಲ. ಇಂತಹ ಭಯೋತ್ಪಾದಕ ಮತ್ತು ದ್ವೇಷಭರಿತ ಚಟುವಟಿಕೆಗಳನ್ನು ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಪೂರೈಸುವ ಏಕೈಕ ಲಾಲಸೆಯೊಂದಿಗೆ ಮಾಡಿ ಅವುಗಳನ್ನು ಸಮರ್ಥಿಸಲು ಇಸ್ಲಾಮಿನ ಹೆಸರನ್ನು ತಪ್ಪಾಗಿ ಬಳಸುತ್ತಾರೆ ಎಂಬುದು ಸ್ಪಷ್ಟ.

ಇಸ್ಲಾಮ್ ಬಲಪ್ರಯೋಗ ಮತ್ತು ಉಗ್ರವಾದವನ್ನು ಸಂಪೂರ್ಣವಾಗಿ ವಿರೋಧಿಸುತ್ತದೆ. ಮಾತ್ರವಲ್ಲ, ಸಮಾಜದ ಎಲ್ಲ ಹಂತದಲ್ಲೂ ಇಸ್ಲಾಮ್ ಶಾಂತಿ ಮತ್ತು ಸಾಮರಸ್ಯವನ್ನು ಪ್ರತಿಪಾದಿಸುತ್ತದೆ. ಇಸ್ಲಾಮ್ ಧರ್ಮ ಹಿಂಸೆ ಮತ್ತು ಬಲಪ್ರಯೋಗವನ್ನು ಕಲಿಸಲು ಅಸಾಧ್ಯ. ಏಕೆಂದರೆ, ಇಸ್ಲಾಮ್ ಎಂಬ ಪದದ ಅರ್ಥ ಶಾಂತಿಯಿಂದ ಬದುಕುವುದು ಮತ್ತು ಇತರರಿಗೂ ಶಾಂತಿಯನ್ನು ಒದಗಿಸುವುದು ಎಂದಾಗಿದೆ.

## ಧಾರ್ಮಿಕ ಸಹಿಷ್ಣುತೆ

ಧಾರ್ಮಿಕ ಸಹಿಷ್ಣುತೆಯ ಪ್ರಾಮುಖ್ಯತೆಯ ಬಗ್ಗೆ ಇಸ್ಲಾಮ್ ಧರ್ಮ ಎಷ್ಟು ಹೆಚ್ಚು ಒತ್ತುನೀಡುತ್ತದೆ ಎಂದರೆ, ಅಂತಹ ಉನ್ನತ ಮಟ್ಟವನ್ನು ಬೇರೆಲ್ಲೂ ಕಾಣಲು ಸಾಧ್ಯವಿಲ್ಲ. ಇತರ ಧರ್ಮಗಳು ಮಿಥ್ಯೆ ಎಂದು ಸಾಬೀತಾಗುವವರೆಗೆ ತಮ್ಮ ಧರ್ಮದ ಸತ್ಯವನ್ನು ಸಾಬೀತುಪಡಿಸಲು ಸಾಧ್ಯವಿಲ್ಲ ಎಂದು ಕೆಲವರು ನಂಬುತ್ತಾರೆ. ಆದರೆ ಇಸ್ಲಾಮಿನ ದೃಷ್ಟಿಕೋನ ಸಂಪೂರ್ಣ ವಿಭಿನ್ನವಾದುದಾಗಿದೆ. ಏಕೆಂದರೆ ಇಸ್ಲಾಮ್ ಮನುಕುಲಕ್ಕೆ ಕಳುಹಿಸಲಾದ ಸತ್ಯಧರ್ಮವೆಂದು ಹೇಳುವುದರೊಂದಿಗೆ ಲೋಕದ ಎಲ್ಲ ಸಮುದಾಯಗಳಲ್ಲೂ ದೇವನ ಪ್ರವಾದಿಗಳು ನಿಯೋಜಿಸಲ್ಪಟ್ಟಿದ್ದರು ಎಂದು ಅದು ಕಲಿಸುತ್ತದೆ. ಇದು ಸ್ಪಷ್ಟವಾಗಿ ಪವಿತ್ರ ಖುರ್‌ಆನಿನಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಪ್ರೀತಿ ಮತ್ತು ವಾತ್ಸಲ್ಯದ ಬೋಧನೆಯೊಂದಿಗೆ ಎಲ್ಲ ಪ್ರವಾದಿಗಳು ಕಳುಹಿಸಲ್ಪಟ್ಟಿದ್ದರು ಎಂದು ಅಲ್ಲಾಹನು ಹೇಳಿದ್ದಾನೆ. ಆದ್ದರಿಂದ ಎಲ್ಲ ನೈಜ ಮುಸ್ಲಿಮರು ಅವರನ್ನು ಕಡ್ಡಾಯವಾಗಿ ನಂಬಬೇಕು. ಯಾವುದೇ ಇತರ ಧರ್ಮ ಸ್ವಇಚ್ಛೆಯಿಂದ ಮತ್ತು ಬಹಿರಂಗವಾಗಿ ಇತರ ವಿಶ್ವಾಸಗಳನ್ನು ಮತ್ತು ಸಮುದಾಯಗಳನ್ನು ಈ ರೀತಿಯಲ್ಲಿ ಪ್ರಶಂಸಿಸುವುದಿಲ್ಲ. ಪ್ರವಾದಿಗಳನ್ನು ಎಲ್ಲ ಜನರಿಗೂ ಎಲ್ಲ ಸಮುದಾಯಗಳಿಗೂ ಕಳುಹಿಸಲಾಗಿತ್ತು ಎಂದು ಮುಸ್ಲಿಮರು ನಂಬುವುದರಿಂದ ಅವರನ್ನು ಸುಳ್ಳುವಾದಿಗಳೆಂದು ಪರಿಗಣಿಸಲು ಮುಸ್ಲಿಮರಿಗೆ ಎಂದಿಗೂ ಸಾಧ್ಯವಿಲ್ಲ. ಆದ್ದರಿಂದ ದೇವನ ಯಾವುದೇ ಪ್ರವಾದಿಗಳನ್ನು ಅಪಮಾನಿಸಲು, ಅಪಹಾಸ್ಯಮಾಡಲು, ಅವರಿಗೆ ಅಗೌರವ ತೋರಿಸಲು ಅಥವಾ ಇತರ ಧರ್ಮಗಳ ಅನುಯಾಯಿಗಳ ಭಾವನೆಗಳನ್ನು ನೋಯಿಸಲು ಮುಸ್ಲಿಮರಿಗೆ ಸಾಧ್ಯವಿಲ್ಲ.

ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕ ಹಝ್ರತ್ ಮಿರ್ಝಾ ಗ್ಲುಲಾಮ್ ಅಹ್ಮದ್, ವಾಗ್ದತ್ತ ಮಸೀಹ್ ಮತ್ತು ಇಮಾಮ್ ಮಹ್‌ದೀ (ಅವರ ಮೇಲೆ ಶಾಂತಿ ಇರಲಿ) ಹೀಗೆ ಹೇಳುತ್ತಾರೆ:

"ಈ ತತ್ವ ಅತ್ಯಂತ ಪ್ರಿಯ, ಶಾಂತಿದಾಯಕ, ಮೈತ್ರಿಗೆ ಅಡಿಪಾಯ ಹಾಕುವಂತಹದ್ದು ಮತ್ತು ನೈತಿಕ ಮೌಲ್ಯಕ್ಕೆ ಸಹಾಯಕವಾದುದಾಗಿದೆ. ಅದೇನೆಂದರೆ, ಲೋಕದಲ್ಲಿ ಆಗಮಿಸಿದ ಎಲ್ಲ ಪ್ರವಾದಿಗಳನ್ನು ಸತ್ಯವಂತರೆಂದು ಅರಿಯಬೇಕು. ಅವರು ಭಾರತದಲ್ಲಿ ಆಗಮಿಸಿದವರಾಗಿದ್ದರೂ ಪರ್ಶಿಯದಲ್ಲಾಗಿದ್ದರೂ ಚೀನಾದಲ್ಲಾಗಿದ್ದರೂ ಅಥವಾ ಬೇರೆ ಯಾವ ದೇಶದಲ್ಲಿ ಆಗಮಿಸಿದವರಾಗಿದ್ದರೂ ಸರಿ. ಕೋಟಿಗಟ್ಟಲೆ ಜನರ ಹೃದಯಗಳಲ್ಲಿ ಅಲ್ಲಾಹನು ಅವರ – (ಪ್ರವಾದಿಗಳ) ಮೇಲಿನ ಗೌರವಾದರಗಳನ್ನು ಇರಿಸಿದ್ದಾನೆ. ಅದೇ ರೀತಿ ಅವರ ಧರ್ಮಗಳ ಬೇರುಗಳನ್ನು ನೆಲೆನಿಲ್ಲಿಸಿದನು ಹಾಗೂ ಶತಮಾನಗಳಿಂದ ಆ ಧರ್ಮಗಳು ಜಾರಿಯಲ್ಲಿವೆ. ಪವಿತ್ರ ಖುರ್‌ಆನ್ ನಮಗೆ ಕಲಿಸಿಕೊಡುವ ತತ್ವ ಇದೇ ಆಗಿದೆ. ಈ ತತ್ವದ ಪ್ರಕಾರ ಮೇಲೆ ನಿರೂಪಿಸಿದಂತಹ ಜೀವನ ಚರಿತ್ರೆ ಇರುವ ಎಲ್ಲ ಧರ್ಮಸ್ಥಾಪಕರನ್ನು ನಾವು ಗೌರವ ದೃಷ್ಟಿಯಿಂದ ಕಾಣುತ್ತೇವೆ."

**(ತುಹ್‌ಫೆ ಕೈಸರಿಯ್ಯ, ಪುಟ 7)**

## ದೇಶಪ್ರೇಮ: ಸತ್ಯವಿಶ್ವಾಸದ ಒಂದು ಅವಿಭಾಜ್ಯ ಅಂಶವಾಗಿದೆ

ದೇಶಪ್ರೇಮ ತಮ್ಮ ವಿಶ್ವಾಸದ ಒಂದು ಅವಿಭಾಜ್ಯ ಅಂಶವೆಂದು ಮುಸ್ಲಿಮರು ನಂಬುತ್ತಾರೆ. ಇಸ್ಲಾಮಿನ ಪವಿತ್ರ ಪ್ರವಾದಿ ಹಝ್ರತ್ ಮುಹಮ್ಮದ್[ಸ] ಇದಕ್ಕೆ ಬಹಳ ಒತ್ತುನೀಡಿ ಆದೇಶಿಸಿದ್ದಾರೆ. ಆದ್ದರಿಂದ ನೈಜ ದೇಶಭಕ್ತಿ ಇಸ್ಲಾಮಿನ ಮುಖ್ಯವಾದ ಅಂಶವಾಗಿದೆ. ದೇವನನ್ನು ನಿಜವಾಗಿಯೂ ಪ್ರೀತಿಸುವ ಸಲುವಾಗಿ ತನ್ನ ದೇಶವನ್ನು ಪ್ರೀತಿಸಬೇಕೆಂದು ಇಸ್ಲಾಮ್ ಆವಶ್ಯಪಡುತ್ತದೆ.

ಎಲ್ಲ ಅಹ್ಮದೀ ಮುಸ್ಲಿಮರು ತಾವು ನೆಲೆಸಿರುವ ದೇಶಕ್ಕೆ ನಿಷ್ಠರಾಗಿದ್ದುಕೊಂಡು ಅದನ್ನು ಹೃತ್ಪೂರ್ವಕವಾಗಿ ಪ್ರೀತಿಸುತ್ತಾರೆ. ಅವರು ದೇಶದ ಪ್ರಗತಿ ಮತ್ತು ಸಮೃದ್ಧಿಯನ್ನು ಮಾತ್ರ ಬಯಸುತ್ತಾರೆ. ಇನ್ನೊಂದು ನಿರ್ಣಾಯಕ ಅಂಶವೇನೆಂದರೆ, ಯಾವನೇ ಪ್ರಜೆ ತನ್ನ ದೇಶಕ್ಕೆ ಅಥವಾ ಸಹಪ್ರಜೆಗೆ ಯಾವುದೇ ರೀತಿಯ ಹಾನಿಯನ್ನು ಉಂಟುಮಾಡುವನಾದರೆ, ಅವನು ಸ್ಪಷ್ಟವಾಗಿ ಇಸ್ಲಾಮಿನ ಅಧ್ಯಾಪನೆಗಳಿಗೆ ವಿರುದ್ಧವಾಗಿ ವರ್ತಿಸುತ್ತಾನೆ.

## ಇಸ್ಲಾಮ್ ಧರ್ಮ ಉಗ್ರವಾದವನ್ನು ವಿರೋಧಿಸುತ್ತದೆ

ಇಸ್ಲಾಮ್ ಧರ್ಮದ ಪ್ರವಾದಿ ಮತ್ತು ಪವಿತ್ರ ಖುರ್‌ಆನ್ ಮೇಲೆ ಹೊರಿಸಲಾಗುವ ಇನ್ನೊಂದು ಆಕ್ಷೇಪವೇನೆಂದರೆ, ಅವರು ಉಗ್ರವಾದವನ್ನು ಕಲಿಸುತ್ತಾರೆ ಮತ್ತು ಇಸ್ಲಾಮಿನ ಸಂದೇಶವನ್ನು ಪ್ರಚಾರಮಾಡಲು ಬಲಪ್ರಯೋಗವನ್ನು ಪ್ರೋತ್ಸಾಹಿಸುತ್ತಾರೆ ಎಂದಾಗಿದೆ. ಈ ಆಪಾದನೆಯ ನೈಜತೆಯನ್ನು ಅರಿಯಲು ಪವಿತ್ರ ಖುರ್‌ಆನ್ ಕಡೆಗೆ ದೃಷ್ಟಿ ಹಾಯಿಸೋಣ. ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ:

"ನಿನ್ನ ಪ್ರಭು ಇಚ್ಛಿಸಿದ್ದರೆ, ಭೂಲೋಕದಲ್ಲಿರುವ ಎಲ್ಲರೂ ವಿಶ್ವಾಸ ಹೊಂದುತ್ತಿದ್ದರು. ಹಾಗಿರುವಾಗ ಜನರು ವಿಶ್ವಾಸಿಗಳಾಗುವಂತೆ ನೀನು ಬಲವಂತಪಡಿಸುವಿಯೋ?"

**(ಪವಿತ್ರ ಖುರ್‌ಆನ್ 10:100)**

ದೇವನು ಮನುಷ್ಯನಿಗೆ ಆಯ್ಕೆಯ ಸ್ವಾತಂತ್ರ್ಯ ಕೊಟ್ಟಿರುವಾಗ, ಇಸ್ಲಾಮ್ ಅಥವಾ ಅದರ ಅನುಯಾಯಿಗಳು ಯಾರನ್ನಾದರೂ ಮುಸ್ಲಿಮನಾಗಲು ಹೇಗೆ ಒತ್ತಾಯಿಸಬಹುದು?

ನೈಜವಾದ ಮುಸ್ಲಿಮನ ನಾಲಗೆ ಮತ್ತು ಕೈಗಳಿಂದ ಇತರ ಶಾಂತಿಯುತ ಜನರು ಸುರಕ್ಷಿತರಾಗಿರಬೇಕು ಎಂಬುದು ಇಸ್ಲಾಮಿನ ಮೂಲಭೂತ ಅಧ್ಯಾಪನೆಯಾಗಿದೆ. ಇದು ಮುಸ್ಲಿಮ್ ಎಂಬ ಪದಕ್ಕೆ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ನೀಡಿದ ವಿವರಣೆಯಾಗಿದೆ.

ಒಬ್ಬ ವ್ಯಕ್ತಿ ತನ್ನ ನೆಮ್ಮದಿಯನ್ನು ಮಾತ್ರವಲ್ಲ, ಬದಲಾಗಿ ತಾನು ಬಯಸುವಷ್ಟೇ ಶಾಂತಿ ಮತ್ತು ಸಾಮರಸ್ಯವನ್ನು ಇತರರಿಗೂ ಹರಡಲು ಸಂಪೂರ್ಣ ಪ್ರಯತ್ನ ಮಾಡಬೇಕು. ಈ ನಿಸ್ವಾರ್ಥ ಮನೋಭಾವವೇ ಶಾಂತಿಯನ್ನು ಸ್ಥಾಪಿಸಲಿರುವ ಮಾರ್ಗವಾಗಿದೆ.

## ಖಡ್ಗದ ಮೂಲಕ ಜಿಹಾದ್

ಇಸ್ಲಾಮಿನ ನಂಬಿಕೆ ಪ್ರಕಾರ, ಈಗಿನ ಕಾಲದ ಹಿಂಸಾತ್ಮಕ ಜಿಹಾದಿನ ಪರಿಕಲ್ಪನೆ ಸಂಪೂರ್ಣವಾಗಿ ತಪ್ಪು ಮತ್ತು ತಿರಸ್ಕರಿಬೇಕಾದದ್ದು ಆಗಿದೆ. ಇಸ್ಲಾಮಿನ ವಿರುದ್ಧ ಧಾರ್ಮಿಕ ಯುದ್ಧ ನಡೆಸಲಾಗುವಾಗ ಮಾತ್ರ ಖಡ್ಗದ ಅಥವಾ ಶಕ್ತಿಯ ಬಳಕೆ ಅನುಮತಿಸಲಾಗಿದೆ ಎಂಬುದು ಪರಿಗಣಿಸಬೇಕಾದ ಮುಖ್ಯವಾದ ಅಂಶವಾಗಿದೆ. ಇಂದಿನ ಲೋಕದಲ್ಲಿ ಯಾವುದೇ ದೇಶ ಅಥವಾ ಧರ್ಮ ಸಂಪೂರ್ಣವಾಗಿ ಧರ್ಮದ ಹೆಸರಿನಲ್ಲಿ ಇಸ್ಲಾಮಿನ ವಿರುದ್ಧ ಯುದ್ಧ ಅಥವಾ ಆಕ್ರಮಣ ಮಾಡುತ್ತಿಲ್ಲ. ಆದ್ದರಿಂದ ಯಾವುದೇ ಇತರ ಪಕ್ಷವನ್ನು ಆಕ್ರಮಿಸುವುದನ್ನು ಮುಸ್ಲಿಮರಿಗೆ ಸಮರ್ಥಿಸಲು ಸಾಧ್ಯವಿಲ್ಲ. ಏಕೆಂದರೆ ಇದು ಪವಿತ್ರ ಖುರ್‌ಆನಿನ ಸ್ಪಷ್ಟವಾದ ಪಾಠಗಳಿಗೆ ವಿರುದ್ಧವಾಗಿದೆ.

ಇಸ್ಲಾಮಿನ ವಿರುದ್ಧ ಯುದ್ಧ ಮಾಡಿದ್ದ ಮತ್ತು ಖಡ್ಗವೆತ್ತಿದ್ದವರ ವಿರುದ್ಧ ಬಲಪ್ರಯೋಗಿಸಲು ಮಾತ್ರ ಪವಿತ್ರ ಖುರ್‌ಆನ್ ಅನುಮತಿ ನೀಡಿತ್ತು. ನಿರಪರಾಧಿಯ ರಕ್ತ ಹರಿಸುವವನು ಮುಸ್ಲಿಮನಲ್ಲ ಎಂದು ಪ್ರವಾದಿ ಮುಹಮ್ಮದ್[ಸ] ಹೇಳಿದ್ದರು. ಅಂತಹ ಜನರನ್ನು ಬಲಹೀನ ವಿಶ್ವಾಸಿ ಮತ್ತು ಪಾಪಿಯೆಂದು ಹಝ್ರತ್ ಪೈಗಂಬರ್[ಸ] ಪರಿಗಣಿಸಿದ್ದರು.

## ಇಸ್ಲಾಮ್ ಸಹಾನುಭೂತಿಯ ಧರ್ಮವಾಗಿದೆ

ಬಡವರ ಮತ್ತು ನಿರ್ಗತಿಕರ ಹಕ್ಕುಗಳನ್ನು ಈಡೇರಿಸಬೇಕೆಂಬುದು ಇಸ್ಲಾಮಿನ ಇನ್ನೊಂದು ಮುಖ್ಯವಾದ ಬೋಧನೆಯಾಗಿದೆ. ಇದನ್ನು ಈಡೇರಿಸಲು ಸಮಾಜದ ನಿರ್ಗತಿಕ ವರ್ಗದವರ ಸಾಮಾಜಿಕ ನೆಲೆಯನ್ನು ಸುಧಾರಿಸಲು ಅವಕಾಶಗಳನ್ನು ಹುಡುಕಬೇಕೆಂದು ಇಸ್ಲಾಮ್ ಕಲಿಸುತ್ತದೆ. ಪ್ರತಿಕೂಲ ಪರಿಸ್ಥಿತಿಯಲ್ಲಿರುವವರಿಗೆ ಸಹಾಯಮಾಡಲು ನಿಸ್ವಾರ್ಥವಾದ ರೀತಿಯಲ್ಲಿ ನಾವು ಪ್ರಯತ್ನಿಸಬೇಕು. ಅವರನ್ನು ಯಾವುದೇ ರೀತಿಯಲ್ಲಿ ಶೋಷಿಸಬಾರದು.

ಇಸ್ಲಾಮ್ ನೆರೆಹೊರೆಯವರ ಹಕ್ಕುಗಳನ್ನು ಸಹ ನಿಗದಿಪಡಿಸುತ್ತದೆ. ಅವರು ಯಾವುದೇ ಧರ್ಮದವರಾಗಿದ್ದರೂ ಸರಿ. ಈ ಹಕ್ಕಿನ ಬಗ್ಗೆ ದೇವನಿಂದ ಎಷ್ಟು ಒತ್ತು ನೀಡಲಾಗಿದೆ ಎಂದರೆ, ನೆರೆಹೊರೆಯವರು ಸಹ ವಾರಸು ಸೊತ್ತಿನ ಹಕ್ಕುದಾರರಾಗುವರೋ ಎಂದು ಹಝ್ರತ್ ಪೈಗಂಬರರಿಗೆ[ಸ] ಅನಿಸಿತ್ತು. ಹಝ್ರತ್ ಮುಹಮ್ಮದ್[ಸ] ಇದಕ್ಕೆ ಬಹಳ ಒತ್ತುನೀಡುತ್ತಾ ಹೀಗೆ ಹೇಳಿದರು: ಯಾವ ವ್ಯಕ್ತಿಯಿಂದ ಅವನ ನೆರೆಹೊರೆಯವನು ಸುರಕ್ಷಿತನಲ್ಲವೋ ಅವನನ್ನು ಸತ್ಯವಿಶ್ವಾಸಿ ಅಥವಾ ಮುಸ್ಲಿಮ್ ಎಂದು ಕರೆಯಲಾಗದು.

ದೇವನಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಈಡೇರಿಸುವ ರೀತಿಯಲ್ಲಿಯೇ ಮನುಕುಲಕ್ಕೆ ಮಾಡಬೇಕಾದ ಕರ್ತವ್ಯಗಳನ್ನು ಈಡೇರಿಸಬೇಕೆಂದು ಇಸ್ಲಾಮ್ ಧರ್ಮ ಮುಸ್ಲಿಮನಿಂದ ಆವಶ್ಯಪಡುತ್ತದೆ. ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಹೀಗೆ ಹೇಳುತ್ತಾರೆ:

"ನಿಮ್ಮ ಕರುಣೆಯನ್ನು ಮುಸ್ಲಿಮರಿಗೆ ಮಾತ್ರ ಸೀಮಿತಗೊಳಿಸಬೇಕೆಂದು ಅಜ್ಞಾನಿಗಳು ಹೇಳುವಂತೆ ನಾನು ಹೇಳಲು ಇಚ್ಛಿಸುವುದಿಲ್ಲ. ನೀವು ದೇವನ ಎಲ್ಲ ಸೃಷ್ಟಿಗಳೊಂದಿಗೆ ಸಹಾನುಭೂತಿ ತೋರಿಸಿರಿ – ಅವರು ಹಿಂದೂ, ಮುಸ್ಲಿಮ್ ಅಥವಾ ಯಾರೇ ಆಗಿರಲಿ. ಸಹಾನುಭೂತಿಯನ್ನು ತನ್ನ ಸ್ವಂತ ಜನರಿಗೆ ಸೀಮಿತಗೊಳಿಸಲು ಇಚ್ಛಿಸುವ ಜನರ ಮಾತುಗಳನ್ನು ನಾನು ಅಂಗೀಕರಿಸುವುದಿಲ್ಲ."

(ಮಲ್‌ಫೂಝಾತ್ – ಪುಟ 217)

## ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ನೇತಾರರ ಮನವಿ

ಜಾಗತಿಕ ಅಹ್ಮದಿಯಾ ಜಮಾಅತಿನ ನೇತಾರರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಹೇಳುತ್ತಾರೆ:

"ಜಾಗತಿಕ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸರ್ವೋನ್ನತ ನಾಯಕನೆಂಬ ನೆಲೆಯಲ್ಲಿ ನನಗೆ ಲೋಕದ ಗಮನವನ್ನು ಶಾಂತಿ ಸ್ಥಾಪನೆಯ ಕಡೆಗೆ ಹರಿಸುವ ಕರ್ತವ್ಯವಿದೆ. ಶಾಂತಿ ಕಡೆಗೆ ಕರೆ ನೀಡುವುದು ನನ್ನ ಹೊಣೆಗಾರಿಕೆಯಾಗಿದೆ. ಏಕೆಂದರೆ, ಇಸ್ಲಾಮ್ ಎಂಬ ಪದದ ಅರ್ಥ ಶಾಂತಿ ಮತ್ತು ಭದ್ರತೆ ಎಂದಾಗಿದೆ. ಕೆಲವು ಮುಸ್ಲಿಮ್ ದೇಶಗಳು ದ್ವೇಷಭರಿತ ತೀವ್ರವಾದವನ್ನು ಪ್ರೋತ್ಸಾಹಿಸುವುದಾದರೆ ಆ ಕಾರಣದಿಂದ ಇಸ್ಲಾಮ್ ಅಶಾಂತಿಯನ್ನೂ, ಸಂಘರ್ಷವನ್ನೂ ಪ್ರೋತ್ಸಾಹಿಸುತ್ತದೆ ಎಂದು ನಿರ್ಧರಿಸಬಾರದು... ಮಾತ್ರವಲ್ಲ, ಇಸ್ಲಾಮ್ ಧರ್ಮದ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಯಾವಾಗಲೂ **"ಸಲಾಮ್"** ಎಂದು ಅಭಿವಂದಿಸಿ ಶಾಂತಿಯನ್ನು ಹರಡಲು ತನ್ನ ಅನುಯಾಯಿಗಳಿಗೆ ಕಲಿಸಿದರು. ಅವರು ಮುಸ್ಲಿಮೇತರರಾದ ಯಹೂದಿಯರಿಗೂ ಕ್ರೈಸ್ತರಿಗೂ ಇತರ ಧರ್ಮದವರಿಗೂ "ಸಲಾಮ್" (ಶಾಂತಿ) ಎಂದು ಹೇಳಿ ಅಭಿವಂದಿಸುತ್ತಿದ್ದರು ಎಂದು ಅವರ ಜೀವಿತ ಮಾದರಿಯಿಂದ ತಿಳಿದುಬರುತ್ತದೆ. ಎಲ್ಲ ಮನುಷ್ಯರು ಏಕದೇವನ ಸೃಷ್ಟಿಗಳೆಂದು ಮನವರಿಕೆ ಮಾಡಿಕೊಂಡುದರಿಂದ ಅವರು ಹೀಗೆ ವರ್ತಿಸುತ್ತಿದ್ದರು. ದೇವನ ಒಂದು ಗುಣನಾಮ **"ಅಸ್ಸಲಾಮ್"** (ಶಾಂತಿಯ ಉದ್ಭವಸ್ಥಾನ) ಎಂದಾಗಿದೆ. ಅವನು ಎಲ್ಲರಿಗೂ ಶಾಂತಿಯನ್ನೂ ಭದ್ರತೆಯನ್ನೂ ಬಯಸುತ್ತಾನೆ."

**(ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿ ಮಾರ್ಗ, ಮುದ್ರಣ 2015, ಪುಟ 160 – 161)**

## ಎಲ್ಲರೊಂದಿಗೂ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ

ಅಹ್ಮದಿಯಾ ಮುಸ್ಲಿಮ್ ಸಂಘಟನೆ ಈ ಅಧ್ಯಾಪನೆಗಳನ್ನು ಪಾಲಿಸುತ್ತಾ ಜೀವಿಸುತ್ತದೆ. ಸಹಕಾರ, ಸಹಿಷ್ಣುತೆ ಮತ್ತು ಸಹಾನುಭೂತಿಯ ಈ ಪಾಠಗಳನ್ನು ನಾವು ಪ್ರೋತ್ಸಾಹಿಸುತ್ತೇವೆ ಮತ್ತು ಲೋಕದೆಲ್ಲೆಡೆ ತಲುಪಿಸುವ ಕಾರ್ಯದಲ್ಲಿ ತಲ್ಲೀನರಾಗಿದ್ದೇವೆ. ಹಝ್ರತ್ ಮುಹಮ್ಮದ್ ಪೈಗಂಬರ್[ಸ] ತೋರಿಸಿದ ಚಾರಿತ್ರಿಕ ಮತ್ತು ಅತುಲ್ಯವಾದ ಕರುಣೆ ಮತ್ತು ದಯೆಯ ಮಾದರಿಯನ್ನು ಅಹ್ಮದೀ ಮುಸ್ಲಿಮರಾದ ನಾವು ಅನುಸರಿಸುತ್ತೇವೆ. ನಮ್ಮ ಸಂಘಟನೆ ಶಾಂತಿ, ಸಾಮರಸ್ಯ ಮತ್ತು ಸಮನ್ವಯದ ಧ್ವಜವಾಹಕವಾಗಿದೆ. ನಮ್ಮ ಧ್ಯೇಯವಾಕ್ಯ **"ಎಲ್ಲರೊಂದಿಗೂ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ"** ಎಂದಾಗಿದೆ. ಇದಾಗಿದೆ ಇಸ್ಲಾಮಿನ ನಿಜಸ್ವರೂಪ. ಇವುಗಳಾಗಿವೆ ಅದರ ನೈಜ ಬೋಧನೆಗಳು. ಆದ್ದರಿಂದ ಇಸ್ಲಾಮಿನ ಪಾಠಗಳು ಸಮಾಜಕ್ಕೆ ಅಪಾಯಕಾರಿ ಅಥವಾ ಯಾವುದೇ ರೀತಿಯಲ್ಲಿ ಹಾನಿಕಾರಕ ಎಂದು ಯಾರೂ ಭಾವಿಸಬಾರದು.


**Contact Details:** Ahmadiyya Muslim Jama'at India

**Head Office**

**Noor-ul-Islam Dept.**

Qadian, Distt. Gurdaspur, Punjab, Pin:143516

**Branch Office:**

No1 3rd Cross, Wilson Garden, Bangalore-560027 | Darussalam, Near Railway Level Crossing Pandeshwar, Mangalore -575001

**www.alislam.org /www.ahmadiyyamuslimjamaat.in**

Feedback **www.ahmadiyyamuslimjamaat.in/feedback**

/IslamInIND /IslaminIND /+IslaminIndia /islaminindia /c/islaminindia

official blog: www.lightofislam.in

National Toll Free Number: 1800 3010 2131 (SAT-THU 9:00AM to 10:30PM)

MUSLIM TELEVISION AHMADIYYA INTERNATIONAL www.mta.tv

Satellite: Asia sat 7s, Degree: 105.5 East, Frequency 3760 Symbol Rate: 26000 FEC: Auto / C.Band 4 Feet Dish Antenna

EutelsatE70B,Degree:70° East,Frequency:11211,SymbolRate:5111,Polarization-HorizontalQPSK-1/2,KU Band 2 feet Dish Antenna

# ಯು.ಕೆ. ಅಹ್ಮದಿಯಾ ಜಲ್ಸಾ ಸಾಲಾನ (ವಾರ್ಷಿಕ ಸಮ್ಮೇಳನ) ಬಗ್ಗೆ ಗಣ್ಯ ಅತಿಥಿಗಳ ಅಭಿಪ್ರಾಯಗಳು

**ಬೆನಿನ್ ದೇಶದ ಒಬ್ಬ ಅತಿಥಿ ವೇಲೆಂಟೈನ್ ಹೂದೆ** ಆ ದೇಶದಲ್ಲಿ ಎಂಟು ವರ್ಷಗಳ ಕಾಲ ಸಚಿವರಾಗಿದ್ದರು. ಈಗ ಅವರು ಪಾರ್ಲಿಮೆಂಟ್ ಸದಸ್ಯರಾಗಿದ್ದಾರೆ. ಅವರು ಜಲ್ಸಕ್ಕೆ ಆಗಮಿಸಿದ್ದರು. ಅವರು ಹೇಳುತ್ತಾರೆ: ಬಹಳ ಹಣ ಖರ್ಚು ಮಾಡಿದರೂ ಸಹ ಗಳಿಸಲಾಗದಂತಹವುಗಳನ್ನು ನಾನು ಈ ಜಲ್ಸ ಸಾಲಾನದಲ್ಲಿ ಭಾಗವಹಿಸಿ ಗಳಿಸಿದೆ. ಬಹಳ ಸಾಂತ್ವನದಾಯಕ ಆಧ್ಯಾತ್ಮಿಕ ಪರಿಸರವಾಗಿತ್ತು. ನಾನು ಇಂದಿನ ತನಕ ಇಷ್ಟು ಸುವ್ಯವಸ್ಥಿತ ಸಮ್ಮೇಳನವನ್ನು ಎಲ್ಲಿಯೂ ದರ್ಶಿಸಲಿಲ್ಲ. ಇಲ್ಲಿ ವಿವಿಧ ಜನಾಂಗಗಳ, ವಿವಿಧ ವರ್ಣಗಳ, ವಿವಿಧ ವಂಶಗಳ ಅಂದಾಜು ನಲ್ವತ್ತು ಸಾವಿರ ಜನರು ಜಮಾಯಿಸಿದ್ದರು. ಹೀಗಿದ್ದರೂ ಇಲ್ಲಿ ಎಂತಹ ಶಾಂತಿಮಯ ಪರಿಸರವಿತ್ತೆಂದರೆ ಇಲ್ಲಿ ಯಾವುದೇ ಗುಲ್ಲುಗೊಂದಲಗಳಿರಲಿಲ್ಲ. ಜಗಳಗಳಿರಲಿಲ್ಲ. ಪ್ರತಿಯೊಬ್ಬರೂ ಅನ್ಯರ ಸೇವೆಯಲ್ಲಿ ನಿರತರಾಗಿದ್ದರು. ಚಿಕ್ಕವರು, ದೊಡ್ಡವರು, ವೃದ್ಧರು, ಯುವಜನರು, ಮಹಿಳೆಯರು, ಹೆಣ್ಣು ಮಕ್ಕಳು ಎಲ್ಲರೂ ಅತ್ಯಂತ ಶ್ರೇಷ್ಠ ಸ್ವಭಾವ ಗುಣದಿಂದ ಭರಿತರಾಗಿ ಅನ್ಯರಿಗೆ ಸೌಲಭ್ಯ ಒದಗಿಸಲು ನಿರತರಾಗಿದ್ದರು. ಇದು ನನಗೆ ಬಹಳ ಮಹತ್ವಪೂರ್ಣವೂ ಆಶ್ಚರ್ಯಕರವೂ ಆಗಿರುವ ವಿಷಯವಾಗಿದೆ. ಇಷ್ಟು ದೊಡ್ಡ ಸಮ್ಮೇಳನದಲ್ಲಿ ಪೋಲೀಸರಾಗಲಿ ಸೈನಿಕರಾಗಲಿ ಕಾಣಿಸಲಿಲ್ಲ. ಎಲ್ಲ ಕಡೆಗಳಲ್ಲೂ ಅಹ್ಮದಿಯಾ ಜಮಾಅತಿನ ಸ್ವಯಂಸೇವಕರು ಕಾರ್ಯನಿರತರಾಗಿದ್ದರು. ಇಂದಿನ ಕಾಲಘಟ್ಟದಲ್ಲಿ ಹೀಗೆ ನಿಸ್ವಾರ್ಥ ಸೇವೆ ಸಲ್ಲಿಸುವುದು ಸಾಧ್ಯವಾಗುವುದಾದರೂ ಹೇಗೆಂದು ನಾನು ಆಲೋಚಿಸುತ್ತಿದ್ದೆ. ಅದರ ಬಗ್ಗೆ ನಾನೇ ಹೀಗೆ ನಿಷ್ಕರ್ಷೆ ಮಾಡಿದೆ: ಇವುಗಳೆಲ್ಲ ಸಂಭವಿಸುತ್ತಿರುವುದು ಅಹ್ಮದಿಯಾ ಜಮಾಅತಿನಲ್ಲಿ ಖಿಲಾಫತ್ ನೇತೃತ್ವ ಇರುವುದರ ಕಾರಣದಿಂದಲೇ ಆಗಿದೆ. ನಾನು ಹೇಳಬಲ್ಲೆ, ಅಹ್ಮದಿಯಾ ಜಮಾಅತ್ ಲೋಕದ ಮುಂದೆ ಪ್ರಸ್ತಾಪಿಸುವ ಇಸ್ಲಾಮ್ ಮತ್ತು ಅದು ತನ್ನ ಸದಸ್ಯರಿಗೆ ನೀಡುವ ತರಬೇತಿ ಇವುಗಳ ಕಾರಣದಿಂದ ಬಹಳ ಬೇಗನೆ ಲೋಕ ಇಸ್ಲಾಮ್ ಅಹ್ಮದಿಯ್ಯತ್‌ನಲ್ಲಿ ಪ್ರವೇಶಿಸುವುದು. ಈ ಜಲ್ಸಾದ ಅನೇಕ ಸುಂದರ ನೆನಪುಗಳನ್ನು ಹೊಂದಿಕೊಂಡು ನಾನು ಲಂಡನ್‌ನಿಂದ ನನ್ನ ದೇಶಕ್ಕೆ ಮರಳುತ್ತಿದ್ದೇನೆ. ನಾನು ಇಲ್ಲಿ ಅನುಭವಿಸಿದ ಕಾಲವನ್ನು ವಿವರಿಸಲು ಅಸಾಧ್ಯವೇ ಆಗಿದೆ.

**ಬೆನಿನ್ ದೇಶದ ಇನ್ನೊಬ್ಬ ಅತಿಥಿ ಚೆವಾನೋ ಪಾಸ್ಕಲ್** ಬೆನಿನ್ ಪ್ಲಾನಿಂಗ್ ಡೆವಲಪ್‌ಮೆಂಟ್ ವಿಭಾಗದಲ್ಲಿ ಉನ್ನತಧಿಕಾರಿಯಾಗಿದ್ದಾರೆ. ಅವರು ಜಲ್ಸಾದ ಬಗ್ಗೆ ಹೇಳುತ್ತಾರೆ: ನಾನು ಅನೇಕ ಸಮ್ಮೇಳನಗಳನ್ನು ಕಂಡಿದ್ದೇನೆ. ಆದರೆ ತಮ್ಮ ಜಲ್ಸಾದ ಹಾಗೆ ಸುಸಜ್ಜಿತವಾದ ಮತ್ತು ಜಯಶಾಲಿಯಾದ ಸಮ್ಮೇಳನವನ್ನು ಎಲ್ಲಿಯೂ ಕಂಡಿಲ್ಲ. ಇಲ್ಲಿ ಕಾರ್ಯನಿರತರಾದ ಎಲ್ಲ ಕಾರ್ಯಕರ್ತರು ತಮ್ಮ ಹೊಣೆಗಾರಿಕೆಗಳನ್ನು ಬಹಳ ಚೆನ್ನಾಗಿ ಅರಿತುಕೊಂಡವರಾಗಿದ್ದರು. ಅವರು ತಮ್ಮ ಹೊಣೆಗಾರಿಕೆಗಳನ್ನು ಬಹಳ ಉತ್ತಮವಾಗಿ ನೆರವೇರಿಸುತ್ತಿದ್ದರು. ನಲ್ವತ್ತು ಸಾವಿರ ಜನರಿಗೆ ಊಟ ನೀಡುವುದು ಆಶ್ಚರ್ಯಕರವಾದ ವಿಷಯವಾಗಿದೆ. ಎಲ್ಲದಕ್ಕಿಂತ ಮಿಗಿಲಾಗಿ ಅವಿಶ್ವಸನೀಯವಾಗಿರುವುದು ಆಹಾರ ಬೇಯಿಸುವ ಎಲ್ಲರೂ, ಆಹಾರ ಉಣಬಡಿಸುವ ಎಲ್ಲರೂ ಸ್ವಯಂಸೇವಕರಾಗಿದ್ದರು ಎಂಬುದಾಗಿದೆ. ಲೋಕದಲ್ಲಿರುವ ಎಲ್ಲರೂ ಇಂತಹ ಮನೋಭಾವದಿಂದ ಕಾರ್ಯನಿರತರಾದರೆ, ನಾನು ದೃಢವಾಗಿ ಹೇಳಬಲ್ಲೆನು, ಲೋಕದಿಂದ ಯುದ್ಧಗಳೂ ಸಂಘರ್ಷಗಳೂ ಕೊನೆಗೊಳ್ಳುವುವು. ಮಾನವರ ಸಮಸ್ಯೆಗಳು ಕೊನೆಗೊಳ್ಳುವುವು. ನಾನು ಅಹ್ಮದಿಯಾ ಜಮಾಅತನ್ನು ಪ್ರಶಂಸಿಸದಿರಲಾರೆನು. ಈ ಜಮಾಅತಿನ ಮಕ್ಕಳು, ದೊಡ್ಡವರು, ವೃದ್ಧರು, ಯುವಕರು, ಮಹಿಳೆಯರು ಎಲ್ಲರೂ ಸುಸಂಘಟಿತರೂ ಸಭ್ಯರೂ ಆಗಿದ್ದಾರೆ.

**ಹೈಟಿ ದೇಶದ ಅಧ್ಯಕ್ಷರ ಪ್ರತಿನಿಧಿ ಜೋಸೆಫ್ ಪೀರೇ ಹೇಳುತ್ತಾರೆ:** ಈ ಜಲ್ಸಾ ನನ್ನ ಜೀವಿತದ ಅತ್ಯುತ್ತಮ ಅನುಭವವಾಗಿತ್ತು. ಅದನ್ನು ನಾನೆಂದೂ ವಿಸ್ಮರಿಸಲಾರೆನು. ಕಾರ್ಯಕರ್ತರ ಅಪ್ರತಿಮ ಸೇವಾ ಮನೋಭಾವ ನನ್ನ ಕಣ್ಣು ತೆರೆಯಿಸಿತು. ಮಾತ್ರವಲ್ಲ ಇಸ್ಲಾಮಿನ ಬಗ್ಗೆ ನನ್ನ ಯೋಚನೆಗಳನ್ನು ಸಂಪೂರ್ಣವಾಗಿ ಬದಲಾಯಿಸಿತು.

**ಐವರಿಕೋಸ್ಟ್ ದೇಶದ ಸುಪ್ರೀಂ ಕೋರ್ಟಿನ ಒಬ್ಬ ನ್ಯಾಯಾಧೀಶ ತರ್ಮ್‌ರೀಲೀ** ಎಂಬವರು ಆಗಮಿಸಿದ್ದರು. ಅವರು ಐವರಿಕೋಸ್ಟ್ ನೇಶನಲ್ ಕೋನ್‌ಸ್ಟಿಟ್ಯೂಶನ್ ಕೌನ್ಸಿಲ್‌ನ ಸಲಹೆಗಾರರೂ ಆಗಿದ್ದಾರೆ. ಅವರು ಹೇಳುತ್ತಾರೆ: ನಾನು ಮುಸ್ಲಿಮನಾಗಿದ್ದೇನೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ನಾನು ವಿವಿಧ ಇಸ್ಲಾಮೀ ಪಂಗಡಗಳ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಇದ್ದೇನೆ. ಆದರೆ ಕಳೆದ ಇಪ್ಪತ್ತು ವರ್ಷಗಳಲ್ಲಿ ಇಸ್ಲಾಮಿನ ಬಗ್ಗೆ ಗಳಿಸಲಾಗದ ಜ್ಞಾನ ಈ ಮೂರು ದಿನಗಳಲ್ಲಿ ನನಗೆ ಲಭಿಸಿದೆ. ಈ ಮೂರು ದಿನಗಳಲ್ಲಿ ಆಧ್ಯಾತ್ಮಿಕವಾಗಿ ನನಗೆ ಲಭಿಸಿದ ಅಭಿವೃದ್ಧಿ ಕಳೆದ ಇಪ್ಪತ್ತು ವರ್ಷಗಳಲ್ಲಿ ನನಗೆ ಲಭಿಸಿರಲಿಲ್ಲ. ಅಹ್ಮದಿಯೇತರ ಮತಪಂಡಿತರ ಬಳಿ ಏನೂ ಇಲ್ಲ. ಇಸ್ಲಾಮ್ ಬಗ್ಗೆ ವಾಸ್ತವಿಕ ಜ್ಞಾನ ಗಳಿಸಲು ಬಯಸುವವರು ಅಹ್ಮದಿಯಾ ಜಮಾಅತಿನ ಬಳಿಗೆ ಬರಬೇಕು.

**ಜಪಾನ್‌ನಿಂದ ಆಗಮಿಸಿದ ಪ್ರತಿನಿಧಿ ಸಂಘದಲ್ಲಿದ್ದ ಒಬ್ಬ ಮಹಿಳೆ ಯೂಕೀಕೋ ಕೋಂಡೋ** ಹೇಳುತ್ತಾರೆ: ಖಲೀಫರು ಮಹಿಳೆಯರನ್ನು ಸಂಬೋಧಿಸಿ ಮಾಡಿದ ಭಾಷಣದಿಂದ ತಿಳಿಯುವುದೇನೆಂದರೆ, ಅಹ್ಮದಿಯಾ ಜಮಾಅತಿನ ಇಮಾಮರು ನೀಡುವ ಉಪದೇಶಗಳ ಸಂರಕ್ಷಣೆಯ ಅಡಿಯಲ್ಲಿ ಅಹ್ಮದಿಯಾ ಜಮಾಅತ್ ಅಭಿವೃದ್ಧಿ ಗಳಿಸುತ್ತಿದೆ. ಕುಟುಂಬ ಸಂಬಂಧಗಳನ್ನು ಬಲಪಡಿಸುವುದು ಮತ್ತು ಯಾಂತ್ರಿಕ ಲೋಕದಿಂದ ಹೊರಗೆ ಬರುವುದು ಈಗ ಲೋಕಕ್ಕೆ ಆವಶ್ಯಕವಾಗಿದೆ. ನಾವು ಯೋಚಿಸುತ್ತಿದ್ದೆವು, ಅಹ್ಮದಿಯಾ ಜಮಾಅತಿನ ಭಾವನೆ ಮತ್ತು ಉತ್ಸಾಹ ನೆಲೆ ನಿಲ್ಲಿಸುವ ಶಕ್ತಿ ಯಾವುದೆಂದು. ಈ ಪ್ರಶ್ನೆ ನಮ್ಮ ಮನಸ್ಸಿನಲ್ಲಿ ತಿರುಗುತ್ತಾ ಇತ್ತು. ಆದರೆ ಜಲ್ಸಾದ ಪ್ರಥಮ ದಿನವೇ ಪ್ರಾರ್ಥನೆಯಲ್ಲಿ ಸೇರಿಕೊಂಡು ಮತ್ತು ಅಹ್ಮದಿಯಾ ಜಮಾಅತಿನ ಇಮಾಮರ ಉಪದೇಶಗಳನ್ನು ಆಲಿಸಿಕೊಂಡು ನನಗೆ ದೃಢವಾಯಿತು, ಅಹ್ಮದಿಯಾ ಜಮಾಅತ್ ಮತ್ತು ಲೋಕದ ಮಧ್ಯೆ ಇರುವ ವ್ಯತ್ಯಾಸ ಪ್ರಾರ್ಥನೆಯೇ ಆಗಿದೆ. ಜಲ್ಸಾದಲ್ಲಿ ನಮಗೆ ಪದೇ ಪದೇ ಪ್ರಾರ್ಥಿಸುವ ಸಂದರ್ಭ ಲಭಿಸಿತು. ಪ್ರಾರ್ಥನೆಯ ನಂತರ ನಾವು ನೋಡಿದೆವು, ನಮ್ಮ ಹೃದಯ ಭಾರಗಳು ಹಗುರವಾದುವು ಮತ್ತು ನಮ್ಮ ಆತ್ಮಕ್ಕೆ ಒಂದು ತಾಜಾತನ ಲಭಿಸಿತು.

**ಜಪಾನಿನಿಂದ ಅತಿಥಿಯಾಗಿ ಆಗಮಿಸಿದ ಬೌದ್ಧ ಮತದ**

**ಪ್ರಧಾನ ಪುರೋಹಿತರಲ್ಲಿ ಒಬ್ಬರಾದ ನಶೀದಾ** ಹೇಳುತ್ತಾರೆ: ಬೈಅತ್ (ನಿಷ್ಠೆಯ ಪ್ರತಿಜ್ಞೆ) ಸಮಾರಂಭವನ್ನು ನೋಡಿದಾಗ ನನಗೆ ತೋರಿತು– ನಮಗೊಬ್ಬ ದೇವನಿದ್ದಾನೆ, ಅವನೆದುರಿಗೆ ಬಾಗಿದಾಗ ಹೃದಯಕ್ಕೆ ಸಾಂತ್ವನ ಸಿಗುತ್ತದೆ ಮತ್ತು ಪಾಪ ತೊಳೆಯಲ್ಪಡುತ್ತದೆ ಹಾಗೂ ಎಲ್ಲ ಜನರು ಭಿನ್ನಾಭಿಪ್ರಾಯಗಳನ್ನು ಕೊನೆಗೊಳಿಸಿ ಒಂದಾಗಲು ಇಚ್ಛಿಸುವರಾದರೆ ಅವರು ಹಾಗೆ ಒಂದಾಗಲು ಸಾಧ್ಯವಿದೆ ಎಂದು. ಬೈಅತ್ ಸಮಾರಂಭದಲ್ಲಿ ಭಾಗವಹಿಸಿ ನಮ್ಮ ಕಣ್ಣುಗಳಿಂದ ತಾನಾಗಿ ಕಣ್ಣೀರು ಸುರಿಯಿತು. ನಾವು ಸಹ ಸಾಷ್ಟಾಂಗ ಪ್ರಣಾಮ ಮಾಡಿದೆವು. ವಾಸ್ತವಿಕವಾಗಿಯೂ ನಮ್ಮ ಪಾಪಗಳು ತೊಳೆಯಲ್ಪಡುತ್ತಿವೆ ಎಂದು ನಮಗೆ ಭಾಸವಾಯಿತು.

**ಇಂಡೋನೇಶಿಯಾದ ಒಬ್ಬ ಅತಿಥಿ ಮಹಿಳೆ** ಮುಸ್ಲಿಮ್ ಮಹಿಳೆಯರ ಒಂದು ಸಂಘಟನೆಯ ಮಾರ್ಗದರ್ಶಕಿಯಾಗಿದ್ದಾರೆ. ಅವರು ಹೇಳುತ್ತಾರೆ: ಅಹ್ಮದಿಯಾ ಜಮಾಅತ್‌ನವರು ಕುಫ್ರ್ ಮತ್ತು ಪಥಭ್ರಷ್ಟತೆಯಲ್ಲಿ ಮುಳುಗಿ ಅನ್ಯರನ್ನು ಪಥಭ್ರಷ್ಟರನ್ನಾಗಿ ಮಾಡುತ್ತಿದ್ದಾರೆ ಎಂದು ಜನರು ಹೇಳುತ್ತಾರೆ. ಆದರೆ ವಾಸ್ತವಿಕವಾಗಿ ಈ ಜಮಾಅತಿನವರೇ ನೈಜ ಮುಸ್ಲಿಮರಾಗಿದ್ದಾರೆ. ಈ ಜಮಾಅತ್‌ನವರು ನಮಾಝ್ ನಿಷ್ಠೆಯಿಂದ ಅನುಷ್ಠಿಸುತ್ತಿದ್ದಾರೆ. ಹುಖೂಖುಲ್ಲಾಹ್ ಮತ್ತು ಹುಖೂಖುಲ್ ಇಬಾದನ್ನು (ದೇವನಿಗೆ ಮತ್ತು ದೇವ ಸೃಷ್ಟಿಗಳಿಗೆ ಮಾಡಬೇಕಾದ ಸೇವೆ) ಸಹ ಬಹಳ ಉತ್ತಮವಾಗಿ ಈಡೇರಿಸುತ್ತಿದ್ದಾರೆ. ಒಬ್ಬರನ್ನೊಬ್ಬರು ಗೌರವಿಸುತ್ತಿದ್ದಾರೆ. ಮಾತನಾಡುವ ಮೊದಲು ಅಸ್ಸಲಾಮು ಅಲೈಕುಮ್ ಹೇಳುತ್ತಾರೆ. ಪ್ರತಿಯೊಂದು ಕಾರ್ಯಕ್ರಮದಲ್ಲಿ ಸುವ್ಯವಸ್ಥೆ ಇದೆ. ಬಹಳ ವಿಧೇಯರಾಗಿ ಅನುಸರಣೆ ಮಾಡುತ್ತಿದ್ದಾರೆ.

**ಇಂಡೋನೇಶಿಯಾದಿಂದ ಆಗಮಿಸಿದ ಒಬ್ಬ ಅಹ್ಮದಿಯೇತರ ಮುಸ್ಲಿಮ್ ವಿದ್ವಾಂಸ,** ಅಲ್ಲಿನ ಒಂದು ಯುನಿವರ್ಸಿಟಿಯಲ್ಲಿ ಫಿಲಾಸಫಿ ವಿಭಾಗದ ಮುಖ್ಯಸ್ಥರೂ ಆಗಿದ್ದಾರೆ. ಅವರು ಹೇಳುತ್ತಾರೆ: ಇದೇ ಸತ್ಯವಾದ ಇಸ್ಲಾಮ್ ಆಗಿದೆ. ಇದೇ ವಾಸ್ತವಿಕ ಭ್ರಾತೃತ್ವ, ಅಹ್ಮದಿಯಾ ಜಮಾಅತ್ ಏಕಮಾತ್ರ ಜಾಗತಿಕ ಮುಸ್ಲಿಮ್ ಸಂಘಟನೆಯಾಗಿದೆ. ಇಂತಹ ಸಂಘಟನೆ ಬೇರೊಂದಿಲ್ಲ. ಅಹ್ಮದಿಯಾ ಜಮಾಅತಿನ ಧ್ಯೇಯ ವಚನ ಅತ್ಯಂತ ಶ್ರೇಷ್ಠವಾಗಿದೆ. ಅದು ಪ್ರತಿಯೊಂದು ಹೃದಯದಲ್ಲಿ ಮೊಳೆಯ ಹಾಗೆ ನಾಟುತ್ತದೆ.

**ಗಿನಿಕನಾಕರಿ ದೇಶದ ಒಂದು ಪ್ರಾಂತ್ಯದ ಗವರ್ನರ್ ಸಾರಂಗ್ ಬೇಕ್ ಕಮಾರಾ** ಎಂಬ ಮಹಿಳೆ ಹೇಳುತ್ತಾರೆ: ಅಹ್ಮದಿಯಾ ಜಮಾಅತ್ ಒಬ್ಬ ಇಮಾಮರ ಸಂಜ್ಞೆಗೆ ಅನುಸಾರವಾಗಿ ಕಾರ್ಯನಿರತವಾಗಿರುವ ಒಂದು ಸುವ್ಯವಸ್ಥಿತ ಜಮಾಅತ್ ಆಗಿದೆ ಎಂದು ನಾನು ಮನವರಿಕೆ ಮಾಡಿದ್ದೇನೆ. ಇದು ಇಸ್ಲಾಮಿನ ಸುಂದರ ಉಪದೇಶಗಳ ಪ್ರಕಾರವೇ ಆಗಿದೆ. ಈ ಉಪದೇಶಗಳನ್ನು ಅನುಷ್ಠಾನಕ್ಕೆ ತಂದು ನಾವು ಒಂದು ಜಮಾಅತ್ ಆಗಬಲ್ಲೆವು. ನಮಗೋಸ್ಕರ ಪ್ರಾರ್ಥಿಸಲು ಅಪೇಕ್ಷಿಸುತ್ತೇನೆ. ನಮ್ಮ ದೇಶದಲ್ಲಿ ಅಲ್ಲಾಹನು ಶಾಂತಿಯನ್ನು ಸ್ಥಾಪಿಸುವವನಾಗಲಿ. ನೈಜ ಇಸ್ಲಾಮ್ ಅಲ್ಲಿ ಸಹ ಸ್ಥಾಪಿಸಲ್ಪಡಲಿ.

**ಗೋಟೆಮಾಲಾದ ಒಬ್ಬ ಪತ್ರಕರ್ತೆ ಗ್ಲಾಡಿಸ್ ರಮೀ ರೇಝ್** ಹೇಳುತ್ತಾರೆ: ಯು.ಕೆ. ಅಹ್ಮದಿಯಾ ಜಮಾಅತ್ ಸಮ್ಮೇಳನದಲ್ಲಿ ಭಾಗವಹಿಸಿದ ನನಗೆ ಇಸ್ಲಾಮಿನ ವಾಸ್ತವಿಕ ಉಪದೇಶಗಳ ಬಗ್ಗೆ ತಿಳಿಯಿತು. ಈ ಶಾಂತಿ ಭರಿತ ಇಸ್ಲಾಮೀ ಪರಿಸರದಿಂದ ನಾನು ಅಪ್ರತಿಮವಾಗಿ ಪ್ರಭಾವಿತಳಾದೆನು. ಅಹ್ಮದಿಯಾ ಜಮಾಅತಿನ ಸದಸ್ಯರು ವಾಸ್ತವಿಕ ಶಾಂತಿ ಮತ್ತು ಸಮಾಧಾನವನ್ನು ಕರ್ಮರೂಪದಲ್ಲಿ ಸ್ಥಾಪಿಸುತ್ತಿದ್ದಾರೆ ಎಂದು ನನಗೆ ದೃಢವಾಗಿ ತಿಳಿಯಿತು.

**ಮೆಕ್ಸಿಕೋ ದೇಶದ ಹೊಸದಾಗಿ ಬೈಅತ್ ಮಾಡಿದ ಮಹಿಳೆ ಎಲಿಝಬೆತ್ ಪೆರೇರಾ** ಹೇಳುತ್ತಾರೆ: ಇಸ್ಲಾಮ್ ಶಾಂತಿಯ ಧರ್ಮವೆಂದು ನನಗೆ ಮನವರಿಕೆಯಾಗಿದೆ. ನನ್ನ ಮನೆಯವರು ನನ್ನನ್ನು ಇಲ್ಲಿಗೆ ಆಗಮಿಸುವುದನ್ನು ತಡೆದು ನನ್ನನ್ನು ಹೆದರಿಸುತ್ತಿದ್ದರು. ಆದರೆ ನಾನು ಇಲ್ಲಿಗೆ ಬಂದ ನಂತರ ಅವರು ಹೇಳಿದುದಕ್ಕೆ ತದ್ವಿರುದ್ಧವಾಗಿ ಇಲ್ಲಿ ನಾನು ಕಂಡೆನು. ವಿಮಾನ ನಿಲ್ದಾಣದಿಂದ ನಮ್ಮನ್ನು ಸ್ವಾಗತಿಸುವುದಕ್ಕೆ ಮೊದಲುಗೊಂಡು ಜಲ್ಸಾ ಸಾಲಾನದ ಮೂರು ದಿನಗಳಲ್ಲಿ ಸ್ವಯಂ ಸೇವಕರು ಪ್ರಕಟಿಸಿದ ಮನೋಭಾವ ಮತ್ತು ವರ್ತನೆಯನ್ನು ಕಂಡು ನಾನು ಬಹಳ ಪ್ರಭಾವಿತೆಯಾದೆನು.

**ಮೆಕ್ಸಿಕೋದ ಇನ್ನೊಬ್ಬ ಹೊಸದಾಗಿ ಬೈಅತ್ ಮಾಡಿದ ಮಹಿಳೆ ಲೋರಾ ಬ್ರೆತಿಸ್ ಸೋವೇರಾನೂಸ್** ಹೇಳುತ್ತಾರೆ: ಸ್ವಯಂ ಸೇವಕರಿಗೆ ಕೆಲವು ಸಾರಿ ನಾನು ಹೇಳುವುದು ಅರ್ಥವಾಗುತ್ತಿರಲಿಲ್ಲ. ಆದರೆ ಭಾಷೆಯ ವ್ಯತ್ಯಾಸ ಅಹ್ಮದಿಯರ ಪರಸ್ಪರ ಬಾಂಧವ್ಯದಲ್ಲಿ ತಡೆಯಾಗಲಿಲ್ಲ. ಅಲ್ಲಾಹನ ಪ್ರೀತಿ ನಮ್ಮನ್ನು ಒಂದಾಗಿಸಿದೆ. ನಾನು ನನ್ನ ಮನೆಯವರೊಂದಿಗೆ ಇರುವ ಹಾಗೆಯೇ ಭಾವಿಸುತ್ತಿದ್ದೇನೆ. ಖಲೀಫರ ಭಾಷಣ ಆಲಿಸಿ ನಾನು ನನ್ನನ್ನು ಪರಿಶೋಧಿಸಿದೆ, ನನ್ನಲ್ಲಿ ಯಾವ ಬಲಹೀನತೆಗಳಿವೆ ಎಂದು. ಈಗ ನನಗೆ ದೃಢವಾಗಿದೆ – ನಾನು ಸರಿಯಾದ ಸ್ಥಳದಲ್ಲಿದ್ದೇನೆ ಎಂದು. ಅಲ್ಲಾಹನು ನನಗೆ ಸನ್ಮಾರ್ಗ ತೋರಿಸಿರುವನು. ನನ್ನ ಹೃತ್ಪೂರ್ವಕ ಆಶೆ ಏನೆಂದರೆ, ನನ್ನ ವಿಶ್ವಾಸ ದೃಢವಾದ ಹಾಗೆಯೇ ನನ್ನ ಮನೆಯವರು ಸಹ ಇಸ್ಲಾಮನ್ನು ಅರಿತುಕೊಳ್ಳಲಿ ಮತ್ತು ಅವರ ವಿಶ್ವಾಸ ದೃಢವಾಗಲಿ.

**ಕೆಮರೂನ್ ದೇಶದ ಮುಹಮ್ಮದ್ ಮುಬಾಹೂ ಅಝೀಝ್** ಹೇಳುತ್ತಾರೆ: ಖಲೀಫರು ಮಹಿಳೆಯರನ್ನು ಸಂಬೋಧಿಸಿ ಮಾಡಿದ ಭಾಷಣ ನಮ್ಮ ಹೊಸ ಪೀಳಿಗೆಯ ತರಬೇತಿಗೆ ಬಹಳ ಮಹತ್ವಪೂರ್ಣವಾಗಿದೆ. ಸೋಶಿಯಲ್ ಮೀಡಿಯಾವನ್ನು ಹೇಗೆ ಬಳಸಬೇಕು ಎಂಬುದು ಈ ಕಾಲಘಟ್ಟದಲ್ಲಿ ಮುಖ್ಯ ವಿಷಯವಾಗಿದೆ. ನಾವು ನಮ್ಮ ಮಕ್ಕಳನ್ನು ಆ ಪರಿಸರದಿಂದ ರಕ್ಷಿಸದಿದ್ದರೆ ಅವರು ಇಸ್ಲಾಮ್ ಮತ್ತು ಮಾನವೀಯತೆಯಿಂದ ಬಹಳ ದೂರ ಸರಿದು ಹೋಗುವರು. ನಾವು ಈ ಉಪದೇಶಗಳನ್ನು ಮೈಗೂಡಿಸಬೇಕು. ಫಹಶಾ (ಅಶ್ಲೀಲತೆ) ಬಗ್ಗೆ ಹುಝೂರ್ ನೀಡಿದ ವ್ಯಾಖ್ಯಾನ ಬಹಳ ಪ್ರಭಾವಶಾಲಿಯಾಗಿದೆ. ನಾವು ಖಲೀಫರ ಈ ವ್ಯಾಖ್ಯಾನವನ್ನು ಮನವರಿಕೆ ಮಾಡಿಕೊಂಡು ಅನುಷ್ಠಾನಕ್ಕೆ ತರುವವರಾದರೆ ನಾವು ನಮ್ಮ ಮಕ್ಕಳಿಗೆ ಪರಿಶುದ್ಧ ಪರಿಸರ ಒದಗಿಸಿಕೊಡಬಲ್ಲೆವು. ಫಹಶಾ ಶಬ್ದದ ವ್ಯಾಖ್ಯಾನ ನನ್ನಲ್ಲಿ ನಡುಕವನ್ನು ಉಂಟುಮಾಡಿತು. ಅವರು ವಿವರಿಸಿದುದು ಅತ್ಯಂತ ಉತ್ತಮ ಅಂಶಗಳನ್ನಾಗಿವೆ. ಅವುಗಳನ್ನು ನಾನು ನನ್ನ ಜೀವಿತದ ಭಾಗಗಳನ್ನಾಗಿ ಮಾಡುವೆನು.

**ಫಿಲಿಫೈನ್‌ನಿಂದ ಜಾರ್ಜ್ ಕರೇನೋ** ಆಗಮಿಸಿದ್ದರು. ಅವರು ಟಿ.ವಿ. ಚ್ಯಾನಲ್ ABS-CBN ಎಂಬ ಪ್ರಸಿದ್ಧ ಮಾರ್ನಿಂಗ್ ಶೋ ದ ಆತಿಥೇಯರಾಗಿದ್ದಾರೆ. ಅವರು ಹೇಳುತ್ತಾರೆ: ವಿವಿಧ ದೇಶಗಳ, ವಿವಿಧ ವರ್ಣ ಮತ್ತು ವಂಶಗಳ ಜನರು ಇಷ್ಟು ಬೃಹತ್ ಸಂಖ್ಯೆಯಲ್ಲಿ ಜಮಾಯಿಸಿದುದನ್ನು ನಾನು ನನ್ನ ಜೀವಿತದಲ್ಲಿ ಪ್ರಥಮ ಸಲ ಕಂಡೆನು. ಒಬ್ಬ ಪತ್ರಕರ್ತನಾಗಿ ನಾನು ಸಾವಿರಾರು ಸಮ್ಮೇಳನಗಳನ್ನು ನೋಡುವ ಸಂದರ್ಭ ನನಗೆ ಲಭಿಸಿದೆ. ಆದರೆ ಎಷ್ಟು

ಶಾಂತತೆಯಿಂದಲೂ ಸುವ್ಯವಸ್ಥೆಯಿಂದಲೂ ಯು.ಕೆ.ಯ ಜಲ್ಸಾ ಸಾಲಾನ ಜರಗಿದೆಯೋ ಅದರ ಉದಾಹರಣೆ ಇದರ ಮೊದಲು ನಾನು ಎಂದೂ ಎಲ್ಲಿಯೂ ಕಾಣಲಿಲ್ಲ. ಈ ಜಲ್ಸಾ ನನ್ನ ಮನೋಭಾವವನ್ನು ಮೊದಲಿಗಿಂತ ಹೆಚ್ಚು ವಿಶಾಲಗೊಳಿಸಿದೆ. ನನಗೆ ಹೊಸದಾದೊಂದು ದೃಷ್ಟಿಕೋನವನ್ನು ನೀಡಿದೆ. ನನಗೆ ಈ ಜಲ್ಸಾದ ಮೂಲಕ ಒಂದು ಹೊಸ ಸಂಸ್ಕೃತಿಯನ್ನು ದರ್ಶಿಸಲು ಸಂದರ್ಭ ಲಭಿಸಿದೆ. ಅದು ಫಿಲಿಪೈನ್ಸ್‌ನ ಸಂಸ್ಕೃತಿಗಿಂತ ವಿಭಿನ್ನವಾಗಿದೆ.

ಕೆನಡದಿಂದ ಅಲ್ಲಿನ ಮೂಲ ನಿವಾಸಿಗಳ ಒಂದು ಪ್ರತಿನಿಧಿ ಸಂಘ ಆಗಮಿಸಿತ್ತು. ಅವರು ತಮ್ಮ ತಲೆಗಳ ಮೇಲೆ ತಮ್ಮ ಸಂಪ್ರದಾಯಿಕ ದೊಡ್ಡ ಕಿರೀಟ ಧರಿಸಿದ್ದರು. ಅವರ ಮೂರು ಬುಡಕಟ್ಟುಗಳ ಮುಖ್ಯಸ್ಥರು ಮತ್ತು ಒಬ್ಬ ಯುವ ನಾಯಕ ಆಗಮಿಸಿದ್ದರು. ಅವರ **ಯುವ ನಾಯಕ ಮ್ಯಾಕ್ಸ್ ಫೇನಡೇ** ಹೇಳುತ್ತಾರೆ: ಖುದ್ದಾಮ್‌ಗಳ ಸ್ವಯಂಸೇವೆ ನಮ್ಮನ್ನು ಬಹಳ ಪ್ರಭಾವಿಸಿತು. ನಾವು ಮರಳಿ ಹೋಗಿ ಬೇಗನೆ ಅಹ್ಮದೀ ಯುವಕರ ಮತ್ತು ಫರ್ಸ್ಟ್‌ನೇಶನ್ ಯುವಕರ ಜೊತೆಗೂಡಿದ ಕಾರ್ಯಕ್ರಮಗಳನ್ನು ನಡೆಸುವೆವು. ಅಹ್ಮದೀ ಯುವಕರಲ್ಲಿರುವಂತಹ ಶಿಸ್ತು ಬದ್ಧತೆ ನಾನು ಯಾವುದೇ ಜನಾಂಗದಲ್ಲಿ ಕಂಡಿಲ್ಲ. **ಮೂಲನಿವಾಸಿಗಳ ಒಬ್ಬ ಚೀಫ್ (ಮುಖ್ಯಸ್ಥ) ರೋಗೋ ರೇಗ್‌ಮ್ಯಾನ್** ಹೇಳಿದರು: ನನಗೆ ಸಿಗರೇಟು ಬಹಳ ಸೇದುವ ಅಭ್ಯಾಸವಿದೆ. ಹೊಗೆಸೊಪ್ಪು ಸೇವನೆ ನಮ್ಮ ಧರ್ಮದ ಒಂದು ಭಾಗವಾಗಿದೆ. ಅದು ಆಧ್ಯಾತ್ಮಿಕತೆಗೆ ಒಳ್ಳೆಯದೆಂದು ಭಾವಿಸಲಾಗುತ್ತಿದೆ. ಆದರೆ ಖಲೀಫರು ಜಮಾಅತಿನ ಜನರು ಸಿಗರೇಟು ಸೇವನೆ ಬಿಡಬೇಕೆಂದು ಉಪದೇಶ ನೀಡಿದಾಗ ನಾನು ಜಲ್ಸಾದ ದಿನಗಳಲ್ಲಿ ಸಿಗರೇಟು ಸೇವನೆ ಬಿಡುವೆನೆಂದು ನಿರ್ಧರಿಸಿದೆ. ಅದನ್ನು ಪಾಲನೆ ಮಾಡಿದೆ. ಖಲೀಫರ ಭಾಷಣ ಆಲಿಸಿದ ನಂತರ ನಾನು ಭಾವಿಸುವುದೇನೆಂದರೆ, ತಾವು ಭಾಷಣದಲ್ಲಿ ವಿವರಿಸಿದಂತೆ ಇಸ್ಲಾಮಿನ ಉಪದೇಶ ಪ್ರೀತಿಸುವುದು ಮತ್ತು ಶಾಂತಿಯನ್ನು ಹರಡುವುದು, ಮಾನವರೊಂದಿಗೆ ಸಹಾನುಭೂತಿ ಹೊಂದುವುದು ಆಗಿದ್ದರೆ ನಾನು ಖಂಡಿತವಾಗಿ ಒಬ್ಬ ಅಹ್ಮದೀ ಮುಸ್ಲಿಮನಾಗಲು ಇಚ್ಛಿಸುವೆನು.

**ಫರ್ಸ್ಟ್ ನೇಶನ್‌ನ ಒಬ್ಬ ಪ್ರಮುಖ ಲೇಗ್ ರಾವ್‌ಚಾಯಿಲ್** ಹೇಳುತ್ತಾರೆ: ನಮಗೆ ಇಲ್ಲಿ ಲಭಿಸಿದ ಪ್ರೀತಿ ಮತ್ತು ಗೌರವ ನಮ್ಮ ಪುರಾತನ ತತ್ವಗಳಿಗೆ ಸಮಾನವಾಗಿವೆ. ನಮ್ಮಲ್ಲಿ ಪರಸ್ಪರ ಪ್ರೀತಿ ಮತ್ತು ಭ್ರಾತೃತ್ವದ ಭಾವನೆ ಇತ್ತು. ಇಲ್ಲಿ ನಮ್ಮ ಎಲ್ಲ ಆವಶ್ಯಕತೆಗಳನ್ನು ಈಡೇರಿಸಲಾಯಿತು. ನಾನು ಅಹ್ಮದಿಯಾ ಜಮಾಅತಿನಲ್ಲಿ ನೋಡಿರುವುದೇನೆಂದರೆ, ಈ ಜಮಾಅತಿನ ಜನರು ಪರಸ್ಪರ ಜಗಳ ಮಾಡುವುದಿಲ್ಲ, ವಾಗ್ವಾದ ಮಾಡುವುದಿಲ್ಲ ಮತ್ತು ಒಬ್ಬರಿನ್ನೊಬ್ಬರ ವಿರುದ್ಧ ಮಾತನಾಡುವುದಿಲ್ಲ.

**ಜಮೈಕಾ ದೇಶದ ಒಬ್ಬ ಅಹ್ಮದಿಯೇತರ ಮಹಿಳೆ ಅವೇಡಾ ಎಲಿಝಬೆತ್** ಹೇಳುತ್ತಾರೆ: ಪುರುಷರು ಮತ್ತು ಮಹಿಳೆಯರು ಬೇರೆ ಬೇರೆಯಾಗಿ ಕುಳಿತಿದ್ದುದು ನನಗೆ ಬಹಳ ಇಷ್ಟಕರವಾಯಿತು. ಈ ಕಾರಣದಿಂದ ಜನರ ಗಮನ ಬೇರೆ ಕಡೆಗೆ ಹರಿಯದಂತಾಗುತ್ತದೆ. ಜನರು ಇಸ್ಲಾಮ್ ಮತ್ತು ಇಬಾದತ್ ಬಗ್ಗೆ ಹೆಚ್ಚು ಗಮನ ಹರಿಸುವಂತಾಗುತ್ತದೆ.

**ಇಟಲಿಯ ಓರ್ವ ಪ್ರೊಫೆಸರ್ ರಿಫಾಯ ಲಾಝೀ** ಒಂದು ಸ್ಟಡೀ ಸೆಂಟರಿನ ಡೈರೆಕ್ಟರ್ ಆಗಿದ್ದಾರೆ ಅವರು ಹೇಳಿದರು: ಬೈಅತ್ (ನಿಷ್ಠೆಯ ಪ್ರತಿಜ್ಞೆ) ಮಾಡುವ ಸಂದರ್ಭದಲ್ಲಿ ಅಹ್ಮದಿಯರ ವಿಶ್ವಾಸದ ಸ್ಥಿತಿ ಅನ್ಯರಿಗೂ ಮನವರಿಕೆಯಾಗುವ ರೀತಿಯಲ್ಲಿತ್ತು. ನಾನು ಮನಶ್ಶಾಸ್ತ್ರ ಅಧ್ಯಯನ ಮಾಡಿದ್ದೇನೆ. ನನಗೆ ಮನುಷ್ಯನ ಚಲನ ವಲನ ಮತ್ತು ವರ್ತನೆಯಿಂದ ತಿಳಿಯುತ್ತದೆ, ಈ ವ್ಯಕ್ತಿ ತನ್ನ ವಾದದ ಬಗ್ಗೆ ಎಷ್ಟು ನಿಷ್ಠಾವಂತನಾಗಿದ್ದಾನೆಂದು. ಅಹ್ಮದಿಯರನ್ನು ನೋಡಿದಾಗ ನನಗೆ ತಿಳಿಯಿತು, ನಿಮ್ಮ ವಿಶ್ವಾಸದ ಮಟ್ಟ ಬಹಳ ಉನ್ನತವಾಗಿದೆ ಎಂದು.

**ಒಬ್ಬ ಅತಿಥಿ ಮಹಿಳೆ ಲೆನಟ್ ಓಮೆಲಿಯಿನ್** ಹೇಳುತ್ತಾರೆ: ನನಗೆ ಈ ವರ್ಷ ಪ್ರಥಮ ಬಾರಿ ಜಲ್ಸಾದಲ್ಲಿ ಭಾಗವಹಿಸುವ ಸಂದರ್ಭ ಲಭಿಸಿದೆ. ನನ್ನ ಯೋಚನೆ ಏನೆಂದರೆ ಅಲ್ಲಾಹನ ಬಗ್ಗೆ ಬಹಳ ಕಡಿಮೆ ಜ್ಞಾನ ಹೊಂದಿದವನು ಜಲ್ಸಾದಲ್ಲಿ ಭಾಗವಹಿಸಿದರೆ ಜಲ್ಸಾದ ಕೊನೆಗೆ ಜ್ಞಾನದ ಸಮುದ್ರವನ್ನು ತೆಗೆದುಕೊಂಡು ಹೋಗುವನು. ♦


## ಯುಗರಶ್ಮಿಗೆ ಚಂದಾದಾರರಾಗಿರಿ

ವಾರ್ಷಿಕ ಚಂದಾ: **ರೂ. 60/–**

ಅಂಚೆ ಮೂಲಕ : **ರೂ. 70/–**

**ಸಂಪರ್ಕಿಸಿರಿ : 99 00 410 789**


**ಯುಗರಶ್ಮಿಗೆ ಧನಸಹಾಯ ನೀಡಿದ ಉದಾರಮತಿಗಳು**

ಜನಾಬ್ ಮುಹಮ್ಮದ್ ಇರ್ಫಾನ್ ಸಾಹಿಬ್, ಜಕ್ಕೂರು. ರೂ. 1000/–

# ಅಹ್ಮದಿಯಾ ಜಮಾಅತಿನ ಪ್ರಗತಿ

♦ ಈ ವರ್ಷ 180 ಹೊಸ ಪ್ರಚಾರ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಅಹ್ಮದಿಯಾ ಜಮಾಅತಿಗೆ ಈಗ 127 ರಾಷ್ಟ್ರಗಳಲ್ಲಿ 2826 ಪ್ರಚಾರ ಕೇಂದ್ರಗಳಿವೆ.

♦ 899 ಹೊಸ ಜಮಾಅತ್ ಘಟಕಗಳನ್ನು ಸ್ಥಾಪಿಸಲಾಯಿತು. 224 ಹೊಸ ಘಟಕಗಳನ್ನು ಸ್ಥಾಪಿಸಿದ ನೈಜರ್ ಪ್ರಥಮ ಸ್ಥಾನದಲ್ಲಿದೆ.

♦ 1773 ಕಡೆಗಳಲ್ಲಿ ಅಹ್ಮದಿತ್ ಪ್ರಥಮ ಬಾರಿಗೆ ತಲಪಿತು.

♦ ವಕ್ಫೆನೌ ಯೋಜನೆಯಲ್ಲಿ ಒಟ್ಟು 66,525 ಮಂದಿ ಇದ್ದಾರೆ (39,814 ಗಂಡು ಮತ್ತು 26,711 ಹೆಣ್ಣು). ಈ ವರ್ಷದ ಸೇರ್ಪಡೆ 3448.

♦ಜಮಾಅತ್ 6967 ಖುರ್‌ಆನ್ ಪ್ರದರ್ಶನಗಳನ್ನು ಏರ್ಪಡಿಸಿತು. ಸುಮಾರು 38,85,300 ಮಂದಿ ಸಂದರ್ಶಿಸಿದರು.

♦1500 ಪುಸ್ತಕ ಪ್ರದರ್ಶನಗಳನ್ನು ಏರ್ಪಡಿಸಲಾಯಿತು. ಸುಮಾರು 41,94,000 ಮಂದಿಗೆ ಸಂದೇಶ ತಲಪಿಸಲಾಯಿತು.

♦ 198 ಹೊಸ ಮಸೀದಿಗಳು ನಿರ್ಮಿಸಲ್ಪಟ್ಟವು.

♦213 ಮಸೀದಿಗಳು ಅಹ್ಮದಿಯಾ ಜಮಾಅತಿನ ಸ್ವಾಧೀನಕ್ಕೆ ಬಂದವು.

♦ ಅಹ್ಮದಿಯಾ ಜಮಾಅತ್ ಈಗ 212 ರಾಷ್ಟ್ರಗಳಲ್ಲಿ ಸ್ಥಾಪಿತವಾಗಿದೆ. ಈ ವರ್ಷ ಸೇರ್ಪಡೆಯಾದ ರಾಷ್ಟ್ರಗಳು: 1. ಈಸ್ಟ್ ಟಿಮೋರ್ 2. ಜಾರ್ಜಿಯಾ.

♦ ಅಹ್ಮದಿಯಾ ಜಮಾಅತ್ ವತಿಯಿಂದ ಒಟ್ಟು 75 ಭಾಷೆಗಳಲ್ಲಿ ಪವಿತ್ರ ಖುರ್‌ಆನ್ ಅನುವಾದ ಪ್ರಕಾಶಗೊಂಡಿದೆ.

♦ ಈ ವರ್ಷ ಒಟ್ಟು 6,37,891 ಮಂದಿ ಅಹ್ಮದಿಯಾ ಜಮಾಅತಿಗೆ ಸೇರಿದ್ದಾರೆ. ನೈಗರ್‌ನಿಂದ 1,25,000 ಮಂದಿ.

♦ ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ (MTA) 12 ಸ್ಯಾಟೆಲೈಟ್‌ಗಳ ಮೂಲಕ ಲೋಕದಾದ್ಯಂತ ತಲಪುತ್ತಿದೆ.

♦ 2500 ನೀರಿನ ಪಂಪುಗಳನ್ನು 15 ರಾಷ್ಟ್ರಗಳಲ್ಲಿ ಸ್ಥಾಪಿಸಲಾಗಿದೆ.

♦ 12 ರಾಷ್ಟ್ರಗಳಲ್ಲಿ 684 ಶಾಲೆಗಳನ್ನು ತೆರೆಯಲಾಗಿದೆ.

♦ ಹಝ್ರತ್ ವಾಗ್ದತ್ತ ಮಸೀಹರ(ಅ) ಕಾಲದಲ್ಲಿ ಆರಂಭಿಸಿದ “ದಿ ರಿವ್ಯೂ ಆಫ್ ರಿಲೀಜನ್ಸ್” ಈಗ 117ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ.

(ಯು.ಕೆ. ಜಲ್ಸಾ ಸಾಲಾನದ ದ್ವಿತೀಯ ದಿನದಂದು ಹಝ್ರತ್ ಖಲೀಫತುಲ್ ಮಸೀಹ್ ಮಾಡಿದ ಭಾಷಣದಿಂದ)

# ಅತಿ ದೊಡ್ಡ ಇಸ್ಲಾಮಿಕ ಸಮ್ಮೇಳನ ಯುನೈಟೆಡ್ ಕಿಂಗ್‌ಡಮ್‌ನಲ್ಲಿ

**ಲಂಡನ್:** ಅಹ್ಮದಿಯಾ ಮುಸ್ಲಿಂ ಸಂಘಟನೆಯ 3 ದಿನಗಳ 52ನೇ ವಾರ್ಷಿಕ ಸಮ್ಮೇಳನ ಆಗಸ್ಟ್ 5ರಂದು ಮುಕ್ತಾಯವಾಯಿತು.

ಆಗಸ್ಟ್ 3ರಂದು ಶುಕ್ರವಾರ ಅಹ್ಮದಿಯಾ ಜಮಾಅತಿನ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರ ಖುತ್ಬ ಪ್ರವಚನದೊಂದಿಗೆ ಸಮ್ಮೇಳನ ಆರಂಭವಾಯಿತು. ಅಹ್ಮದಿಯಾ ಪತಾಕೆ ಮತ್ತು ಯು.ಕೆ. ಪತಾಕೆಗಳನ್ನು ಹಾರಿಸಲಾಯಿತು.

ದ್ವಿತೀಯ ದಿನ ಸುಮಾರು 15000 ಮಹಿಳೆಯರು ಸಮ್ಮೇಳಿಸಿದ ಮಾರ್ಕಿಯಲ್ಲಿ ಖಲೀಫರು ಭಾಷಣ ಮಾಡಿದರು. ಶೈಕ್ಷಣಿಕವಾಗಿ ಸಾಧನೆಗೈದ ಮಹಿಳೆಯರಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಆಲ್ಟನಿನ ಹದೀಕತುಲ್ ಮಹ್‌ದಿಯಲ್ಲಿ ಜರಗಿದ ಈ ಸಮ್ಮೇಳನದಲ್ಲಿ 115 ರಾಷ್ಟ್ರಗಳಿಂದ ಬಂದ 38510 ಮುಂದಿ ಭಾಗವಹಿಸಿದರು. ಅಹ್ಮದಿಯರು ಮಾತ್ರವಲ್ಲ ಅನೇಕ ಅಹ್ಮದಿಯೇತರ ಮತ್ತು ಮುಸ್ಲಿಮೇತರ ಅತಿಥಿಗಳು, ರಾಯಭಾರಿಗಳು, ರಾಜಕಾರಣಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು.

ಮೂರನೆಯ ದಿನ ಮಧ್ಯಾಹ್ನ ಬೈಅತ್ ಪ್ರತಿಜ್ಞೆ (ನಿಷ್ಠೆಯ ಪ್ರತಿಜ್ಞೆ) ಕಾರ್ಯಕ್ರಮ ಜರಗಿತು. ಸಭಿಕರೆಲ್ಲ ಮಾನವ ಸರಪಳಿಯನ್ನು ರಚಿಸಿಕೊಂಡು ಖಲೀಫರಿಗೆ ನಿಷ್ಠೆಯ ಪ್ರತಿಜ್ಞೆಯನ್ನು ಮಾಡಿದರು.

ಕಳೆದ ವರ್ಷ ಲೋಕದಾದ್ಯಂತ 6,37,891 ಮಂದಿ ಅಹ್ಮದಿಯಾ ಜಮಾಅತಿಗೆ ಸೇರಿದ್ದಾರೆಂದು ಖಲೀಫರು ಪ್ರಕಟಿಸಿದರು. ಈಗ ಅಹ್ಮದಿಯಾ ಜಮಾಅತ್ 212 ರಾಷ್ಟ್ರಗಳಲ್ಲಿ ಸ್ಥಾಪಿಸಲ್ಪಟ್ಟಿದೆ ಎಂದು ಸಹ ಖಲೀಫರು ಹೇಳಿದರು.

ಖಲೀಫರ ಮೌನ ಪ್ರಾರ್ಥನೆಯೊಂದಿಗೆ ಸಮ್ಮೇಳನ ಮುಕ್ತಾಯವಾಯಿತು.

---

### ■ ಜಾತ್ಯತೀತ ಮನೋಭಾವದಿಂದ ಸಮಾಜದಲ್ಲಿ ಶಾಂತಿ ಸಾಧ್ಯ ■ ಹಿಂದೂ-ಮುಸ್ಲಿಮರು ಸಹೋದರ ಭಾವನೆ ಹೊಂದಲಿ ■ ಸಮಾಜದಲ್ಲಿ ಭಾವೋದ್ವೇಗ ಸೃಷ್ಟಿಸುವ ಕೃತ್ಯ ತರವಲ್ಲ.

### ಹಿಂದೆ ಕೋಮು ಗಲಭೆಗಳು ಘಟಿಸಿದ ಪ್ರಕರಣಗಳು ಕಡಿಮೆ. ಈಚೆಗೆ ಅಂತಹ ಕೃತ್ಯಗಳಿಗೆ ಆದ್ಯತೆ ನೀಡಲಾಗುತ್ತಿದೆ. ಕೋಮು ಗಲಭೆಯಿಂದ ಸಮಾಜಕ್ಕೆ ಹಾನಿಯೇ ಹೆಚ್ಚು. – ವೆಂಕಟರೆಡ್ಡಿ ಮುದ್ನಾಳ ಶಾಸಕ.

**ಪ್ರಜಾವಾಣಿ ವಾರ್ತೆ**

ಯಾದಗಿರಿ: 'ನಗರದಲ್ಲಿ ಜಮಾಅತೆ ಅಹ್ಮದಿಯಾ ಸಂಘಟನೆ ಹಲವು ವರ್ಷಗಳಿಂದ ಸಮಾಜ ಸೇವೆಯಲ್ಲಿ ತೊಡಗಿದೆ. ಮಧ್ಯರಾತ್ರಿ ಸಂಪರ್ಕಿಸಿದರೂ ರಕ್ತದಾನ ಮಾಡಲು ಈ ಸಂಘಟನೆಯ ಸದಸ್ಯರು ಸಿದ್ಧರಿರುತ್ತಾರೆ' ಎಂದು ಜಮಾಅತೆ ಅಹ್ಮದಿಯಾ ಸಂಘಟನೆ ನಗರ ಘಟಕದ ಅಧ್ಯಕ್ಷ ಅಬ್ದುಲ್ ಮನ್ನಾನ್ ಸಾಲಿಖ್ ಅಮೀರ್ ಹೇಳಿದರು.

ನಗರದ ಶಹಾಪುರ ಪೇಟೆಯಲ್ಲಿರುವ ಅಹ್ಮದಿಯಾ ಸಂಘಟನೆಯ ಮಸ್‌ಜಿದೇ ಹಸನ್ ಸಭಾಂಗಣದಲ್ಲಿ ಏರ್ಪಡಿಸಿದ್ದ ಶಾಸಕರಿಗೆ ಸನ್ಮಾನ ಸಮಾರಂಭದಲ್ಲಿ ಮಾತನಾಡಿದರು.

'ಸಾಮಾಜಿಕ ಕೈಂಕರ್ಯ ಈ ಸಂಘಟನೆಯ ಧ್ಯೇಯವಾಗಿದ್ದು, ಪ್ಲಾಸ್ಟಿಕ್ ಮುಕ್ತ ನಗರವನ್ನಾಗಿ ಮಾಡಲು ಸಾಕಷ್ಟು ಶ್ರಮಿಸಿದೆ. ಅಲ್ಲದೆ ಅಂಗಡಿಗಳಿಗೆ ಭೇಟಿ ನೀಡಿ ಮಾಲಿಕರಿಗೆ ಪ್ಲಾಸ್ಟಿಕ್ ಬಳಸದಂತೆ ಜಾಗೃತಿ ಮೂಡಿಸಿದೆ. ಅದೇ ರೀತಿಯಲ್ಲಿ ನಗರ ಸ್ವಚ್ಛತೆಗೂ ಸಂಘಟನೆ ಶ್ರಮಿಸಿದೆ. ಬಡ ರೋಗಿಗಳ ಆರೋಗ್ಯ ತಪಾಸಣೆ, ಭಿಕ್ಷುಕರಿಗೆ ಆಹಾರ ವಿತರಣೆಯಂತಹ ಸಾಮಾಜಿಕ ಸೇವೆಯನ್ನು ಸಂಘಟನೆ ಮಾಡುತ್ತಾ ಬಂದಿದೆ' ಎಂದು ವಿವರಿಸಿದರು.

'ರಕ್ತದ ಕೊರತೆಯಿಂದಾಗಿ ಜಿಲ್ಲೆಯಲ್ಲಿ ಅನೇಕ ರೋಗಿಗಳು, ಮಕ್ಕಳು, ಬಾಣಂತಿಯರು, ಗರ್ಭಿಣಿಯರು ಸಾವನ್ನಪ್ಪುತ್ತಿದ್ದಾರೆ. ಅಂತಹವರಿಗೆ ನೆರವಾಗಲು ಸಂಘಟನೆ ಸದಸ್ಯರು ರಕ್ತದಾನಕ್ಕೆ ಮುಂದಾಗಿದ್ದಾರೆ' ಎಂದು ಹೇಳಿದರು.

ಶಾಸಕ ವೆಂಕಟರೆಡ್ಡಿ ಮುದ್ನಾಳ ಮಾತನಾಡಿ, 'ಹಿಂದೂ-ಮುಸ್ಲಿಮರು ಎಂಬ ತಾರತಮ್ಯ ಹಿಂದೆ ಇರಲಿಲ್ಲ. ನಾವು ಚಿಕ್ಕಂದಿನಿಂದಲೂ ಮುಸ್ಲಿಮರೊಂದಿಗೆ ಸಹೋದರತ್ವ ಭಾವದಿಂದ ಬೆಳೆದು ಬಂದಿದ್ದೇವೆ. ಜಾತ್ಯತೀತ ಭಾವ ಆಗ ಎಲ್ಲರಲ್ಲಿ ಇತ್ತು. ಇಂದು ಅದು ಕಣ್ಮರೆಯಾಗಿದೆ. ಎಲ್ಲ ಸಮುದಾಯದಲ್ಲಿನ ಯುವಕರು ವಿನಾಕಾರಣ ಸಮಾಜದಲ್ಲಿ ಭಾವೋದ್ವೇಗ ಸೃಷ್ಟಿಸಿ ಶಾಂತಿ ಕದಡುತ್ತಿದ್ದಾರೆ. ಅಂತಹ ಕೃತ್ಯ ಕೈಬಿಡಬೇಕು' ಎಂದು ಹೇಳಿದರು.

ಮಾಜಿ ಶಾಸಕ ಡಾ. ವೀರಬಸವಂತ ರೆಡ್ಡಿ ಮುದ್ನಾಳ, 'ಜಮಾಅತೆ ಅಹ್ಮದಿಯಾ ಸಂಘಟನೆ ಅತ್ಯಂತ ಶಿಸ್ತುಬದ್ಧ ಸಂಘಟನೆ ಎಂಬುದಾಗಿ ಹೆಸರು ಪಡೆದಿದೆ. ಇತರರಿಗೂ ಈ ಸಂಘಟನೆ ಮಾದರಿಯಾಗಿದೆ' ಎಂದರು.

ವೀರಶೈವ ಸಮಾಜದ ನಗರ ಘಟಕ ಅಧ್ಯಕ್ಷ ಅಯ್ಯಣ್ಣ ಹುಂಡೇಕರ್ ಮಾತನಾಡಿ. 'ದಿವಂಗತ ಮಾಜಿ ಸಚಿವ ವಿಶ್ವನಾಥ ರೆಡ್ಡಿ ಮುದ್ನಾಳ ಜಿಲ್ಲೆಯಲ್ಲಿನ ಹಿಂದೂ – ಮುಸ್ಲಿಮರಲ್ಲಿ ಭಾವೈಕ್ಯ ಸೃಷ್ಟಿಸಿದ್ದರು. ಅಂತಹ ಕೆಲಸವನ್ನು ಅವರ ಪುತ್ರ ಶಾಸಕ ವೆಂಕಟ ರೆಡ್ಡಿ ಮುದ್ನಾಳ ಮಾಡಲಿದ್ದಾರೆ' ಎಂದರು.

ಬ್ರಹ್ಮಕುಮಾರಿ ಬಿ.ಕೆ. ಸ್ವಾತಿ, ಕಸಾಪ ಜಿಲ್ಲಾ ಘಟಕ ಅಧ್ಯಕ್ಷ ಸಿದ್ಧಪ್ಪ ಹೊಟ್ಟಿ, ನಗರಸಭೆ ಸದಸ್ಯೆ ನಾಗರತ್ನಾ ಅನಪುರ, ಡಾ. ಸಿ.ಎಂ. ಪಾಟೀಲ, ಸಿದ್ದಣ್ಣ ಗೌಡ ಮೋಸಂಬಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಸವರಾಜ ಖಂಡ್ರೆ ಅಬ್ಬೆ ತುಮಕೂರು, ಬದರ್ ಚಾವೂಸ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಭೀಮರಾಯ ಕಿಲ್ಲನಕೇರಾ, ಹಿರಿಯ ವಕೀಲ ಅನ್ವರ್ ಸಾಬ, ಗುರುರಾಜ ಕುಲಕರ್ಣಿ, ಜಾವೀದ್ ನದೀಂ, ನೂರುಲ್ ಹಕ್, ಅಹ್ಮದಿಯಾ ಯುವ ಅಧ್ಯಕ್ಷ ತಾಜೇರ ಅಹ್ಮದ್ ಸೌದಾಗರ ಇದ್ದರು.

ಅಹ್ಮದಿಯಾ ಮಸೀದಿಯ ಮೌಲ್ವಿ ಶೇಖ್ ಬುರಾನ್ ಅಹ್ಮದ್ ಸ್ವಾಗತಿಸಿದರು. ಜಿಲ್ಲಾ ಘಟಕದ ಅಧ್ಯಕ್ಷ ಅಸದ್ ಸುಲ್ತಾನ್ ಘೋರಿ ವಂದಿಸಿದರು.

**("ಈದ್ ಮಿಲನ್ ಪಾರ್ಟಿ" – ಆಯೋಜಕರು ಅಹ್ಮದಿಯಾ ಮುಸ್ಲಿಂ ಕಮ್ಯೂನಿಟಿ, ಯಾದಗಿರಿ. ತಾ: 24–06–2018)**

## ಕೇರಳ ಸಂತ್ರಸ್ತರ ನೆರವಿಗೆ ಮುಂದಾದ ಹ್ಯೂಮನಿಟಿ ಫಸ್ಟ್

ಕಲಬುರಗಿ, ಆ 26 – ಕೇರಳ ನಿರಾಶ್ರಿತರಿಗೆ ಅಳಿಲು ಸೇವೆ ಮಾಡಲೆಂದು ಅಲ್ಲಿಗೆ ಧಾವಿಸಿರುವ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಅಂಗ ಸಂಸ್ಥೆಯಾದ ಹ್ಯೂಮನಿಟಿ ಫಸ್ಟ್ ಇಂಟರ್ ನ್ಯಾಷನಲ್ (ಯುಎನ್‌ಓ ನೊಂದಾಯಿತ) ಸ್ವಯಂ ಸೇವಾ ಸಂಸ್ಥೆಯ ಕಾರ್ಯಕರ್ತರು ಪರಿಹಾರ ಕ್ಯಾಂಪ್‌ಗಳನ್ನು ತೆರೆದಿದ್ದಾರೆ.

ಮಹಾಮಳೆಯಿಂದ ನೆರೆಯ ಕೇರಳ ರಾಜ್ಯ ಹಿಂದೆಂದೂ ಕಂಡು ಕೇಳರಿಯದ ಪ್ರವಾಹಕ್ಕೆ ತತ್ತರಿಸಿದ್ದು, ಅಲ್ಲಿನ ಲಕ್ಷಾಂತರ ಜನರು ನಿರಾಶ್ರಿತರಾಗಿದ್ದಾರೆ. ಹಲವಾರು ಸಂಘ ಸಂಸ್ಥೆಗಳು ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿವೆ. ಇವುಗಳಲ್ಲಿ ಒಂದಾಗಿರುವ ಹ್ಯೂಮನಿಟಿ ಫಸ್ಟ್ ಇಂಟರ್ ನ್ಯಾಷನಲ್ ಸಂಸ್ಥೆಯ ಸ್ವಯಂ ಸೇವಕರ ತಂಡ ಅಗತ್ಯ ವಸ್ತು, ಬಟ್ಟೆ, ರಗ್ಗು ಹೊದಿಕೆ ಮತ್ತು ಔಷಧಿಗಳೊಂದಿಗೆ ಕೇರಳಕ್ಕೆ ತಲುಪಿದ್ದು, ಅಲ್ಲಿನ ಜಿಲ್ಲಾಡಳಿತದ ನಿರ್ದೇಶನದ ಮೇರೆಗೆ ನಿರಾಶ್ರಿತರ ಶಿಬಿರವನ್ನು ಸಂಸ್ಥೆ ವತಿಯಿಂದ ತೆರೆಯಲಾಗಿದೆ.

ಈ ಸಂಸ್ಥೆಗೆ ನೀಡಿರುವ ಕಟ್ಟಡವನ್ನು ಸ್ವಚ್ಛಗೊಳಿಸಿದ ಸ್ವಯಂ ಸೇವಕರು, ಅಲ್ಲಿ ಅಗತ್ಯ ವಸ್ತುಗಳ ಹಾಗೂ ಔಷಧಗಳ ದಾಸ್ತಾನು ಇಟ್ಟುಕೊಂಡಿದ್ದಾರೆ. ಶಿಬಿರದಲ್ಲಿ ನೋಂದಾಯಿತ ನಿರಾಶ್ರಿತರಿಗೆ ಊಟ, ಉಪಚಾರ ಒದಗಿಸಲಾಗುತ್ತಿದೆ ಎಂದು ಅಹ್ಮದಿಯಾ ಮುಸ್ಲಿಂ ಜಮಾಅತಿನ ಮಾಧ್ಯಮ ವಿಭಾಗದ ಕೇಂದ್ರ ವಕ್ತಾರ ಕೆ. ತಾರಿಖ್ ಅಹ್ಮದ್ ಅವರು ಬಿಡುಗಡೆ ಮಾಡಿರುವ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ ಎಂದು ಕಲಬುರಗಿ ಅಹ್ಮದಿಯಾ ಮುಸ್ಲಿಂ ಸಂಘಟನೆಯ ಮಾಧ್ಯಮ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯಾವುದೇ ತಾರತಮ್ಯವಿಲ್ಲದೇ ಮಾನವೀಯತೆ ಮೊದಲು ಎಂಬ ತತ್ವದ ಆಧಾರದ ಮೇಲೆ ನಿರಾಶ್ರಿತರ ಸೇವೆಯಲ್ಲಿ ಸಂಸ್ಥೆಯ ಸ್ವಯಂ ಸೇವಕರು ತೊಡಗಿದ್ದಾರೆ. **(ಸಂಜೆ ವಾಣಿ 27–08–2018)**

## ಸ್ವಾತಂತ್ರ್ಯೋತ್ಸವ ಜಕ್ಕೂರು

**ಅಹ್ಮದಿಯಾ ಯುವಸಂಘಟನೆಯ (ಖುದ್ದಾಮುಲ್ ಅಹ್ಮದಿಯಾ) ಜಕ್ಕೂರು ವತಿಯಿಂದ ಮಾದರಿಯ ಸ್ವಚ್ಛತಾ ಕಾರ್ಯ ಹಾಗೂ ವಿವಿಧ ಶಾಲೆಗಳ ಸ್ವಾತಂತ್ರ್ಯೋತ್ಸವದಲ್ಲಿ ಪಾಲ್ಗೊಳ್ಳುವಿಕೆಯ ವರದಿ.**

ಜಕ್ಕೂರು: ದಿನಾಂಕ 13–08–2018ರಂದು ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾದರಿಯ ಸ್ವಚ್ಛತಾ ಕಾರ್ಯ (ಮಿಸಾಲಿ ವಖಾರೆ ಇ ಅಮಲ್) ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಜಕ್ಕೂರು ಹಮ್ಮಿಕೊಂಡಿತ್ತು. ಎಲ್ಲ ಯುವಕರು ಸೇರಿ ಶಾಲಾ ಕೋಣೆಗಳ ಒಳಾಂಗಣ ಹಾಗೂ ಹೊರಾಂಗಣ ಶುಚಿಗೊಳಿಸಿದರು. ಅಲ್ಲದೆ, ಕೆಟ್ಟು ಹೋದ ಪೈಪ್‌ಗಳನ್ನು ಸರಿಪಡಿಸಿ ಕೊಡಲಾಯಿತು ಮತ್ತು ನೀರಿನ ಡ್ರಮ್ ಹಾಗೂ ಶೌಚಾಲಯಗಳಲ್ಲಿ ಅಸ್ತವ್ಯಸ್ತವಾದ ವಸ್ತುಗಳನ್ನು ಸರಿಪಡಿಸಿ ಕೊಡಲಾಯಿತು. ಶಾಲಾ ಮುಖ್ಯಸ್ಥರು ಈ ಸೇವಾ ಕಾರ್ಯವನ್ನು ಶ್ಲಾಘಿಸಿ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪಾಲ್ಗೊಳ್ಳಲು ಆಹ್ವಾನಿಸಿದರು. ಆಗಸ್ಟ್ 15 ಸ್ವಾತಂತ್ರ್ಯ ದಿನಾಚರಣೆಯಂದು ಅಹ್ಮದಿಯಾ ಮುಸ್ಲಿಂ ಸಂಘಟನೆಯ ಎಲ್ಲ ಸದಸ್ಯರು ಪಾಲ್ಗೊಂಡರಲ್ಲದೆ ಶಾಲಾ ವಿದ್ಯಾರ್ಥಿಯರಿಗೆ ಕಂಪಾಕ್ಸ್ ಬಾಕ್ಸ್ ಉಡುಗೊರೆಯಾಗಿ ನೀಡಿದರು. ಈ ಕಾರ್ಯಕ್ರಮವನ್ನು ಮುಗಿಸಿಕೊಂಡು ಜಕ್ಕೂರು ಬಡಾವಣೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪಾಲ್ಗೊಂಡು ದೇಶಭಕ್ತಿ ಮತ್ತು ಇಸ್ಲಾಂ ವಿಷಯದಲ್ಲಿ ಸಣ್ಣ ಭಾಷಣ ಮಾಡಲು ಸಾಧ್ಯವಾಯಿತು. ಪ್ರಸಕ್ತ ಶಾಲೆಯ ವಿದ್ಯಾರ್ಥಿಗಳಿಗೂ ಕಂಪಾಕ್ಸ್ ಬಾಕ್ಸ್ ನೀಡಲಾಯಿತು.

ಮೂರನೆಯದಾಗಿ ಒಕ್ಕಲಿಗರ ಸಂಘ ಜಕ್ಕೂರುರವರು ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ 2017–18ನೇ ಸಾಲಿನ ಕೆ.ಜಿ. ಯಿಂದ ಪಿ.ಜಿ. ಉನ್ನತ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಹಾಗೂ ಗತ ವರ್ಷದ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದವರಿಗೆ ಸನ್ಮಾನ ಸಮಾರಂಭ ಆಯೋಜಿಸಲಾಗಿತ್ತು. ಆ ಸಮಾರಂಭಕ್ಕೂ ಅಹ್ಮದಿಯಾ ಮುಸ್ಲಿಂ ಸಂಘಟನೆಯ ಅಧ್ಯಕ್ಷರು ಹಾಗೂ ಇತರ ಸದಸ್ಯರನ್ನೂ ಆಹ್ವಾನಿಸಿದ ಪ್ರಯುಕ್ತ ಜಮಾಅತಿನ ಅಧ್ಯಕ್ಷರು, ಖಾಯಿದ್ ಹಾಗೂ ಇತರ ಸದಸ್ಯರು ಪಾಲ್ಗೊಂಡಿದ್ದರು. ಮುಹಮ್ಮದ್ ಇಸ್ಮಾಈಲ್ ನಿವೃತ್ತ ಶಿಕ್ಷಕರು ಅಹ್ಮದಿಯಾ ಮುಸ್ಲಿಂ ಜಮಾಅತ್ ಭಾರತ ಹೊರಡಿಸಿದ ಪ್ರೆಸ್ ರಿಲೀಜ್ ವಾಚಿಸಿದ್ದಲ್ಲದೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಈ ಸಮಾರಂಭದಲ್ಲಿ ಸುಮಾರು 500 ವಿದ್ಯಾರ್ಥಿಗಳು, 100ಕ್ಕಿಂತ ಹೆಚ್ಚು ಶಿಕ್ಷಕ–ಶಿಕ್ಷಕಿಯರು, ಮುಖ್ಯ ಗುರುಗಳು, ಪ್ರಾಂಶುಪಾಲರುಗಳು ಭಾಗವಹಿಸಿದರು. ಅಲ್ ಹಮ್ದುಲಿಲ್ಲಾಹ್ ಅಹ್ಮದಿಯಾ ಮುಸ್ಲಿಂ ಸಂಘಟನೆ ಜಕ್ಕೂರುರವರಿಗೆ ಇವೆಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸಿಕೊಂಡು ಜಮಾಅತಿನ ಆಶಯ ತಲುಪಿಸಲು ಸಾಧ್ಯವಾಯಿತು. ಅಲ್ಲಾಹುತಆಲ ನಮ್ಮ ಈ ಕಿರು ಸೇವೆಗಳನ್ನು ಸ್ವೀಕರಿಸಿ ನಮ್ಮನ್ನು ಸತ್ಪಥದಲ್ಲಿ ಮುಂದೆ ಸಾಗಲು ಅನುಗ್ರಹಿಸುವಂತಾಗಲಿ – ಆಮೀನ್.

**– ಮುಹಮ್ಮದ್ ಇರ್ಫಾನ್ – ಬೆಂಗಳೂರು ಅಹ್ಮದಿಯಾ ಯುವ ಸಂಘಟನೆಯ ಅಧ್ಯಕ್ಷ**

## ಕೊಡಗಿನಲ್ಲಿ ಹ್ಯುಮಾನಿಟಿ ಫಸ್ಟ್ ಇಂಡಿಯಾದ ಸೇವೆ

ಮಡಿಕೇರಿ: ಆಗಸ್ಟ್ 17 ರಂದು ಕೊಡಗಿನಲ್ಲಾದ ಪ್ರಕೃತಿ ವಿಕೋಪದಿಂದಾಗಿ ಮನೆ ಕಳೆದುಕೊಂಡ ಸಾವಿರಾರು ಸಂತ್ರಸ್ತರ ನೆರವಿಗೆ ಬಂದ ಹಾಗೂ ಅಲ್ಲಿನ ಪರಿಹಾರ ಕಾರ್ಯಾಚರಣೆಗಳಲ್ಲಿ ತೊಡಗಿದ ಕೆಲವು ಸಂಸ್ಥೆಗಳಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತ್‌ನ ಉಪ ಸಂಘಟನೆಯಾದ ಹ್ಯುಮಾನಿಟಿ ಫಸ್ಟ್ ಇಂಡಿಯಾವು ಒಂದು.

ಈ ಸಂದರ್ಭದಲ್ಲಿ ಯೋಜನೆ ಮತ್ತು ಸಂಘಟಿತ ವಿಧಾನಗಳಲ್ಲಿ ವಿವಿಧ ಸಮುದಾಯಗಳ ಸ್ಥಳೀಯ ನಿವಾಸಿಗಳು ಏಕಕಾಲದಲ್ಲಿ ಹ್ಯುಮಾನಿಟಿ ಫಸ್ಟ್ ಇಂಡಿಯಾದ ಜೊತೆಗೆ ಕಾರ್ಯಾಚರಣೆಯಲ್ಲಿ ಸೇರ್ಪಡೆಗೊಂಡರು. ಮಡಿಕೇರಿ ನಗರದಲ್ಲಿ ನಿರಾಶ್ರಿತರು ಕಳೆದು ಹೋದ ತಮ್ಮವರನ್ನು ಹುಡುಕಾಟ ನಡೆಸಲು ಮತ್ತು ರಕ್ಷಣಾ ಕಾರ್ಯಾಚರಣೆಗಾಗಿ 5 ತಂಡಗಳನ್ನು ರಚಿಸಿ ನಿರಾಶ್ರಿತರ ಕುಟುಂಬಗಳಿಗೆ ಹ್ಯುಮಾನಿಟಿ ಫಸ್ಟ್ ಇಂಡಿಯಾ ಸಹಾಯ ಮಾಡಿತು. ಈ ಸಂಘಟನೆಯು ಯಾವುದೇ ಜಾತಿ, ಧರ್ಮವನ್ನು ಲೆಕ್ಕಿಸದೆ ಪ್ರವಾಹ ಹಾಗೂ ಭೂಕುಸಿತದಲ್ಲಿ ಸಿಲುಕಿದ ಜನರನ್ನು ಒಂದೇ ಕುಟುಂಬದವರಂತೆ ನೋಡಿದೆ.

ಕೊಡಗು ಜಿಲ್ಲೆ ಕರ್ನಾಟಕ ರಾಜ್ಯದ ದಕ್ಷಿಣದಲ್ಲಿದೆ. ಇದು ದಕ್ಷಿಣ ಕನ್ನಡ, ಕೇರಳದ ಕಾಸರಗೋಡು, ಕಣ್ಣೂರು ಮತ್ತು ವಯನಾಡ್ ಜಿಲ್ಲೆಗಳೊಂದಿಗೆ ತನ್ನ ಗಡಿಯನ್ನು ಹಂಚಿಕೊಂಡಿದೆ. ಕಳೆದ ಮೂರು ತಿಂಗಳು ನಿರಂತರ ಮಳೆ ಹಾಗೂ ಆಗಸ್ಟ್ ತಿಂಗಳಲ್ಲಿ ಮೂರು ದಿನಗಳ ಕಾಲ ಜಿಲ್ಲೆಯಲ್ಲಿ ಭಾರೀ ಧಾರಾಕಾರ ಮಳೆ ಎದುರಾಗಿತ್ತು. ಸತತ ಮೂರು ದಿನಗಳ ಭಾರೀ ಮಳೆಯಿಂದಾಗಿ ಮಡಿಕೇರಿ ನಗರದ ಸುತ್ತಲಿನ ವಿವಿಧ ಹಳ್ಳಿಗಳಲ್ಲಿ ಪ್ರವಾಹ ಮತ್ತು ಭೂಕುಸಿತಕ್ಕೆ ಕಾರಣವಾಯಿತು.

ಮಡಿಕೇರಿ ಹ್ಯುಮಾನಿಟಿ ಫಸ್ಟ್ ಇಂಡಿಯಾದ ಸ್ವಯಂಸೇವಕರು ಮಡಿಕೇರಿಯಲ್ಲಿ ತೊಂದರೆಗೀಡಾದವರನ್ನು ಮತ್ತು ಸಂಕಷ್ಟಕ್ಕೊಳಗಾದ ನಿರಾಶ್ರಿತರನ್ನು ಸುರಕ್ಷಿತವಾಗಿ ನೋಡಿಕೊಳ್ಳುವ ಉದ್ದೇಶದಿಂದ ತಕ್ಷಣವೇ ಅಗತ್ಯ ಕ್ರಮ ಕೈಗೊಂಡರು. ನಂತರ ಹ್ಯುಮಾನಿಟಿ ಫಸ್ಟ್ ಇಂಡಿಯಾದ ಕಾರ್ಯಕರ್ತರು ಕೂರ್ಗ್ ಕಮ್ಯುನಿಟಿ ಹಾಲ್ ಎಂಬ ಛತ್ರದ ಮಾಲೀಕರನ್ನು ಸಂಪರ್ಕಿಸಿ, ಕೊಡಗಿನ ಕಠೋರ ಪರಿಸ್ಥಿತಿ ಮತ್ತು ಪರಿಹಾರ ಶಿಬಿರವನ್ನು ಸ್ಥಾಪಿಸುವ ತುರ್ತು ಅಗತ್ಯ ಹಾಗೂ ಅನಿವಾರ್ಯತೆಯ ಬಗ್ಗೆ ಅವರಿಗೆ ತಿಳಿಸಿದರು. ಇದಕ್ಕೆ ಪ್ರತಿಸ್ಪಂದಿಸಿದ ಕೂರ್ಗ್ ಕಮ್ಯುನಿಟಿ ಹಾಲ್ ಮಾಲೀಕರಾದ ಹಫಿಜ್. ಎಸ್.ಬಿ. ಯವರು ಉಚಿತವಾಗಿ ಸಂತ್ರಸ್ತರಿಗೆ ನೆರವಿನ ಕೇಂದ್ರವಾಗಿ ತಮ್ಮ ವಿವಾಹ ಛತ್ರವನ್ನು ನೀಡಿದರು. ಈ ಸಂದರ್ಭ ನೆರವಿನ ಕೇಂದ್ರದಲ್ಲಿ ಅಡುಗೆ ತಯಾರಿಸಲು ಬೇಕಾಗಿರುವ ಅಗತ್ಯ ವಸ್ತುಗಳು ಇಲ್ಲದಿದ್ದಾಗ ಹ್ಯುಮಾನಿಟಿ ಫಸ್ಟ್ ಇಂಡಿಯಾದ ಮಹಿಳಾ ಸ್ವಯಂಸೇವಕರು ನಿರಾಶ್ರಿತರಿಗಾಗಿ ತಮ್ಮ ಮನೆಗಳಲ್ಲಿ ಉಪಹಾರಗಳನ್ನು ತಯಾರಿಸಿ ಅವುಗಳನ್ನು ವಿವಾಹದ ಸಭಾಂಗಣಕ್ಕೆ ರವಾನಿಸಿ ಅವರ ಹೊಟ್ಟೆಯ ಹಸಿವನ್ನು ನೀಗಿಸಲು ಸಹಕರಿಸಿದರು. ಜೊತೆಗೆ ನಿರಾಶ್ರಿತರಿಗೆ ಬಟ್ಟೆ, ಕಂಬಳಿ ಹಾಗೂ ಇತರ ಅಗತ್ಯ ವಸ್ತುಗಳನ್ನು ನೀಡಿದರು.

ಈ ಸಂದರ್ಭ ನಿರಾಶ್ರಿತರ ಶಿಬಿರದಲ್ಲಿ ತಂಗಿದ್ದ ಶಿಬಿರಾರ್ಥಿಗಳ ಮಾಹಿತಿಗಳನ್ನು ಪಡೆದುಕೊಂಡು ಪರಿಹಾರ ಕೇಂದ್ರದ ನಿರಾಶ್ರಿತರಿಗೆ ಗುರುತಿನ ಚೀಟಿಗಳನ್ನು ನೀಡಲಾಯಿತು. ಮಡಿಕೇರಿ ಪಟ್ಟಣದ ಎಲ್ಲ ಸಮುದಾಯಗಳಿಂದ ಹಲವಾರು ನಿವಾಸಿಗಳು ಹ್ಯುಮಾನಿಟಿ ಫಸ್ಟ್ ಇಂಡಿಯಾದ ಸ್ವಯಂಸೇವಕರೊಂದಿಗೆ ಸೇರಿಕೊಂಡರು.

ಆಗಸ್ಟ್ 17ರಂದು ಈ 5 ತಂಡಗಳ ಕಾರ್ಯಕರ್ತರು ತಮ್ಮ ಸ್ವಂತ ವಾಹನಗಳಲ್ಲಿ ಪ್ರವಾಹ ಹಾಗೂ ಭೂಕುಸಿತ ಮತ್ತು ಮನೆ ಕುಸಿತ ಪ್ರದೇಶಗಳಿಗೆ ಭೇಟಿ ನೀಡಿ, ಅಲ್ಲಿನ ಜನರ ಕಷ್ಟಗಳಲ್ಲಿ ಭಾಗಿಯಾದರು.

ಇನ್ನು ಕೊಡಗಿನಲ್ಲಿ ಉಚಿತವಾಗಿ ದಿನ ಬಳಕೆ ಸಾಮಗ್ರಿಗಳು ಹಾಗೂ ಪ್ರಥಮ ಚಿಕಿತ್ಸೆ, ಸಾಮಾನ್ಯ ಒಟಿಸಿ ಔಷಧಗಳೊಂದಿಗೆ ವೈದ್ಯಕೀಯ ಔಷಧಾಲಯ ಸ್ಥಾಪನೆ, 3 ಹೊತ್ತು 200ಕ್ಕೂ ಹೆಚ್ಚು ನಿರಾಶ್ರಿತರಿಗೆ ಉಚಿತ ಆಹಾರ ವಿತರಣೆ, ಹಲವು ದಿನಗಳಿಂದ ಕೊಡಗಿನಲ್ಲಿ ವಿದ್ಯುತ್ ನಿಲುಗಡೆಯ ಕಾರಣದಿಂದಾಗಿ ಜನರೇಟರ್ ವ್ಯವಸ್ಥೆ, ಆಹಾರ ವಿತರಣೆ ಹಾಗೂ ಸೇವಿಸಲು ಶುಭ್ರ ಹಾಗೂ

ಸ್ವಚ್ಛತೆಯಿಂದ ಕೂಡಿದ ಉಪಹಾರ ಕೊಠಡಿ, ಪ್ರಥಮ ಚಿಕಿತ್ಸೆಗಾಗಿ ಕ್ಲಿನಿಕ್‌ನ ಸ್ಥಾಪನೆ, ಶಿಬಿರಕ್ಕೆ ಬಂದ ವೈದ್ಯರಿಂದ ಉಚಿತ ವೈದ್ಯಕೀಯ ಸೇವೆಗಳು ಮತ್ತು ಚೆಕ್‌ಅಪ್‌ಗಳು, ಮಹಿಳೆಯರು ಹಾಗೂ ಪುರುಷರಿಗೆ ಪ್ರತ್ಯೇಕ ಉಳಿಯಲು ವ್ಯವಸ್ಥೆ ಮಾಡಲಾಯಿತು.

ಮಡಿಕೇರಿಯ ಹಿಲ್ ರೋಡ್‌ನಲ್ಲಿರುವ ಅಹ್ಮದಿಯಾ ಮುಸ್ಲಿಮ್ ಜಮಾಅತಿನ 10ರಿಂದ 12 ನಮಾಝ್ ಮ್ಯಾಟ್‌ಗಳನ್ನು ನಿರಾಶ್ರಿತರಿಗೆ ಮಲಗಲು ನೀಡಲಾಯಿತು. ಹ್ಯುಮಾನಿಟಿ ಫಸ್ಟ್ ಇಂಡಿಯಾದ ದಕ್ಷಿಣ ಕರ್ನಾಟಕದ ಉಸ್ತುವಾರಿಯಾದ ಜೆ.ಎಂ. ಮುಹಮ್ಮದ್ ಶರೀಫ್, ಮಡಿಕೇರಿಯ ಹಿಲ್ ರೋಡ್‌ನಲ್ಲಿರುವ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಅಧ್ಯಕ್ಷರಾದ ಜನಾಬ್ ಎಂ.ಬಿ. ಝುಹೀರ್ ಅಹ್ಮದ್, ಸಹಾಯ ರಕ್ಷಕರು ಹಾಗೂ ಸ್ವಯಂಸೇವಕರು ನೇತೃತ್ವ ವಹಿಸಿಕೊಂಡು 60 ಕ್ಕೂ ಹೆಚ್ಚು ಕಾರ್ಯಕರ್ತರು ಮತ್ತು ಮಡಿಕೇರಿ ಹ್ಯುಮಾನಿಟಿ ಫಸ್ಟ್ ಇಂಡಿಯಾ ತಂಡದ ಸಹಕಾರದೊಂದಿಗೆ ಈ ಅಮೋಘ ಕಾರ್ಯ ಯಶಸ್ವಿ ಮಾಡಲು ಸಾಧ್ಯವಾಯಿತು.

ದೇಶದಾದ್ಯಂತ ಹ್ಯುಮಾನಿಟಿ ಫಸ್ಟ್ ಇಂಡಿಯಾ ಸಂಸ್ಥೆ ಕಾರ್ಯಾಚರಿಸುತ್ತಿದ್ದು, ಇಂತಹ ಕಠೋರ ಪರಿಸ್ಥಿತಿಗಳಿಂದ ಜನರನ್ನು ರಕ್ಷಿಸುತ್ತಾ ಬರುತ್ತಿದೆ.

## ಕೇರಳದಲ್ಲಿ ಹ್ಯುಮಾನಿಟಿ ಫಸ್ಟ್ ಸೇವೆ

ಕೇರಳದಲ್ಲಿ ಪ್ರಳಯ ಕಾಲದಲ್ಲಿ ದೇವಾನುಗ್ರಹದಿಂದ ತಕ್ಕುದಾದ ಸೇವೆ ಸಲ್ಲಿಸಲು ಜಾಗತಿಕ ಅಹ್ಮದಿಯಾ ಸಂಘಟನೆಯ ಅಂಗಸಂಸ್ಥೆಯಾದ "ಹ್ಯುಮಾನಿಟಿ ಫಸ್ಟ್"ಗೆ ಸಾಧ್ಯವಾಯಿತು. ವಯನಾಡ್ ಕೇಂದ್ರೀಕರಿಸಿ ಸೇವೆ ಆರಂಭಿಸಲಾಯಿತು. 250ಕ್ಕೆ ಮಿಕ್ಕಿದ ಸನ್ನದ್ಧ ಸ್ವಯಂ ಸೇವಕರನ್ನು ಒಟ್ಟುಗೂಡಿಸಿ ವಯನಾಡ್, ಕೋಝಿಕ್ಕೋಡ್, ಎರ್ನಾಕುಳಂ, ಮಲಪ್ಪುರಂ, ತೃಶ್ಶೂರ್, ತಿರುವನಂತಪುರಂ ಎಂಬೀ ಜಿಲ್ಲೆಗಳಲ್ಲಿ ಪ್ರಳಯ ಬಾಧಿತರಿಗೆ ನೆರವು ಒದಗಿಸಲಾಯಿತು. ದೇವಾಲಯಗಳ ಸಹಿತ 65 ಬಾವಿಗಳನ್ನು ಸ್ವಚ್ಛಗೊಳಿಸಲಾಯಿತು. 100 ಮನೆಗಳನ್ನೂ ಒಂದು ಚರ್ಚನ್ನೂ ಪೂರ್ಣವಾಗಿ ತೊಳೆದು ಶುಚಿಗೊಳಿಸಲಾಯಿತು. ಅನುಮತಿ ಪಡೆದು ಅಲ್ಲಿಯೇ ಸ್ವಯಂ ಸೇವಕರು ನಮಾಝ್ ನಿರ್ವಹಿಸಿದರು. ದುರಂತ ಬಾಧಿತರಿಗೆ ವಾಸಿಸಲು ಏರ್ಪಡಿಸಿದ ಶಾಲೆಗಳನ್ನೂ ಸ್ವಚ್ಛಗೊಳಿಸಲಾಯಿತು.

## ಪ್ರತಿಭೆ



ಪಯಂಗಾಡಿ ಜಮಾಅತ್ ಹೈಯರ್ ಸೆಕಂಡರಿ ಸ್ಕೂಲ್ ವಿದ್ಯಾರ್ಥಿ ಮಸ್ರೂರ್ ಅಹ್ಮದ್, 10ನೇ ತರಗತಿ ಪರೀಕ್ಷೆಯಲ್ಲಿ ಎಲ್ಲ ವಿಷಯಗಳಲ್ಲಿ A+ ಅಂಕ ಪಡೆದು ತೇರ್ಗಡೆ ಹೊಂದಿರುತ್ತಾನೆ. ಮಾಶಾಅಲ್ಲಾಹ್.



ಶಹಾಮಾ ಪರ್ವೀನ್

ಪಯಂಗಾಡಿಯ ಅಹ್ಮದಿಯಾ ಮದ್ರಸ ಮತ್ತು ಹ್ಯಾಪಿ ಕಿಡ್ಸ್ ಇಂಗ್ಲಿಷ್ ಮೀಡಿಯಂ ಸ್ಕೂಲ್ ವಿದ್ಯಾರ್ಥಿನಿಗಳಾದ ಶಹಮಾ ಪರ್ವೀನ್ (11 ವರ್ಷ) ಮತ್ತು ಅಮ್ನ ಶರೀನ್ (10 ವರ್ಷ) 40 ಹದೀಸು (ಪ್ರವಾದಿ ನುಡಿ)ಗಳನ್ನು ಅರ್ಥ ಸಹಿತ ಕಂಠಪಾಠ ಮಾಡಿರುತ್ತಾರೆ. ಮಾಶಾ ಅಲ್ಲಾಹ್.



ಅಮ್ನ ಶರೀನ್

ಇವರು ಮೂವರೂ ಪಯಂಗಾಡಿ ಜಮಾಅತಿನ ಸಿ. ಶಫೀಕ್ ಅಹ್ಮದ್ ಮತ್ತು ಮಂಗಳೂರು ಜಮಾಅತಿನ ಫಾತಿಮತ್ ಝುಹರಾ ("ಯುಗರಶ್ಮಿ" ಸಂಪಾದಕ ಮುಹಮ್ಮದ್ ಯೂಸುಫ್‌ರವರ ಪುತ್ರಿ) ದಂಪತಿಯ ಮಕ್ಕಳು.



ಮಂಜೇಶ್ವರ ಜಮಾಅತಿನ ಹಲೀಮ ಸಾದಿಯ (5 ವರ್ಷ) ಅರಬಿಕ್ "ಖಸೀದ" ಪೂರ್ಣವಾಗಿ ಕಂಠಪಾಠ ಮಾಡಿದ್ದಾಳೆ. ಅಬ್ದುಸ್ಸಲಾಂ ಎಮ್. ಹಾಗೂ ಡಾ| ವಸೀಮ ಎಮ್.ಪಿ. ಅವರ ಮಗಳಾದ ಹಲೀಮ ಸಾದಿಯ ವಖ್‌ಫೆ ನೌ ಯೋಜನೆಯಲ್ಲಿ ಸೇರಿದವಳಾಗಿದ್ದಾಳೆ. ಮಾಶಾಅಲ್ಲಾಹ್

**ನಿಧನ ವಾರ್ತೆಗಳು**

## ಜನಾಬ್ ಮುಹಮ್ಮದ್ ಉಸ್ಮಾನ್ ಚೌ ಚೀನೀ ಸಾಹಿಬ್



ನಮ್ಮ ಜಮಾಅತಿನ ಹಿರಿಯರೂ ವಿದ್ವಾಂಸರೂ ಆಗಿದ್ದ ಜನಾಬ್ ಉಸ್ಮಾನ್ ಚೀನೀ ಸಾಹಿಬರು ದಿನಾಂಕ 12–4–2018ರಂದು ತನ್ನ 93ನೇ ವಯಸ್ಸಿನಲ್ಲಿ ನಿಧನರಾದರು. ("ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್").

ಅವರ ಪೂರ್ಣ ಹೆಸರು ಮುಹಮ್ಮದ್ ಉಸ್ಮಾನ್ ಚೌ ಚಿಂಗ್ ಶಿ ಎಂದಾಗಿದೆ. ಅವರು ದರ್ವೇಶ್ ಗುಣದ ವಾಕಿಫೆ ಝಿಂದಗಿ, ಕರ್ಮಾನುಷ್ಠಾನಬದ್ಧ ಮುಬಲ್ಲಿಗ್ ಮತ್ತು ವಲಿಯಾಗಿದ್ದರು. ಅವರು ವಾಕಿಫೀನೆ ಝಿಂದಗಿ ವ್ಯಕ್ತಿಗಳಿಗೆ ಅನುಕರಣೀಯ ಮಾದರಿಯಾಗಿದ್ದರು. 1925 ಡಿಸೆಂಬರ್ ದಿನಾಂಕ 13ರಂದು ಒಂದು ಮುಸ್ಲಿಮ್ ಕುಟುಂಬದಲ್ಲಿ ಅವರು ಜನಿಸಿದರು, ಚೀನದ ಆನ್‌ಖೂಯಿ ಪ್ರಾಂತ್ಯದಲ್ಲಿ. ಹೈಸ್ಕೂಲ್ ವಿದ್ಯಾಭ್ಯಾಸದ ನಂತರ 1946ರಲ್ಲಿ ಅವರು ನಾನ್‌ಚಿಂಗ್ ಯುನಿವರ್ಸಿಟಿಯಲ್ಲಿ ಪೊಲಿಟಿಕ್ಸ್ ವಿಭಾಗದಲ್ಲಿ ವಿದ್ಯಾಭ್ಯಾಸ ಮುಂದುವರಿಸಿದರು. ಆದರೆ ಪೊಲಿಟಿಕ್ಸ್ (ರಾಜಕೀಯ ಶಾಸ್ತ್ರ) ಬಗ್ಗೆ ಆಸಕ್ತಿ ಇಲ್ಲದ ಕಾರಣ ನ್ಯಾಯಶಾಸ್ತ್ರ, ಫಿಲಾಸಫಿ, ಅಥವಾ ಧಾರ್ಮಿಕ ಶಾಸ್ತ್ರ ಕಲಿಯುವ ಬಗ್ಗೆ ಯೋಚಿಸಿದರು. ಮೊದಲು ತುರ್ಕಿ ದೇಶಕ್ಕೆ ಹೋಗಿ ವಿದ್ಯಾಭ್ಯಾಸ ಪಡೆಯುವ ಬಗ್ಗೆ ಯೋಚಿಸಿದ್ದರು. 1949ರಲ್ಲಿ ಅವರು ಪಾಕಿಸ್ಥಾನಕ್ಕೆ ಆಗಮಿಸಿದರು. ಅವರು ಸ್ವತಃ ಸಂಶೋಧನೆ ನಡೆಸಿ ಬೈಅತ್ ಮಾಡಿದರು. ಅವರು ಜಾಮಿಅ ಅಹ್ಮದಿಯಾದಲ್ಲಿ ಧಾರ್ಮಿಕ ವಿದ್ಯಾಭ್ಯಾಸ ಪ್ರಾರಂಭಿಸಿದರು. 1957ರಲ್ಲಿ ಜಾಮಿಅ ಅಹ್ಮದಿಯಾದಲ್ಲಿ ಶಹಾದತುಲ್ ಅಜಾಯಿಬ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಅದು ಮುಬಲ್ಲಿಗರ ಶೋರ್ಟ್ ಕೋರ್ಸ್ ಆಗಿತ್ತು. 1959ರಲ್ಲಿ ಅವರು ವಕ್ಫ್ ಮಾಡಿದರು. 1960 ಜನವರಿಯಲ್ಲಿ ಅವರು ಮುಬಲ್ಲಿಗರಾಗಿ ನೇಮಿಸಲ್ಪಟ್ಟರು. ನಂತರ ಮುಬಲ್ಲಿಗರ ಕೋರ್ಸ್ ಕಲಿತು ತೇರ್ಗಡೆ ಹೊಂದಲು 1961 ಎಪ್ರಿಲ್‌ನಲ್ಲಿ ಜಾಮಿಅ ಅಹ್ಮದಿಯಾವನ್ನು ಪುನಃ ಪ್ರವೇಶಿಸಿದರು. 1964ರಲ್ಲಿ 'ಶಾಹಿದ್' ಬಿರುದು ಪಡೆದರು. ಕರಾಚಿ ಮತ್ತು ರಬ್ವದಲ್ಲಿ ಅವರು ವಾಕಿಫೆ ಝಿಂದಗಿ ಮತ್ತು ಮುರಬ್ಬಿಯಾಗಿ ಸೇವೆ ಸಲ್ಲಿಸಿದರು. 1966ರಲ್ಲಿ ಅವರು ಸಿಂಗಾಪುರ ಮತ್ತು ಮಲೇಶಿಯಾ ದೇಶಗಳಿಗೆ ಹೋದರು. ಅವರು ಅಂದಾಜು ಮೂರುವರೆ ವರ್ಷಕಾಲ ಸಿಂಗಾಪುರದಲ್ಲಿಯೂ ನಾಲ್ಕು ತಿಂಗಳಷ್ಟು ಕಾಲ ಮಲೇಶಿಯಾದಲ್ಲಿಯೂ ಜಮಾಅತ್‌ಗೆ ಸೇವೆ ಸಲ್ಲಿಸಿದರು. 1970ರಲ್ಲಿ ಅವರು ಪಾಕಿಸ್ಥಾನಕ್ಕೆ ಮರಳಿ ಬಂದು ವಿವಿಧ ಸ್ಥಳಗಳಲ್ಲಿ ಮುರಬ್ಬಿಯಾಗಿ ಕೆಲಸ ಮಾಡಿದರು. ಹಜ್ಜ್ ಮತ್ತು ಉಮ್ರ ಮಾಡುವ ಭಾಗ್ಯ ಸಹ ಅವರಿಗೆ ದೊರೆತಿತ್ತು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರವರ ಹಿಜ್‌ರತ್ ನಂತರ ಇಲ್ಲಿ ವಿವಿಧ ಭಾಷಾ ವಿಭಾಗಗಳ ಕಚೇರಿ ಪ್ರಾರಂಭವಾದಾಗ, ಜಮಾಅತಿನ ಚಟುವಟಿಕೆಗಳು ವಿಶಾಲಗೊಂಡಾಗ, ಜಮಾಅತಿನ ಸಾಹಿತ್ಯವನ್ನು ಭಾಷಾಂತರ ಮಾಡುವ ಬಗ್ಗೆ ಹೆಚ್ಚು ವಿಶಾಲತೆ ಉಂಟಾದಾಗ ಚೀನಾ ಡೆಸ್ಕ್ ಎಂಬ ಚೀನೀ ಭಾಷಾ ವಿಭಾಗ ಸಹ ಸ್ಥಾಪಿತವಾಯಿತು. ಆಗ ಉಸ್ಮಾನ್ ಚೀನೀ ಸಾಹಿಬರನ್ನು ಇಲ್ಲಿಗೆ ಕರೆಯಿಸಲಾಯಿತು. ಅವರಿಗೆ ಜಮಾಅತಿನ ಗ್ರಂಥಗಳನ್ನು ಚೀನೀ ಭಾಷೆಗೆ ಭಾಷಾಂತರ ಮಾಡುವ ಭಾಗ್ಯ ಲಭಿಸಿತು. ಅವುಗಳಲ್ಲಿ ಪವಿತ್ರ ಖುರ್‌ಆನಿನ ಚೀನೀ ಭಾಷೆಯ ಭಾಷಾಂತರ ವಿಶಿಷ್ಟವಾಗಿ ಪ್ರಸ್ತಾಪಿಸಲು ಅರ್ಹವಾಗಿದೆ. ಜಮಾಅತಿನ ವಿಶ್ವಾಸ ಮತ್ತು ಉಪದೇಶಗಳ ಬಗ್ಗೆ ಸಹ ಅವರು ಗ್ರಂಥಗಳನ್ನು ರಚಿಸಿದ್ದರು.

ಅವರು ಪತ್ನಿಯನ್ನೂ ಒಬ್ಬ ಪುತ್ರನನ್ನೂ ಇಬ್ಬರು ಪುತ್ರಿಯರನ್ನೂ ಅಗಲಿ ಹೋಗಿದ್ದಾರೆ. ಮೃತರಿಗೆ ಅಲ್ಲಾಹನು ಮಗ್ಫಿರತನ್ನೂ ಜನ್ನತನ್ನೂ ದಯಪಾಲಿಸಲಿ – ಆಮೀನ್.

## ಜನಾಬ್ ಅಲ್‌ಹಾಜ್ ಸಯ್ಯದ್ ಅಲ್ಲಾಭಕ್ಸ್ ಸಾಹಿಬ್



ಶಿವಮೊಗ್ಗದ ಜ। ಅಲ್‌ಹಾಜ್ ಸಯ್ಯದ್ ಅಲ್ಲಾಭಕ್ಸ್ ಸಾಹಿಬರು ಆಗಸ್ಟ್ 30ರಂದು ತನ್ನ 73ನೇ ವಯಸ್ಸಿನಲ್ಲಿ ನಿಧನರಾದರು. ("ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್").

ಅವರು ಮಡಿಕೇರಿ ಜಮಾಅತಿನಲ್ಲಿ ಖಾಇದ್, ವಣಗೂರ್ ಜಮಾಅತಿನಲ್ಲಿ ಸದರ್ ಆಗಿ ಸೇವೆ ಸಲ್ಲಿಸಿದ್ದಾರೆ. ಅವರು ಸೌದಿ ಅರೇಬಿಯಾದಲ್ಲೂ ಜಮಾಅತಿಗೆ ಸೇವೆ ಸಲ್ಲಿಸಿದ್ದಾರೆ. ಅವರು ಶಿವಮೊಗ್ಗದಲ್ಲಿ ಝಈಂ ಅನ್ಸಾರುಲ್ಲಾ ಮತ್ತು 2 ಬಾರಿ ಸದರ್ ಆಗಿದ್ದರು. ಅವರಿಗೆ 2 ಸಲ ಹಜ್ಜ್ ಮತ್ತು ಅನೇಕ ಬಾರಿ ಉಮ್ರ ಮಾಡುವ ಸೌಭಾಗ್ಯ ದೊರೆತಿದೆ. ಅವರು ಸೌಮ್ಯ ಸ್ವಭಾವಿಯೂ ಬಡವರ ಬಂಧುವೂ ಆಗಿದ್ದರು. ಅವರು "ಮೂಸಿ" ಆಗಿದ್ದರಿಂದ ಅವರ ಕೊನೆಯ ಇಚ್ಛೆಯಂತೆ ಸೆಪ್ಟೆಂಬರ್ 1ರಂದು ಖಾದಿಯಾನಿನ ಬಿಹಿಸ್ತಿ ಮಕ್‌ಬರದಲ್ಲಿ ಮೃತದೇಹವನ್ನು ದಫನ ಮಾಡಲಾಯಿತು.

ಅವರು ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಮತ್ತು ಅನೇಕ ಬಂಧು ಮಿತ್ರಾದಿಗಳನ್ನು ಅಗಲಿದ್ದಾರೆ. ಅಲ್ಲಾಹನು ಅವರಿಗೆ ಮಗ್‌ಫಿರತನ್ನೂ ಜನ್ನತನ್ನೂ ದಯಪಾಲಿಸಲಿ – ಆಮೀನ್.

ಓದಿದ್ದು

## ಪಾದ್ರಿಗಳ ಲೈಂಗಿಕ ಹಗರಣ ನಿಗ್ರಹಕ್ಕೆ ಚರ್ಚ್‌ಗಳು ವಿಫಲ

### ಮುಜುಗರದಿಂದ ತಲೆತಗ್ಗಿಸುವಂತಾಗಿದೆ ಎಂದ ಪೋಪ್

**ಡಬ್ಲಿನ್:** ಪಾದ್ರಿಗಳ ಲೈಂಗಿಕ ಹಗರಣಗಳನ್ನು ನಿಗ್ರಹಿಸುವಲ್ಲಿ ಕ್ಯಾಥೋಲಿಕ್ ಚರ್ಚ್‌ಗಳು ವಿಫಲವಾಗಿದ್ದು, ಮುಜುಗರದಿಂದ ತಲೆತಗ್ಗಿಸುವಂತಾಗಿದೆ ಎಂದು ಪೋಪ್ ಫ್ರಾನ್ಸಿಸ್ ಹೇಳಿದ್ದಾರೆ.

ಪಾದ್ರಿಗಳ ಕಾಮಲೋಲುಪತೆಯ ವಿರುದ್ಧ ಎದ್ದಿರುವ ಜಾಗತಿಕ ಧ್ವನಿಗೆ ಸ್ಪಂದಿಸಿರುವ ಪೋಪ್ ಅವರು, ಈ ಅಪರಾಧಗಳನ್ನು ನಿಗ್ರಹಿಸುವಲ್ಲಿ ಬಿಷಪ್‌ಗಳು ಪಾದ್ರಿಗಳು ಹಾಗೂ ಇತರೆ ಚರ್ಚ್‌ನ ಅಧಿಕಾರಿಗಳಿಂದಾದ ವೈಫಲ್ಯವೇ ಇದರ ವಿರುದ್ಧ ಧ್ವನಿ ಏಳಲು ಕಾರಣವಾಗಿದೆ. ಇದು ಕ್ಯಾಥೋಲಿಕ್ ಸಮುದಾಯಕ್ಕೆ ನೋವಿನ ಹಾಗೂ ಮುಜುಗರದ ಸಂಗತಿ ಎಂದು ಹೇಳಿದ್ದಾರೆ.

ಪೋಪ್ ಫ್ರಾನ್ಸಿಸ್ ಅವರು ತಮ್ಮ ಐರ್ಲೆಂಡ್ ಪ್ರವಾಸದ ಮೊದಲ ದಿನವೇ ಪಾದ್ರಿಗಳ ಲೈಂಗಿಕ ಹಗರಣದ ಕುರಿತು ಮಾತನಾಡಿದ್ದು ಪ್ರಾಮುಖ್ಯತೆ ಪಡೆದುಕೊಂಡಿದೆ. ಇಲ್ಲಿನ ಸಂತ್ರಸ್ತ ಬಾಲಕಿಯರೊಂದಿಗೂ ಪೋಪ್ ಮಾತನಾಡುವ ನಿರೀಕ್ಷೆಯಿದೆ.

ಇತ್ತೀಚೆಗಷ್ಟೇ ಮಕ್ಕಳ ಮೇಲೆ ದೌರ್ಜನ್ಯ ಎಸಗಿದ ಹಾಗೂ ಅದನ್ನು ಮುಚ್ಚಿಟ್ಟ ಪಾದ್ರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಪೋಪ್ ಅವರಿಗೆ ಐರಿಷ್ ಪ್ರಧಾನಿ ಆಗ್ರಹಿಸಿದ್ದರು. ಚರ್ಚುಗಳು ನಿರ್ವಹಿಸುತ್ತಿರುವ ಶಾಲೆಗಳಲ್ಲಿ ಸಾವಿರಾರು ಮಕ್ಕಳ ಮೇಲೆ ಪಾದ್ರಿಗಳು ಅತ್ಯಾಚಾರ, ಲೈಂಗಿಕ ದೌರ್ಜನ್ಯಗಳನ್ನು ಎಸೆದಿರುವ ಪ್ರಕರಣಗಳು ಇಲ್ಲಿ ಬೆಳಕಿಗೆ ಬಂದಿದ್ದವು. ಜೊತೆಗೆ, ಇಂಥ ಪ್ರಕರಣಗಳನ್ನು ಮುಚ್ಚಿಹಾಕಲು ಬಿಷಪ್‌ಗಳು ಯತ್ನಿಸಿರುವುದೂ ಬಹಿರಂಗವಾಗಿತ್ತು. ಇದೇ ವೇಳೆ, ಭಾರತದ ಕೇರಳದಲ್ಲೂ ಇತ್ತೀಚೆಗೆ ಪಾದ್ರಿಗಳ ಲೈಂಗಿಕ ಹಗರಣಗಳು ಬೆಳಕಿಗೆ ಬಂದಿದ್ದವು. ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಪೋಪ್‌ರ ಹೇಳಿಕೆ ಮಹತ್ವ ಪಡೆದಿದೆ. **(ಉದಯವಾಣಿ 26–8–2018)**

## ಗಂಗಾ ನೀರು ಹಾನಿಕರ?

**ನವದೆಹಲಿ:** ಸಿಗರೇಟ್ ಪ್ಯಾಕ್‌ನಲ್ಲಿ ಆರೋಗ್ಯಕ್ಕೆ ಹಾನಿಕರ ಎಂಬ ಎಚ್ಚರಿಕೆಯ ಸಂದೇಶ ಇರುವಂತೆ, ಮಲಿನಗೊಂಡಿರುವ ಗಂಗಾ ನದಿ ನೀರಿಗೆ ಏಕೆ ಇಂಥ ಎಚ್ಚರಿಕೆ ಸಂದೇಶ ಇರಬಾರದು ಎಂದು ಎನ್‌ಜಿಟಿ ಖಾರವಾಗಿ ಪ್ರಶ್ನಿಸಿದೆ. ಉತ್ತರಾಖಂಡದ ಹರಿದ್ವಾರದಿಂದ ಉತ್ತರ ಪ್ರದೇಶದ ಉನ್ನಾವ್‌ವರೆಗೆ ನದಿಯ ನೀರು ಸ್ನಾನಕ್ಕೂ ಯೋಗ್ಯವಾಗಿಲ್ಲ. ಈ ಬಗ್ಗೆ ಮಾಹಿತಿ ಇಲ್ಲದ ಜನರು ಅದನ್ನೇ ಕುಡಿಯುತ್ತಿದ್ದಾರೆ ಎಂದಿದೆ. ಜನರಿಗೆ ಈ ಬಗ್ಗೆ ಮಾಹಿತಿ ನೀಡಬೇಕು ಎಂದು ಎನ್‌ಜಿಟಿ ಅಧ್ಯಕ್ಷ ನ್ಯಾ. ಎ.ಕೆ. ಗೋಯಲ್ ಅಭಿಪ್ರಾಯಪಟ್ಟಿದ್ದಾರೆ. ನೀರು ಬಳಕೆಗೆ ಯೋಗ್ಯವಾಗಿದೆಯೇ ಎಂಬ ಬಗ್ಗೆ ಸೂಚನಾ ಫಲಕ ಹಾಕಬೇಕು ಎಂದಿದ್ದಾರೆ ನ್ಯಾ. ಗೋಯಲ್. **(ಉದಯವಾಣಿ 28–7–2018)**

## ಕನಿಷ್ಠ ಬ್ಯಾಲೆನ್ಸ್ ಹಗಲು ದರೋಡೆ

ಪ್ರಸಕ್ತ ವರ್ಷ ಖಾತೆಗಳಲ್ಲಿ ಕನಿಷ್ಠ ಬ್ಯಾಲೆನ್ಸ್ ಇರದ ಗ್ರಾಹಕರಿಂದ ಬ್ಯಾಂಕುಗಳು ವಸೂಲು ಮಾಡಿದ ದಂಡದ ಮೊತ್ತ ಬರೋಬ್ಬರಿ 5,000 ಕೋ. ರೂ. ಒಂದು ದೃಷ್ಟಿಯಲ್ಲಿ ನೋಡಿದರೆ ಇದು ಬ್ಯಾಂಕುಗಳು ನಡೆಸಿದ ಹಗಲು ದರೋಡೆ. ಬ್ಯಾಂಕ್ ಖಾತೆಯಲ್ಲಿ ಕನಿಷ್ಠ ಬ್ಯಾಲೆನ್ಸ್ ಇರಬೇಕೆಂಬ ನಿಯಮವೇ ಅಸಂಗತ. ಮಾಸಾಂತ್ಯದಲ್ಲಿ ನೂರಿನ್ನೂರು ರೂಪಾಯಿಗೂ ಒದ್ದಾಡುವ ಎಷ್ಟೋ ಮಧ್ಯಮ ಮತ್ತು ಕೆಳಮಧ್ಯಮ ವರ್ಗದವರು ಈ ದೇಶದಲ್ಲಿದ್ದಾರೆ. ಅಂಥವರು ತೀರಾ ಅಗತ್ಯಕ್ಕೂ ಕೂಡಾ ಬ್ಯಾಂಕಿನಲ್ಲಿರುವ ಅಲ್ಪ ಮೊತ್ತವನ್ನು ಉಪಯೋಗಿಸಲಾಗದಂತೆ ಮಾಡಿರುವ ನಿಯಮ ಇದು. ಗ್ರಾಹಕರ ಖಾತೆ ನಿಭಾಯಿಸಲು ಅಷ್ಟು ಕಷ್ಟವಾಗುವುದಾದರೆ ಒತ್ತಾಯದಿಂದ ಖಾತೆ ತೆರೆಸಿದ್ದೇಕೆ? ಕೋಟಿಗಟ್ಟಲೆ ವಂಚಿಸಿದವರು ವಿದೇಶಗಳಲ್ಲಿ ಆರಾಮವಾಗಿದ್ದಾರೆ. ಆದರೆ ಕನಿಷ್ಠ ಬ್ಯಾಲೆನ್ಸ್ ಇಲ್ಲದವರು ದಂಡ ಕಟ್ಟಿ ಪರಿತಪಿಸುತ್ತಿರುವುದು ವಿಪರ್ಯಾಸ. – ಮುಹಮ್ಮದ್ ಯೂಸುಫ್, ಮಂಗಳೂರು

**(ಉದಯವಾಣಿ 16–8–2018)**

## 75 ಮಂದಿಗೆ ಮರಣ ದಂಡನೆ 47 ಮಂದಿಗೆ ಜೀವಾವಧಿ

ಕೈರೋ (ಈಜಿಪ್ಟ್), ಸೆ. 8: 2013ರಲ್ಲಿ ನಡೆದ ಪ್ರತಿಭಟನೆಗೆ ಸಂಬಂಧಿಸಿ, ನಿಷೇಧಿತ ಮುಸ್ಲಿಮ್ ಬ್ರದರ್‌ಹುಡ್‌ನ ಉನ್ನತ ನಾಯಕರು ಸೇರಿದಂತೆ 75 ಮಂದಿಗೆ ಈಜಿಪ್ಟ್‌ನ ನ್ಯಾಯಾಲಯವೊಂದು ಶನಿವಾರ ಮರಣದಂಡನೆ ವಿಧಿಸಿದೆ. ಅದೇ ವೇಳೆ, ಬ್ರದರ್‌ಹುಡ್ ಮುಖ್ಯಸ್ಥ ಮುಹಮ್ಮದ್ ಬದಾಯಿ ಹಾಗೂ 46 ಮಂದಿಗೆ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ. ಈ ಪ್ರಕರಣದಲ್ಲಿ, 739 ಆರೋಪಿಗಳು ಹತ್ಯೆಯಿಂದ ಹಿಡಿದು ಸಾರ್ವಜನಿಕ ಸೊತ್ತು ನಾಶದವರೆಗಿನ ವಿವಿಧ ಆರೋಪಗಳನ್ನು ಎದುರಿಸುತ್ತಿದ್ದಾರೆ. ಪತ್ರಿಕಾ ಛಾಯಾಗ್ರಾಹಕ ಮಹ್ಮೂದ್ ಅಬೂ ಝಾಯಿದ್‌ಗೆ 5ವರ್ಷಗಳ ಜೈಲುಶಿಕ್ಷೆ ವಿಧಿಸಲಾಗಿದೆ.

2012ರಲ್ಲಿ ನಡೆದ ಚುನಾವಣೆಯಲ್ಲಿ ಬ್ರದರ್‌ಹುಡ್‌ನ ನಾಯಕ ಮುಹಮ್ಮದ್ ಮುರ್ಸಿ ಈಜಿಪ್ಟ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಆದರೆ, ಒಂದು ವರ್ಷದ ಬಳಿಕ ಸೇನೆಯು ಅವರನ್ನು ವಜಾಗೊಳಿಸಿತು. ಇದನ್ನು ಪ್ರತಿಭಟಿಸಿ ಮುರ್ಸಿ ಬೆಂಬಲಿಗರು ಹಿಂಸಾತ್ಮಕ ಪ್ರತಿಭಟನೆ ನಡೆಸಿದ್ದರು. 2013 ಆಗಸ್ಟ್‌ನಲ್ಲಿ ನಡೆದ ಪ್ರತಿಭಟನೆಯನ್ನು ಚದುರಿಸಲು ಭದ್ರತಾ ಪಡೆಗಳು ನಡೆಸಿದ ಕಾರ್ಯಾಚರಣೆಯಲ್ಲಿ ಕನಿಷ್ಠ 600 ಮಂದಿ ಮೃತಪಟ್ಟಿದ್ದರು. **(ವಾರ್ತಾ ಭಾರತಿ 9–9–2018)**

ಓದಿದ್ದು

## ಅಲ್ಪಸಂಖ್ಯಾತರನ್ನು ಸಮಾನತೆ, ಘನತೆಯಿಂದ ನಡೆಸಿಕೊಳ್ಳಿ

### ನೂತನ ಪಾಕ್ ಸರಕಾರಕ್ಕೆ ಅಮೆರಿಕ ಸಂಸದರ ಒತ್ತಾಯ

**ವಾಶಿಂಗ್ಟನ್,** ಸೆ. 7: ತನ್ನ ಜನಾಂಗೀಯ ಮತ್ತು ಧಾರ್ಮಿಕ ಅಲ್ಪಸಂಖ್ಯಾತರನ್ನು ಸಮಾನತೆ ಮತ್ತು ಘನತೆಯಿಂದ ನಡೆಸಿಕೊಳ್ಳುವಂತೆ ಅಮೆರಿಕದ ಹಲವು ಸಂಸದರು ಪಾಕಿಸ್ತಾನದ ನೂತನ ಸರಕಾರವನ್ನು ಒತ್ತಾಯಿಸಿದ್ದಾರೆ.

ಸೌತ್ ಏಶ್ಯ ಮೈನಾರಿಟೀಸ್ ಅಲಯನ್ಸ್ ಫೌಂಡೇಶನ್ (ಎಸ್‌ಎಎಂಎಎಫ್) ಮತ್ತು ವಾಯ್ಸ್ ಆಫ್ ಕರಾಚಿ (ವಿಒಕೆ) ಬುಧವಾರ ಇಲ್ಲಿ ಏರ್ಪಡಿಸಿದ 'ದ ಮೈನಾರಿಟೀಸ್ ಡೇ ಆನ್ ದ ಹಿಲ್' ಕಾರ್ಯಕ್ರಮದಲ್ಲಿ ಮಾತನಾಡಿದ ಸಂಸದರು, ಕರಾಚಿ, ಬಲೂಚಿಸ್ತಾನ ಮತ್ತು ಖೈಬರ್ ಪಖ್ತೂನ್‌ಖ್ವ ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ಅಲ್ಪಸಂಖ್ಯಾತರ ವಿರುದ್ಧ ನಡೆಯುತ್ತಿರುವ ಮಾನವಹಕ್ಕು ಉಲ್ಲಂಘನೆಗಳನ್ನು ನಿಲ್ಲಿಸುವಂತೆ ಇಮ್ರಾನ್ ಖಾನ್ ಸರಕಾರವನ್ನು ಒತ್ತಾಯಿಸಿದರು. ಕಾರ್ಯಕ್ರಮದ ಆತಿಥೇಯನ ನೆಲೆಯಲ್ಲಿ ಮಾತನಾಡಿದ ಅಮೆರಿಕ ಸಂಸದ ಥಾಮಸ್ ಗ್ಯಾರೆಟ್ ಜೂನಿಯರ್, ಅಲ್ಪಸಂಖ್ಯಾತರನ್ನು ಗೌರವ ಮತ್ತು ಘನತೆಯಿಂದ ನಡೆಸಿಕೊಳ್ಳುವಂತೆ ಜಗತ್ತಿನ ಎಲ್ಲ ದೇಶಗಳಿಗೆ ಮನವಿ ಮಾಡಿದರು. "ನಾವು ಅಮೆರಿಕನ್ನರು ಎಲ್ಲ ಜನಾಂಗೀಯ ಮತ್ತು ಧಾರ್ಮಿಕ ಅಲ್ಪಸಂಖ್ಯಾತರನ್ನು ಎಲ್ಲ ಅಲ್ಪಸಂಖ್ಯಾತರನ್ನು ಸಮಾನವಾಗಿ ಕಾಣುತ್ತೇವೆ. ನಮ್ಮ ಮಿತ್ರರೂ ಹೀಗೆಯೇ ಮಾಡಬೇಕೆಂದು ನಾವು ಒತ್ತಾಯಿಸುತ್ತೇವೆ. ನಾವೆಲ್ಲರೂ ಜೊತೆಯಾಗಿ ಬದುಕಿ, ನಮ್ಮ ಧರ್ಮಗಳನ್ನು ಶಾಂತಿ ಮತ್ತು ಸೌಹಾರ್ದದಿಂದ ಅನುಸರಿಸಬಹುದಾಗಿದೆ. ಅಮೆರಿಕದಲ್ಲಿ ಈಗ ಈ ರೀತಿ ಇದೆ. ಆದರೆ, ಅದು ಎಲ್ಲೆಡೆಯೂ ಇರಬೇಕಾಗಿದೆ" ಎಂದು ಇನ್ನೋರ್ವ ಸಂಸದ ಸ್ಕಾಟ್ ಪೆರಿ ಹೇಳಿದರು.

**ಅಲ್ಪಸಂಖ್ಯಾತ ಸಮುದಾಯದ ಅರ್ಥಶಾಸ್ತ್ರಜ್ಞನಿಗೆ ಶಾಕ್**

**ಇಸ್ಲಾಮಾಬಾದ್,** ಸೆ. 7: ತನ್ನ ಆರ್ಥಿಕ ಸಲಹಾ ಮಂಡಳಿಯ ಸದಸ್ಯರನ್ನಾಗಿ ಪ್ರಿನ್ಸ್‌ಟನ್ ವಿಶ್ವವಿದ್ಯಾನಿಲಯದ ಖ್ಯಾತ ಅರ್ಥಶಾಸ್ತ್ರಜ್ಞ ಆತಿಫ್ ಮಿಯಾನ್‌ರನ್ನು ನೇಮಿಸಿರುವುದನ್ನು ಪಾಕಿಸ್ತಾನದ ನೂತನ ಸರಕಾರ ರದ್ದುಪಡಿಸಿದೆ ಎಂದು ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದರು.

ಅಹ್ಮದಿ ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ವ್ಯಕ್ತಿಯೊಬ್ಬರನ್ನು ಸರಕಾರದ ಉನ್ನತ ಮಂಡಳಿಗೆ ನೇಮಿಸಿರುವುದಕ್ಕೆ ದೇಶದಲ್ಲಿ ಭಾರೀ ವಿರೋಧ ವ್ಯಕ್ತವಾಗಿರುವುದನ್ನು ಸ್ಮರಿಸಬಹುದಾಗಿದೆ.

ದೇಶವನ್ನು ತೀವ್ರ ಆರ್ಥಿಕ ಬಿಕ್ಕಟ್ಟಿನಿಂದ ಪಾರು ಮಾಡಲು ಸಲಹೆಗಳನ್ನು ನೀಡುವುದಕ್ಕಾಗಿ ಪ್ರಧಾನಿ ಇಮ್ರಾನ್ ಖಾನ್ 18 ಸದಸ್ಯರ ಆರ್ಥಿಕ ಸಲಹಾ ಮಂಡಳಿಯನ್ನು ಸ್ಥಾಪಿಸಿದ್ದರು.

43 ವರ್ಷದ ಮಿಯಾನ್‌ರನ್ನು ಜಗತ್ತಿನ ಶ್ರೇಷ್ಠ ಅರ್ಥಶಾಸ್ತ್ರಜ್ಞರ ಪೈಕಿ ಒಬ್ಬರು ಎಂಬುದಾಗಿ ಪರಿಗಣಿಸಲಾಗಿದೆ.

**(ವಾರ್ತಾ ಭಾರತಿ 8–9–2018)**

## ಆರ್ಥಿಕ ಸಲಹಾ ಮಂಡಳಿಗೆ ಇನ್ನೋರ್ವ ರಾಜೀನಾಮೆ

**ಇಸ್ಲಾಮಾಬಾದ್,** ಸೆ. 8: ಪಾಕಿಸ್ತಾನದ ನೂತನ ಸರಕಾರದ ಆರ್ಥಿಕ ಸಲಹಾ ಮಂಡಳಿಯಿಂದ ಅರ್ಥಶಾಸ್ತ್ರಜ್ಞ ಆತಿಫ್ ಆರ್. ಮಿಯಾನ್‌ರನ್ನು ಕೈಬಿಟ್ಟ ಬೆನ್ನಿಗೇ, ಇನ್ನೋರ್ವ ಸದಸ್ಯ, ಲಂಡನ್‌ನಲ್ಲಿ ನೆಲೆಸಿರುವ ಇಮ್ರಾನ್ ರಸೂಲ್ ಹೊರಬಂದಿದ್ದಾರೆ.

ಅಮೆರಿಕದಲ್ಲಿ ನೆಲೆಸಿರುವ ಆತಿಫ್ ಅಹ್ಮದಿ ಪಂಥದವರಾಗಿರುವ ಹಿನ್ನೆಲೆಯಲ್ಲಿ, ಅವರ ನೇಮಕಾತಿಗೆ ದೇಶಾದ್ಯಂತ ಆಕ್ರೋಶ ವ್ಯಕ್ತವಾಗಿತ್ತು. ಒತ್ತಡಕ್ಕೆ ಬಾಗಿದ ಇಮ್ರಾನ್ ಖಾನ್ ಸರಕಾರ ಅವರನ್ನು ಮಂಡಳಿಯಿಂದ ಕೈಬಿಟ್ಟಿತ್ತು. ಆತಿಫ್‌ರನ್ನು ಮಂಡಳಿಯಿಂದ ಕೈಬಿಟ್ಟಿರುವುದನ್ನು ವಿರೋಧಿಸಿ ರಸೂಲ್ ಈ ಕ್ರಮ ತೆಗೆದುಕೊಂಡಿದ್ದಾರೆ.

"ಭಾರವಾದ ಹೃದಯದೊಂದಿಗೆ ಮಂಡಳಿಗೆ ನಾನು ಇಂದು ಬೆಳಗ್ಗೆ ರಾಜೀನಾಮೆ ನೀಡಿದ್ದೇನೆ" ಎಂದು ಲಂಡನ್‌ನ ಯೂನಿವರ್ಸಿಟಿ ಕಾಲೇಜ್‌ನಲ್ಲಿ ಅರ್ಥಶಾಸ್ತ್ರದ ಪ್ರೊಫೆಸರ್ ಆಗಿರುವ ರಸೂಲ್ ಶನಿವಾರ ಟ್ವೀಟ್ ಮಾಡಿದ್ದಾರೆ.

**(ವಾರ್ತಾ ಭಾರತಿ 9–9–2018)**

## ಬೌದ್ಧ ಶಿಕ್ಷಕರಿಂದಲೂ ಲೈಂಗಿಕ ಕಿರುಕಳ

**ಹೇಗ್:** ಬೌದ್ಧ ಧರ್ಮದ ಶಿಕ್ಷಕರೂ ಲೈಂಗಿಕ ದೌರ್ಜನ್ಯ ಎಸಗುತ್ತಿದ್ದಾರೆ ಎಂದು ಬೌದ್ಧ ಧರ್ಮಗುರು ದಲೈಲಾಮ ಕಳವಳ ವ್ಯಕ್ತಪಡಿಸಿದ್ದಾರೆ. ನಾಲ್ಕು ದಿನಗಳ ನೆದರ್‌ಲ್ಯಾಂಡ್ ಪ್ರವಾಸದಲ್ಲಿರುವ ದಲೈಲಾಮಾ ಅವರು, ಬೌದ್ಧ ಧರ್ಮದ ಶಿಕ್ಷಕರಿಂದ ಲೈಂಗಿಕ ದೌರ್ಜನ್ಯಕ್ಕೊಳಗಾದ ಸಂತ್ರಸ್ತೆಯರನ್ನು ಭೇಟಿಯಾದರು. ಬಳಿಕ ಡಚ್ ಸುದ್ದಿವಾಹಿನಿಯೊಂದರ ಸಂದರ್ಶನದಲ್ಲಿ, "1990ರ ದಶಕದಿಂದಲೇ ಬೌದ್ಧ ಧರ್ಮದ ಶಿಕ್ಷಕರಿಂದ ಲೈಂಗಿಕ ದೌರ್ಜನ್ಯದ ಬಗ್ಗೆ ತಿಳಿದಿದ್ದೇನೆ. ಅಂತಹ ಆರೋಪಗಳು ಹೊಸದೇನಲ್ಲ" ಎಂದು ಪ್ರತಿಕ್ರಿಯಿಸಿದರು.

"ಹಿಮಾಚಲ ಪ್ರದೇಶದ ಧರ್ಮ ಶಾಲಾದಲ್ಲಿ 25 ವರ್ಷಗಳ ಹಿಂದೆ ನಡೆದ ಬೌದ್ಧ ಧರ್ಮ ಸಮ್ಮೇಳನದಲ್ಲಿ ಕೆಲವರು ಬೌದ್ಧ ಧರ್ಮದ ಶಿಕ್ಷಕರಿಂದ ನಡೆದ ಲೈಂಗಿಕ ಶೋಷಣೆ ಕುರಿತು ಪ್ರಸ್ತಾಪಿಸಿದ್ದರು. ಲೈಂಗಿಕ ಕಿರುಕುಳ ನೀಡುವವರು ಬುದ್ಧನ ಬೋಧನೆಯ ಬಗ್ಗೆ ಚಿಂತೆ ಮಾಡುವುದಿಲ್ಲ" ಎಂದು ವಿಷಾದಿಸಿದರು.

**(ವಿಜಯ ಕರ್ನಾಟಕ 17–9–2018)**

## ಪಾಕಿಸ್ಥಾನದ ಪ್ರಧಾನ ಮಂತ್ರಿ ಇಮ್ರಾನ್ ಖಾನರಿಗೆ ಒಂದು ಬಹಿರಂಗ ಪತ್ರ

ಬಹುಮಾನ್ಯರೇ,

ತಾವು ಪ್ರಧಾನಮಂತ್ರಿಯಾಗಿ ಚುನಾಯಿಸಲ್ಪಟ್ಟ ಬಗ್ಗೆ ಶುಭಾಶಂಸೆಗಳು. ಒಬ್ಬ ಪ್ರಸಿದ್ಧ ಕ್ರಿಕೆಟಿಗನೂ ಮಾನವತಾವಾದಿಯೂ ಆಗಿರುವ ತಾವು ನಮ್ಮ ನೆರೆಯ ದೇಶದಲ್ಲಿ ಪ್ರಧಾನಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಗ್ಗೆ ನಾವು ಸಂತೋಷಭರಿತರಾಗಿದ್ದೇವೆ. ಪಾಕಿಸ್ಥಾನ ನಿಮ್ಮ ಸಮರ್ಥ ನಾಯಕತ್ವದಲ್ಲಿ ಸುಖ ಸಮೃದ್ಧಭರಿತವಾಗಲಿ ಎಂದು ಪ್ರತೀಕ್ಷಿಸುತ್ತೇನೆ.

ಭಾರತದ ನಿವಾಸಿಗಳಾದ ನಾವು, ತಾವು ಚುನಾಯಿಸಲ್ಪಟ್ಟ ಬಗ್ಗೆ ಸಂತೋಷಭರಿತರಾದುದು, ತಾವು ತಮ್ಮ ಪೂರ್ವವರ್ತಿ ನಾಯಕರು ತುಳಿದ ಮಾರ್ಗದಲ್ಲಿ ಸಂಚರಿಸದೆ, ನಮ್ಮ ದೇಶದ ಪ್ರಧಾನಮಂತ್ರಿಯೊಂದಿಗೆ ಸೇರಿ ನಮ್ಮ ದೇಶಗಳ ಮಧ್ಯೆ ಇರುವ ಪುರಾತನ ಸಮಸ್ಯೆಗಳನ್ನು ಪರಿಹರಿಸುವ ಮಾರ್ಗವನ್ನು ಕಂಡುಹಿಡಿಯಲು ಸಹಕರಿಸುವಿರೆಂದೂ ಇನ್ನು ಮುಂದೆ ನಮ್ಮೆರಡು ದೇಶಗಳ ನಾಗರಿಕರು ಶಾಂತಿಯಿಂದ ಜೀವಿಸುವ ಪರಿಸರವನ್ನು ಸೃಷ್ಟಿಸುವಿರೆಂದೂ ನಾವು ಶುಭ ಪ್ರತೀಕ್ಷೆ ಹೊಂದಿದುದರಿಂದಾಗಿದೆ. ತಾವು ಹೇಳಿದ, 'ಭಾರತ ಶಾಂತಿ ಸ್ಥಾಪನೆಗೆ ಒಂದು ಹೆಜ್ಜೆ ಹಾಕಿದರೆ ನಾವು ಎರಡು ಹೆಜ್ಜೆ ಹಾಕುವೆವು' ಎಂಬ ವಾಗ್ದಾನವನ್ನು ನಮ್ಮ ದೇಶದ ಶಾಂತಿ ಪ್ರಿಯರಾದ ಎಲ್ಲ ಜನರು ಮೆಚ್ಚಿಕೊಂಡಿದ್ದಾರೆ. ನಮ್ಮೆರಡು ದೇಶಗಳು ಶಾಂತಿ ಸ್ಥಾಪನೆಗೆ ಮಾಡುವ ಎಲ್ಲ ಪ್ರಯತ್ನಗಳು ಫಲಕಾರಿಯಾಗಲಿ.

ನಾನು ತಮ್ಮ ಅವಗಾಹನೆಗೆ ಒಂದು ವಿಷಯವನ್ನು ತರಲು ಇಚ್ಛಿಸುತ್ತೇನೆ. ತಾವು ಪಾಕಿಸ್ಥಾನದ ಪ್ರಧಾನಮಂತ್ರಿಯೂ ನ್ಯಾಯನಿಷ್ಠರೂ ಆಗಿರುವ ಕಾರಣ ತಾವು ನಾನು ಪ್ರಸ್ತಾಪಿಸುವ ವಿಷಯದ ಕಡೆಗೆ ಲಕ್ಷ್ಯ ನೀಡುವಿರೆಂದು ನಾನು ಭರವಸೆ ಹೊಂದಿದ್ದೇನೆ. ನಾನು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸದಸ್ಯನೂ ಭಾರತದಲ್ಲಿ ಬೆಂಗಳೂರು ನಗರದ ನಿವಾಸಿಯೂ ಆಗಿದ್ದೇನೆ. ತಮಗೆ ತಿಳಿದ ಹಾಗೆ ಪಾಕಿಸ್ಥಾನದಲ್ಲಿ ಅಹ್ಮದಿಯರನ್ನು ದ್ವಿತೀಯ ಶ್ರೇಣಿಯ ನಾಗರಿಕರಾಗಿ ಪರಿಗಣಿಸಲಾಗುತ್ತಿದೆ. ತಮ್ಮ ಹಿಂದಿನ ಕಾಲದ ಆಡಳಿತೆಗಾರರು ಶಾಂತಿ ಪ್ರಿಯರಾದ ಅಹ್ಮದಿಯರ ವಿರುದ್ಧ ಶಕ್ತಿಶಾಲಿ ಮುಲ್ಲಾ ವರ್ಗ ಹರಡುತ್ತಿದ್ದ ದುಷ್ಟಪ್ರಬೋಧನೆಗಳ ವಿರುದ್ಧ ಕ್ರಮ ಜರಗಿಸಲು ಹೆದರುತ್ತಿದ್ದರು. ಪಾಕಿಸ್ಥಾನದಲ್ಲಿ ಅಹ್ಮದಿಯರ ಪೌರ ಹಕ್ಕುಗಳನ್ನು ಕಿತ್ತುಕೊಳ್ಳಲಾಗಿದೆ. ಅವರ ಮಸ್‌ಜಿದ್‌ಗಳನ್ನು ನಾಶಗೊಳಿಸಲಾಗಿದೆ. ಅವರನ್ನು ತಮ್ಮ ವಾಸ ಸ್ಥಳಗಳಿಂದ ಹೊರಹಾಕಲಾಗಿದೆ. ಅವರನ್ನು ಒಬ್ಬರ ನಂತರ ಇನ್ನೊಬ್ಬರ ಪ್ರಕಾರ ಉದ್ದೇಶಪೂರ್ವಕವಾಗಿ ಹತ್ಯೆ ಮಾಡಲಾಗುತ್ತಿದೆ. ಅಹ್ಮದಿಯರು ವಧಾರ್ಹರೆಂದು ಮುಲ್ಲಾಗಳು ನಿರ್ದಾಕ್ಷಿಣ್ಯವಾಗಿ ಫತ್ವ ನೀಡಿದ್ದಾರೆ. ತಾವು ಆಡಳಿತೆ ನಡೆಸುವ ದೇಶ ಹೀಗೆ ಆಗಲು ತಾವು ಬಿಡುವಿರೋ ಅಥವಾ ತಮ್ಮ ಖಾಯಿದೆ ಆಝಮ್ ಇಚ್ಛಿಸಿದ ಹಾಗೆ ಅಹ್ಮದಿಯರನ್ನು ಅಡ್ಡಿ ಆತಂಕಗಳಿಲ್ಲದೆ ಶಾಂತಿಯಿಂದ ಜೀವಿಸಲು ಅನುಮತಿಸುವಿರೋ ಎಂದು ತಿಳಿಸುವ ಕೃಪೆ ಮಾಡುವಿರಾ?

ತಾವು ಅಧಿಕಾರ ವಹಿಸುವಾಗ ಉಚ್ಚರಿಸಿದ ಪ್ರಮಾಣ ವಚನದಲ್ಲಿ ಇರುವ ಒಂದು ಮುಖ್ಯ ವಿಷಯದ ಕಡೆಗೆ ತಮ್ಮ ಗಮನ ಹರಿಸಲು ಬಯಸುತ್ತೇನೆ. ಮುಲ್ಲಾಗಳ ಪ್ರೇರೇಪಣೆಗಳ ಕಾರಣ ನಿಮ್ಮ ಸರಕಾರ ಪ್ರಮಾಣ ವಚನದಲ್ಲಿ ಖಾತಮುನ್ನಬಿಯ್ಯೀನ್ ಪದ ಬಳಸಲು ವಿಸ್ತೃತವಾಗಿ ಪ್ರಯತ್ನಿಸಿದೆ. ಅದರಲ್ಲಿ ಖಾತಮುನ್ನಬಿಯ್ಯೀನ್ ಪದದ ಅರ್ಥ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಕೊನೆಯ ಪ್ರವಾದಿ ಎಂದು ವಿಶದೀಕರಿಸಲಾಗಿದೆ. ಅದೇ ಪ್ರಮಾಣ ವಚನದಲ್ಲಿ ಪವಿತ್ರ ಖುರ್‌ಆನ್ ಬಗ್ಗೆ ಖಾತಮುಲ್ ಕುತುಬ್ ಎಂದು ಸಹ ಹೇಳಲಾಗಿದೆ. ಇದರ ಅರ್ಥ ಪವಿತ್ರ ಖುರ್‌ಆನ್ ಕೊನೆಯ ಗ್ರಂಥ ಎಂದೂ ಅದರ ನಂತರ ಯಾವ ಪುಸ್ತಕವೂ ಬರೆಯಲ್ಪಡಲಾರದು ಎಂದೂ ಮೇಲೆ ನೀಡಿದ ಅರ್ಥ ಪ್ರಕಾರ ಆಗುವುದಿಲ್ಲವೇ?

ಖಾತಮುಲ್ ಕುತುಬ್ ಎಂಬ ಪದಕ್ಕೆ ಅತ್ಯಂತ ಶ್ರೇಷ್ಠ ಗ್ರಂಥ (ಖಾತಮ್) ಎಂದು ಅರ್ಥ ನೀಡಬಹುದಾದರೆ ಇದೇ ಅರ್ಥವನ್ನು ಖಾತಮುನ್ನಬಿಯ್ಯೀನ್ ಎಂಬ ಪದಕ್ಕೆ ಮುಲ್ಲಾಗಳು ಏಕೆ ನೀಡುವುದಿಲ್ಲ? ಅಹ್ಮದಿಯರನ್ನು ಆಕ್ರಮಿಸಲು ಈ ದ್ವಿಮುಖ ಧೋರಣೆ ಏಕೆ?

ಈ ವಿಷಯಕ್ಕೆ ಸಂಬಂಧಿಸಿ ನಾನು ತಮ್ಮ ಅವಗಾಹನೆಗೆ ತರಲು ಬಯಸುವುದೇನೆಂದರೆ, ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಅವರು ತಾನು ಹಝ್ರತ್ ಮುಹಮ್ಮದ್ ಪೈಗಂಬರರಿಗೆ[ಸ] ಅಧೀನನಾದ ಉಮ್ಮತಿ ನಬಿ ಎಂದು ಮಾತ್ರ ವಾದಿಸಿದ್ದಾರೆ. ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಕೊನೆಯ ಪ್ರವಾದಿ ಎಂದು ಪವಿತ್ರ ಖುರ್‌ಆನಿನಲ್ಲಿ ಎಲ್ಲಿಯೂ ಪ್ರಸ್ತಾಪಿಸಲ್ಪಟ್ಟಿಲ್ಲ. ಹಾಗಿದ್ದರೆ ಅದು ಬಹುತೇಕ ಮುಸ್ಲಿಮರು ನಂಬುತ್ತಿರುವ ಹಝುರತ್ ಈಸಾರ[ಅ] ಪುನರಾಗಮನಕ್ಕೆ ವ್ಯತಿರಿಕ್ತವಾಗುವುದಿಲ್ಲವೇ?

ಮುಸ್ಲಿಮರಲ್ಲಿ ಬಹುತೇಕ ಜನರು ಖಾತಮುನ್ನಬಿಯ್ಯೀನ್ ಎಂಬ ಪದದ ವಾಸ್ತವಿಕ ಅರ್ಥವನ್ನು ಮನವರಿಕೆ ಮಾಡಲು ಸಿದ್ಧರಾಗುವುದಿಲ್ಲ. ಏಕೆಂದರೆ ಪೀಳಿಗೆಗಳ ನಂತರ ಪೀಳಿಗೆಗಳಿಗೆ ಖಾತಮುನ್ನಬಿಯ್ಯೀನ್ ಪದದ ತಪ್ಪು ಅರ್ಥ ಕಲಿಸುತ್ತಾ ಬರಲಾಗಿದೆ. ಹಾಗೂ ಅಹ್ಮದಿಯರು ಈ ಪದದ ಸರಿಯಾದ ಅರ್ಥವನ್ನು ವಿವರಿಸಿಕೊಡಲಿಕ್ಕೋಸ್ಕರ ಅವರಿಗೆ ಸದವಕಾಶವನ್ನು ಮುಸ್ಲಿಮರು ನೀಡುವುದಿಲ್ಲ.

ಅಹ್ಮದಿಯರನ್ನು ತಮ್ಮ ವಿಶ್ವಾಸಗಳನ್ನು ವಿಶದೀಕರಿಸುವುದರಿಂದ ಪಾಕಿಸ್ಥಾನದಲ್ಲಿ ತಡೆಯಲಾಗಿದೆ ಮತ್ತು ಅವರ ಪ್ರಸಿದ್ಧೀಕರಣಗಳನ್ನು ನಿಷಿದ್ಧಗೊಳಿಸಲಾಗಿದೆ. ಅವರು ಸಾರ್ವಜನಿಕವಾಗಿ ಜಮಾಯಿಸಿ ತಮ್ಮ ನಿಲುವುಗಳನ್ನು ವಿಶದೀಕರಿಸುವುದರಿಂದಲೂ ತಡೆಯಲಾಗಿದೆ. ಹೀಗಿರುವಾಗ ಅಹ್ಮದಿಯರು ತಮ್ಮ ವಿಶ್ವಾಸಗಳನ್ನು ಜನಸಮಾನ್ಯರಿಗೆ ತಿಳಿಸುವುದಾದರೂ ಹೇಗೆ? ಹಾಗೇನಾದರೂ ಪಾಕಿಸ್ಥಾನದಲ್ಲಿ ಮಾಡಿದರೆ ಅವರಿಗೆ ಸೆರೆಮನೆ ವಾಸವೇ ಗತಿಯಲ್ಲವೇ?

ಅಹ್ಮದಿಯರು ನೈಜ ಮುಸ್ಲಿಮರೆಂದು ನಾನು ಒತ್ತಿ ಹೇಳಲು ಬಯಸುತ್ತೇನೆ. ಅವರು ಇಸ್ಲಾಮಿನ ಎಲ್ಲ ವಿಶ್ವಾಸಗಳನ್ನು ಹೊಂದಿದವರೂ ಎಲ್ಲ ಇಸ್ಲಾಮೀ ಕರ್ಮಗಳನ್ನು ನಿಷ್ಠೆಯಿಂದ ಅನುಷ್ಠಾನಕ್ಕೆ ತರುವವರೂ ಆಗಿದ್ದಾರೆಂದು ನಾನು ತಮ್ಮೊಂದಿಗೆ ಹೇಳಲು ಬಯಸುತ್ತೇನೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಅನೇಕ ಸಾರಿ ಹೀಗೆ ಹೇಳಿದ್ದಾರೆ: ಇಸ್ಲಾಮೀ ಕಲಿಮವನ್ನು ಉಚ್ಚರಿಸುವವನು ಮುಸ್ಲಿಮನಾಗಿದ್ದಾನೆ. ಮುಸ್ಲಿಮನನ್ನು ಕಾಫಿರ್ ಎಂದು ಕರೆಯುವವನು ಸ್ವತಃ ಕಾಫಿರ್ ಆಗಿದ್ದಾನೆ. ಆದುದರಿಂದ ನೈಜ ಮುಸ್ಲಿಮರಾದ ಅಹ್ಮದಿಯರನ್ನು ಅವರ ಸ್ವಂತ ದೇಶದಲ್ಲಿ ಹಿಂಸಾಚಾರಕ್ಕೆ ಗುರಿಪಡಿಸುವುದು ಗುರುತರವಾದ ಪಾಪಕೃತ್ಯವಾಗಿದೆ.

ತಾವು ಅಹ್ಮದಿಯರಿಗೆ ನ್ಯಾಯದಾನ ನೀಡಿ ಅವರು ಪಾಕಿಸ್ಥಾನದಲ್ಲಿ ನಿರ್ಭಯರಾಗಿ ಶಾಂತಿಯಿಂದ ಜೀವಿಸುವಂತೆ ತಮ್ಮ ಆಡಳಿತೆ ಕಾಲದಲ್ಲಿ ತಕ್ಕುದಾದ ಕ್ರಮಕೈಗೊಳ್ಳಬೇಕೆಂದು ನಾನು ಇನ್ನೊಮ್ಮೆ ತಮ್ಮೊಂದಿಗೆ ಅಪೇಕ್ಷಿಸುತ್ತೇನೆ.

ಶುಭಾಶಯಗಳೊಂದಿಗೆ

**ಕೆ.ಕೆ. ಬದ್ರುದ್ದೀನ್**

**ಬೆಂಗಳೂರು.**

♦ **ಜಿಕೆ**

ಆರೋಗ್ಯ

## ಮೆಂತೆ – ಆರೋಗ್ಯಕ್ಕೆ ಹಲವು ಲಾಭ

ಪ್ರತಿದಿನ ಅಡುಗೆ ಮನೆಯಲ್ಲಿ ಬಳಕೆಯಾಗುವ ಮೆಂತೆಯಲ್ಲಿ ಹೇರಳ ಔಷಧೀಯ ಗುಣಗಳಿವೆ. ಅರ್ಧ ಚಮಚ ಮೆಂತೆಯನ್ನು ಒಂದು ಲೋಟ ಉಗುರು ಬೆಚ್ಚಗಿನ ನೀರಿನಲ್ಲಿ ರಾತ್ರಿ ವೇಳೆ ನೆನೆಹಾಕಿ ಬೆಳಗ್ಗೆ ಖಾಲಿ ಹೊಟ್ಟೆಗೆ ಸೇವಿಸುವುದು ಆರೋಗ್ಯ ರಕ್ಷಣೆಯ ದೃಷ್ಟಿಯಲ್ಲಿ ಬಹಳಷ್ಟು ಪ್ರಯೋಜನಕಾರಿ.

* ಒಂದು ತಿಂಗಳ ಕಾಲ ಮೆಂತೆ ನೆನೆಸಿದ ನೀರನ್ನು ಕುಡಿದರೆ ಕಿಡ್ನಿಯಲ್ಲಿರುವ ಕಲ್ಲುಗಳನ್ನು ನಿರ್ಮೂಲನೆಮಾಡುವುದು.

* ನೆನೆಸಿದ ಮೆಂತೆಯನ್ನು ಸ್ವಲ್ಪ ತಿಂದು ನೆನೆಸಿದ ನೀರನ್ನು ಕುಡಿಯುವುದರಿಂದ ಹಸಿವು ಕಡಿಮೆಯಾಗುವುದು.

* ದೇಹದಲ್ಲಿರುವ ಕೆಟ್ಟ ಕೊಲೆಸ್ಟ್ರಾಲ್ ಅನ್ನು ತೆಗೆದು ಹಾಕಿ ತೂಕ ಕಳೆದುಕೊಳ್ಳಲು ಮೆಂತೆ ಸಹಕಾರಿ.

* ತಾಯಂದಿರಲ್ಲಿ ಎದೆ ಹಾಲು ಹೆಚ್ಚಿಸುತ್ತದೆ.

* ಸಂಧಿವಾತದ ನೋವು ನಿವಾರಿಸುವ ಶಕ್ತಿ ಮೆಂತೆ ನೀರಿಗಿದೆ.

* ಹೊಟ್ಟೆ ಉರಿ ಶಮನವಾಗಿ ಜೀರ್ಣಕ್ರಿಯೆ ಸರಾಗವಾಗುವುದು.

* ದೇಹದಲ್ಲಿರುವ ವಿಷಕಾರಕ ಅಂಶಗಳನ್ನು ಹೊರಹಾಕಿ, ಮಲಬದ್ಧತೆ ನಿವಾರಿಸುತ್ತದೆ.

* ಮಧುಮೇಹ ನಿಯಂತ್ರಣದಲ್ಲಿಡುವ ಶಕ್ತಿ ಮೆಂತೆಗಿದೆ.

* ಮೆಂತೆಯಲ್ಲಿರುವ ಗ್ಲಾಕ್ಟೊಮನ್ನನ್ ಮತ್ತು ಪೆಟಾಶಿಯಂ ಅಂಶಗಳು ರಕ್ತದೊತ್ತಡವನ್ನು ನಿಯಂತ್ರಿಸುತ್ತದೆ.

* ಗರ್ಭಪಾತದ ಸಾಧ್ಯತೆಯನ್ನು ಕಡಿಮೆಯಾಗುತ್ತದೆ. ಅಲ್ಲದೆ ಹೆರಿಗೆಯ ಅನಂತರದ ನೋವನ್ನು ಕಡಿಮೆ ಮಾಡುತ್ತದೆ.

* ಮಹಿಳೆಯರಲ್ಲಿ ಮುಟ್ಟಿನ ವೇಳೆ ಕಂಡು ಬರುವ ಹೊಟ್ಟೆ ನೋವು, ಬೆನ್ನು ನೋವು ಸಹಿತ ಎಲ್ಲ ಸಮಸ್ಯೆಗಳನ್ನು ನಿವಾರಿಸುತ್ತದೆ.

* ಫಿಟ್ ಮತ್ತು ಸ್ಟೈಲಿಶ್ ಆಗಿ ಕಾಣಿಸಿಕೊಳ್ಳಲು ಸಹಕಾರಿ.

* ಮೆಂತ್ಯ ಕಾಳನ್ನು ಪುಡಿಮಾಡಿ ಒಂದು ಚಮಚ ನಿಂಬೆ ರಸ ಮತ್ತು ಜೇನಿನೊಂದಿಗೆ ಮಿಶ್ರ ಮಾಡಿ ಸೇವಿಸಿದರೆ ಜ್ವರ, ಗಂಟಲು ಕೆರೆತ ಮತ್ತು ಕೆಮ್ಮು ಕಡಿಮೆಯಾಗುತ್ತದೆ.

* ಮೆಂತೆಯನ್ನು ಹುರಿದು ಪುಡಿ ಮಾಡಿ ಪ್ರತಿ ದಿನ ಬೆಳಗ್ಗೆ ಖಾಲಿ ಹೊಟ್ಟೆಗೆ ಒಂದು ಚಮಚದಷ್ಟು ಪುಡಿಯನ್ನು ನೀರಿನಲ್ಲಿ ಕದಡಿ ಇಲ್ಲವೇ ನೇರವಾಗಿ ಪಂಚಕಜ್ಜಾಯದಂತೆ ತಿಂದು ನೀರು ಕುಡಿದಲ್ಲಿ ವಾತದೋಷ ನಿವಾರಣೆಯಾಗುವುದು.

* ಆಮಶಂಕೆಯೆಂಬ ಭೇದಿಯಿಂದ ಬಳಲುವವರು ಮೆಂತೆಯನ್ನು ಹುರಿದು ಪುಡಿ ಮಾಡಿ, ಒಂದು ಕಪ್ ಮೊಸರಿಗೆ ಒಂದು ಚಮಚದಷ್ಟು ಮಿಶ್ರಣ ಮಾಡಿ ಕುಡಿದರೆ ಕಡಿಮೆಯಾಗುವುದು.

## ಸಂಪಾದಕರಿಗೆ ಪತ್ರ

ಬಹುಮಾನ್ಯ ಮುಹಮ್ಮದ್ ಯೂಸುಫ್ ಸಾಹಿಬ್,

ಅಸ್ಸಲಾಮು ಅಲೈಕುಂ ವ ರಹ್ಮತುಲ್ಲಾಹಿ ವಬರಕಾತುಹು.

ತ್ರೈಮಾಸಿಕ 'ಯುಗರಶ್ಮಿ' ಪತ್ರಿಕೆ ಮೂಲಕ ನೀವು ಉಂಟುಮಾಡುತ್ತಿರುವ ಧಾರ್ಮಿಕ ಜಾಗೃತಿ, ಬೃಹತ್ತಾದ ಸಂದೇಶ ಅನುಪಮವಾಗಿದೆ. ಅಲ್ಲಾಹು ತಮಗೆ ಆರೋಗ್ಯಮಯ ದೀರ್ಘ ಆಯುಸ್ಸನ್ನು ದಯಪಾಲಿಸುತ್ತಾ ಈ ಅನ್ಯೋನ ಸೇವೆಯು ನಿರ್ಬಾಧಿತವಾಗಿ ಮುಂದುವರಿಸುವಂತೆ ಕರುಣಿಸಲಿ – ಆಮೀನ್.

ನಿಮ್ಮ ಪ್ರತಿಕೆಗೆ ಸಹಾಯ ರೂಪವಾಗಿ ಕಿರು ಸಹಾಯ ಧನವನ್ನು ಸ್ವೀಕರಿಸಬೇಕಾಗಿ ವಿನಂತಿ. ಧನ್ಯವಾದಗಳು.

**– ಮುಹಮ್ಮದ್ ಇರ್ಫಾನ್.**

**ಖಾಇದ್, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಜಕ್ಕೂರು.**

## ಹಿಂದಿನ ಸಂಚಿಕೆಗಳನ್ನು ತಿರುವಿ ಹಾಕಿದಾಗ...... (ಡಿಸೆಂಬರ್ 1980ರ ಸಂಚಿಕೆಯಿಂದ)

ನಾನು ನಿಮ್ಮ "ಯುಗರಶ್ಮಿ" ಪತ್ರಿಕೆಯನ್ನು ಆಗಿಂದಾಗ್ಗೆ ಓದುತ್ತಿರುತ್ತೇನೆ. ನಿಮ್ಮ ಪತ್ರಿಕೆ ಚೆನ್ನಾಗಿದೆ. ಅಂದವಾದ, ತಪ್ಪಿಲ್ಲದ ಮುದ್ರಣಗಳಿಂದ ಕೂಡಿ, ಸುಲಭ ಶೈಲಿಯಲ್ಲಿ, ಅದರಲ್ಲಿ ಇಸ್ಲಾಂ ತತ್ವಗಳು ಎಲ್ಲರಿಗೂ ಅರ್ಥವಾಗುವಂತೆ ಸರಳವಾಗಿ ಬರುತ್ತಿದ್ದು ನಮಗೆ ಸುಲಭವಾಗಿ ತಿಳಿಯುವಂತಾಯಿತು......

**ಚಿಕ್ಕಮಗಳೂರು.** **– ಎ. ಎನ್. ಸ್ವಾಮಿ. ಸಾಹಿತಿ, ಪತ್ರಕರ್ತ.**

ತಾವು ಇಸ್ಲಾಂ ಧರ್ಮದ ಬಗ್ಗೆ ಹಲವಾರು ವಿಷಯಗಳನ್ನು ಕನ್ನಡದಲ್ಲಿ "ಯುಗರಶ್ಮಿ" ಪತ್ರಿಕೆಯ ಮುಖಾಂತರ ಪ್ರಚಾರಪಡಿಸಿ, ಉರ್ದು ಹಾಗೂ ಅರಬಿಯಲ್ಲಿರುವ ಇಸ್ಲಾಂ ಧರ್ಮದ ವಿಷಯಗಳನ್ನು ತಿಳಿಯದಿರುವ ಜನಾಂಗಕ್ಕೆಲ್ಲಾ ಉಪಕಾರ ಮಾಡಿದ್ದೀರಿ. ಜನರ ಮೂಢನಂಬಿಕೆ, ಅನ್ಯಾಯ, ಅತ್ಯಾಚಾರ, ನೀಚ ಪ್ರವೃತ್ತಿಗಳನ್ನು ತೊಡೆದು ಹಾಕಿ ನಿಜ ಮಾನವ ಜೀವನ ಸಾಗಿಸಲು ಸಹಾಯ ಮಾಡುತ್ತಿರುವ ನಿಮ್ಮ ಕಾರ್ಯವನ್ನು ಮನಸಾರೆ ಮೆಚ್ಚಿದ್ದೇನೆ......

**ಬೆಣ್ಣೆಹಳ್ಳಿ.** **– ಡಾ| ಬಿ.ಪಿ. ಯಮನೂರ್ ಸಾಹೇಬ್.**

ಮುಹಮ್ಮದ್ ಪೈಗಂಬರರ ಪವಿತ್ರ ತತ್ವಗಳನ್ನು ಹೊತ್ತು ತಂದ "ಯುಗರಶ್ಮಿ" ಧಾರ್ಮಿಕ ಪತ್ರಿಕೆಯನ್ನು ನೋಡಿ ನನಗೆ ಬಹಳ ಆನಂದವಾಯಿತು. ಕೇವಲ ಮತೀಯರ ಬಂಧನದಲ್ಲಿ ಸಿಲುಕಿದ ಪವಿತ್ರ ಗ್ರಂಥಗಳಲ್ಲಿಯ ತಿರುಳು ಸಾರ್ವಜನಿಕರಿಗೆ ತಿಳಿಯಪಡಿಸುವ ಮಹೋನ್ನತ ಕಾರ್ಯವನ್ನು ತಾವು ಕೈಗೊಂಡಿರುವುದು ನಿಜಕ್ಕೂ ಸಂತೋಷದ ಸಂಗತಿ......

**ಬೆಳ್ಳಾರಿ.** **– ಕೆ. ಬಿ. ಸಿದ್ದಲಿಂಗಪ್ಪ.**

"ಯುಗರಶ್ಮಿ" ತ್ರೈಮಾಸಿಕ ಓದುಗರಲ್ಲಿ ನಾನೂ ಒಬ್ಬ. ನಿಮ್ಮ ಪತ್ರಿಕೆಯ ಅಕ್ಟೋಬರ್ ಸಂಚಿಕೆಯಲ್ಲಿ ಮೂಡಿ ಬಂದ ಮುಕ್ತಿಮಾರ್ಗ, ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು, ಪ್ರವಾದಿತ್ವದ ಬಗ್ಗೆ ಅಲ್ಲಾಹನ ಕರಾರು ಮತ್ತು ಮೌದೂದಿ ವ್ಯಾಖ್ಯಾನ ಚೆನ್ನಾಗಿದೆ.

**ಇಂಡಿ.** **–ರಜನಿಕಾಂತ.**

ನಿಮ್ಮ "ಯುಗರಶ್ಮಿ" ಪತ್ರಿಕೆಯನ್ನು ಓದಿ ನನಗೆ ಬಹಳ ಸಂತೋಷವಾಗಿದೆ. ಅದರಲ್ಲಿ ಬರುವಂತಹ ಲೇಖನಗಳು ಜ್ಞಾನಪೂರ್ಣವಾಗಿವೆ.

**ಬಿಜಾಪುರ.** **– ಎಂ.ಐ ಸುಲ್ತಾನ್‌ಪುರ್.**

ತಮ್ಮ ಯುಗರಶ್ಮಿ ತ್ರೈಮಾಸಿಕವನ್ನು ನೋಡಿ ನಮಗೆ ತುಂಬಾ ಸಂತೋಷವಾಯಿತು. ಮಿರ್ಝಾ ಗುಲಾಂ ಅಹ್ಮದ್ ಅವರ ಜೀವನ ಚರಿತ್ರೆಯನ್ನು, ಅವರಿಗೆ ನುಬುವ್ವತ್ ಲಭಿಸಿದ ವಿವರವನ್ನು ಸಂಪೂರ್ಣವಾಗಿ ಪ್ರಕಟಿಸುವಿರೆಂದು ಆಶಿಸೋಣವೇ?

**ಊರು ಸೂಚಿಸಿಲ್ಲ.** **– ಉಸ್ಮಾನ್ ಮತ್ತು ಹನ್ನೆರಡು ಸಹೋದರರು.**

ತಮ್ಮ ಯುಗರಶ್ಮಿ ತ್ರೈಮಾಸಿಕದಲ್ಲಿನ ಪ್ರತಿಯೊಂದು ಲೇಖನವೂ ನನ್ನನ್ನು ಸಂತೋಷಗೊಳಿಸಿತು. ಅಹ್ಮದಿಯಾ ಸಂಘಟನೆಯ ಬಗ್ಗೆ ಧಾರ್ಮಿಕ ಸಂದೇಶವನ್ನು ಕನ್ನಡಿಗರಿಗೆ ಮುಟ್ಟಿಸುವ ಈ ಪುಣ್ಯ ಕಾರ್ಯದಲ್ಲಿ ತೊಡಗಿದ ತಮಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅವರ ಜೀವನ ಚರಿತ್ರೆಯನ್ನೂ, ಅವರು ಹುಟ್ಟಿದ ಊರು, ಅವರ ಬಾಲ್ಯದ ಸ್ಥಿತಿಗತಿ, ವಿದ್ಯಾಭ್ಯಾಸ, ಎಂಬಿತ್ಯಾದಿ ವಿಷಯಗಳನ್ನು ಮಾತ್ರವಲ್ಲ ಅವರಿಗೆ ಪ್ರವಾದಿತ್ವ ಲಭಿಸಿದ್ದು ಎಷ್ಟು ವಯಸ್ಸಿನಲ್ಲಿ ಎಂದೂ ಸಂಪೂರ್ಣವಾಗಿ ಯುಗರಶ್ಮಿಯಲ್ಲಿ ಪ್ರಕಟಿಸಬೇಕಾಗಿ ಕೇಳಿಕೊಳ್ಳುತ್ತೇವೆ.

**ಊರು ಸೂಚಿಸಿಲ್ಲ.** **– ಅಬೂಬಕ್ಕರ್.**

ಇತ್ತೀಚೆಗೆ ಹೊರ ಬರಲು ತೊಡಗಿದ ನಿಮ್ಮ "ಯುಗರಶ್ಮಿ" ಸಂಚಿಕೆಯು ನನ್ನನ್ನು ಅತ್ಯಂತ ಸಂತೋಷ ಗೊಳಿಸಿತು. ಅಹ್ಮದಿಯಾ ಸಂದೇಶವನ್ನು ಲೋಕದ ಜನತೆಗೆ ಮುಟ್ಟಿಸುವಲ್ಲಿ ಕನ್ನಡವಲ್ಲದ ಇತರ ಭಾಷೆಗಳಲ್ಲಿ ಎಷ್ಟೋ ಪತ್ರಿಕೆಗಳು ಹುಟ್ಟಿ ವರ್ಷಗಳು ಕಳೆದುವು. ಕನ್ನಡದಲ್ಲಿಯೂ ಅದು ಹುಟ್ಟಬೇಕಾಗಿದ್ದ ಕಾಲವು ಮೀರಿಹೋಗಿತ್ತು. ಆದರೆ ಆ ಕೊರತೆಯನ್ನು ನೀಗಿಸಲು ಹೊರಟ ಯುಗರಶ್ಮಿಗೆ ನನ್ನ ಮತ್ತು ನನ್ನ ಹಲವಾರು ಸ್ನೇಹಿತರ ಕೃತಜ್ಞತೆಗಳು. ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅವರ ಹೆಸರನ್ನು ಮಾತ್ರ ಕೇಳಿದ್ದಲ್ಲದೆ, ಅವರು ಎಲ್ಲಿ ಹುಟ್ಟಿದರು, ಎಲ್ಲಿ ಬೆಳೆದರು, ಅವರ ಆಗಮನದ ಉದ್ದೇಶವೇನು? ಎಂದು ತಿಳಿಯದ ಎಷ್ಟೋ ಕನ್ನಡ ಮುಸಲ್ಮಾನರಿದ್ದಾರೆ. ಅವರಿಗೆ ಅವರ ಸಂಪೂರ್ಣ ವಿವರವನ್ನೂ ಸಂದೇಶವನ್ನೂ ಮುಟ್ಟಿಸುವುದರಲ್ಲಿ "ಯುಗರಶ್ಮಿ"ಯು ಸಫಲವಾಗಲೆಂದು ಪ್ರಾರ್ಥಿಸುತ್ತೇವೆ.

**ಪೊಡಿಕೆತ್ತೂರು.** **–ಬಿ. ಎಂ. ಇಬ್ರಾಹಿಂ**



ಕೇರಳದಲ್ಲಿ ಜಲಪ್ರಳಯ ಪೀಡಿತರಿಗೆ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಅಂಗಸಂಸ್ಥೆ ಹ್ಯುಮಾನಿಟಿ ಫಸ್ಟ್ **(Humanity First)** ಸ್ವಯಂ ಸೇವಕರಿಂದ ನೆರವು.



ಕೇರಳದ ತ್ರಿಶ್ಶೂರಿನ ಚಾಲಕ್ಕುಡಿಯಲ್ಲಿ ಚರ್ಚನ್ನು ತೊಳೆದು ಶುದ್ಧೀಕರಿಸುತ್ತಿರುವ ಹ್ಯುಮಾನಿಟಿ ಫಸ್ಟ್ ಸ್ವಯಂ ಸೇವಕರು.




ಕೊಡಗಿನಲ್ಲಿ ನೆರೆಪೀಡಿತ ಸಂತ್ರಸ್ತರಿಗೆ ನೆರವು ನೀಡಿದ ಹ್ಯುಮಾನಿಟಿ ಫಸ್ಟ್ ಸ್ವಯಂ ಸೇವಕರು.



ಜಕ್ಕೂರಿನಲ್ಲಿ **13–8–2018**ರಂದು ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಹ್ಮದಿಯಾ ಯುವಜನ ಸಂಘ ಸ್ವಚ್ಛತಾ ಕಾರ್ಯವನ್ನು ನಡೆಸಿತು.




ಯಾದಗಿರಿಯಲ್ಲಿ ಅಹ್ಮದಿಯಾ ಮುಸ್ಲಿಮ್ ಸಂಘಟನೆ 24–6–2018 ರಂದು ಏರ್ಪಡಿಸಿದ "ಈದ್ ಮಿಲನ್" ಸಭೆ

Registered with the Registrar of Newspapers for India No. R.N. 27354/75
**Yugarashmi** Kannada Quarterly, **September - 2018.** Price : **Rs. 15/-**

# Ahmadiyya Muslim Community

Apps for mobile devises

Download free apps developed by Ahmadiyya Muslim Community for your iphone,ipode, and Android




**Quran**
Read the Holy Quran in easy Yassarnal Quran Font




**Conditions of Bai'at**
A pocket reference of Shara't-e-Bai'at in 7 languages



**Sermons**
Huzoor's Friday Sermons In 15 languages





**MTA**
Watch MTA Live, view Schedule and much more



**Ahmadiyya News**
Stay up to date with the Latest jama'at news

View these apps at
alislam.org/apps
or scan the QR code below




Edited and Published by Muhammad Yusuf on behalf of Jamath Ahmadiyya at 10-23-1008/1,
Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore